
# ಗೆಲಾಕ್ಸಿ ಎಕ್ಸ್‌ಪ್ರೆಸ್

ವಿಬಿಎಸ್



ಮಕ್ಕಳು ದೇವರ ದೊಡ್ಡತನವನ್ನು ಸಂಧಿಸುವ ಸ್ಥಳ!

# ನಿರ್ದೇಶಕರ ಕೈಪಿಡಿ




## ಗೆಲಾಕ್ಸಿ ಎಕ್ಸ್‌ಪ್ರೆಸ್ ವಿಬಿಎಸ್ ಕಾರ್ಯಕ್ರಮಕ್ಕೆ ಸ್ವಾಗತ!

ನಿಮ್ಮನ್ನು ‘ತೆಗೆದು ಕೊಂಡು ಹೋಗಲು’ ಎಲ್ಲವು ಸಿದ್ಧವಾಗಿವೆ ಮತ್ತು ಮಕ್ಕಳ ಜೀವನಗಳಲ್ಲಿ ಮಾರ್ಪಾಟನ್ನು ತೆಗೆದುಕೊಂಡು ಬರುವಂಥ ಒಂದು ಪ್ರತ್ಯೇಕವಾದ ಕಾರ್ಯಕ್ರಮವನ್ನು ನಿಮ್ಮ ಸಮುದಾಯದಲ್ಲಿ ಮತ್ತು ಸಭೆಯಲ್ಲಿ ಪ್ರಾರಂಭಿಸಿರಿ!

ಸ್ಪೇಸ್ ಷಟಲ್‌ನೊಳಗೆ ನಿಮ್ಮ ಸಭೆಯನ್ನು ಅಥವಾ ನಿಮ್ಮ ಪ್ರಾಂತ್ಯದ ಕ್ಲಬ್‌ನನ್ನು ರೂಪಾಂತರಿಸುವದರಲ್ಲಿ ಉಪಾಧ್ಯಾಯರು ತುಂಬಾ ಸಂತೋಷಪಡುವರು, ‘ಗೆಲಾಕ್ಸಿ ಎಕ್ಸ್‌ಪ್ರೆಸ್’ ದೇವರ ಅದ್ಭುತಗಳನ್ನು ವಿಸ್ಫೋಟನೆ ಗೊಳಿಸುವದಕ್ಕೆ ಪ್ರತೀ ದಿನ ಎಲ್ಲಾ ಗುಂಪನ್ನು ಅಂತರಿಕ್ಷದೊಳಗೆ ‘ತೆಗೆದುಕೊಂಡು ಹೋಗುತ್ತದೆ’. ಆ ಸ್ಪೇಸ್ ಷಿಪ್‌ನಲ್ಲಿ ಮಕ್ಕಳು ಹಾರಾಡುತ್ತಿರುವಂಥೆ ಇದ್ದು, ಆಸ್ಟೆರಾಯಿಡ್‌ಗಳನ್ನು ತಪ್ಪಿಸುಕೊಳ್ಳುತ್ತಾ ಆ ನೌಕೆ ಎಡಕ್ಕೆ ಬಲಕ್ಕೆ ತಿರುಗುತ್ತಿರುವಾಗ ಮಕ್ಕಳು ಕೂಡಾ ಆ ರೀತಿಯಲ್ಲಿ ಎಡಕ್ಕೂ ಬಲಕ್ಕೂ ಮಾಡುವಂಥೆ ಅವರು ಊಹಿಸಿಕೊಳ್ಳುವರು. ಅಲ್ಲಿರುವ ಆಡಿಯೋ ಟ್ರ್ಯಾಕ್‌ಗಳು ಟೇಕಾಫ್‌ಗೆ ಮತ್ತು ಲ್ಯಾಂಡಿಂಗ್‌ಗೆ ಬರುತ್ತಿರುವಾಗ ಮಕ್ಕಳ ಊಹೆಗಳನ್ನು ನಿಜವೆನ್ನುವಂಥೆ ಮಾಡುತ್ತವೆ. ಅದೇ ರೀತಿಯಲ್ಲಿ ಪ್ರತಿದಿನ ಕೇಪ್ಟನ್ ಜೊತೆಯಲ್ಲಿ ಮತ್ತು ತನ್ನ ಸಹಾಯಕ ರೋಬೋಟ್‌ನ ಜೊತೆಯಲ್ಲಿ ನಾಟಕಗಳು ಪ್ರದರ್ಶಿಸಲಾಗುವದು.

ಪ್ರತೀ ದಿನ ನೀವು ಮಕ್ಕಳನ್ನು ಯಾತ್ರೆಗಾಗಿ ಸ್ಪೇಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗುವಿರಿ, ಚಂದ್ರನ ಮೇಲೆಯಾಗಲಿ, ಒಂದು ನಕ್ಷತ್ರದ ಮೇಲೆಯಾಗಲಿ ಅಥವಾ ಇನ್ನೊಂದು ಗ್ರಹದ ಮೇಲೆಯಾಗಲಿ ಅವರು ಮೋಶೆಯ ಜೀವನದೊಳಗಿನಿಂದ ದೇವರ ಅದ್ಭುತ ವಿಷಯಗಳ ಕುರಿತಾಗಿ ಕಲಿತುಕೊಳ್ಳುವರು. ಸಂಗೀತದೊಂದಿಗೆ ಪ್ರತಿಯೊಬ್ಬರು ಹಾಡುವದಕ್ಕೆ ಸಂತೋಷಪಡುವರು, ಆ ಹಾಡುಗಳು ಸಂಪೂರ್ಣವಾದ ನಟನೆಯಿಂದ ಅವರು ಕಲಿತುಕೊಳ್ಳುವರು.

“ಸೇತುವೆ” ಮೇಲೆ ಸಮಯವಾದ ನಂತರ, ಅವರವರ ವಯಸ್ಸಿಗೆ ಸಂಬಂಧಪಟ್ಟಂತೆ ತಮ್ಮ ತರಗತಿಗಳಿಗೆ ಮಕ್ಕಳೆಲ್ಲರೂ ತಮ್ಮ ತರಗತಿಗಳಿಗೆ ಹೋಗುವರು ಮತ್ತು ಆ ಅಂತರಿಕ್ಷೆ ನೌಕೆಯ ಸುತ್ತಮುತ್ತ ತಿರುಗಾಡುವರು. ತಮ್ಮ ವಿದ್ಯಾರ್ಥಿ ಪುಸ್ತಕಗಳಲ್ಲಿ ಕೆಲಸ ಮಾಡುವ ಸ್ಥಳವಾದ ಕ್ಯಾಡೆಟ್ ತರಗತಿಗೆ ಅವರೆಲ್ಲರೂ ಹೋಗುವರು ಮತ್ತು ಅಲ್ಪಾಹಾರಕ್ಕಾಗಿ ಮೆಸ್ ಹಾಲ್‌ಗೆ ಹೋಗುವರು ಮತ್ತು ಪಾಠಕ್ಕೆ ಸಂಬಂಧಿತವಾದ ಅಂತರಿಕ್ಷೆಯ ಅನ್ವಯವನ್ನು ಕಲಿಯುವರು. ಈ ಚಿಕ್ಕ ಚಿಕ್ಕ ಗುಂಪುಗಳಲ್ಲಿ, ನಿಮ್ಮ ವಿದ್ಯಾರ್ಥಿಗಳು ಅಕ್ಕಪಕ್ಕದವರನ್ನು ಮತ್ತು ತಮ್ಮ ಉಪಾಧ್ಯಾಯರನ್ನು ಪರಿಚಯ ಮಾಡಿಕೊಳ್ಳುವರು, ಅದರಿಂದ ಇಡೀ ವರ್ಷವೆಲ್ಲಾ ಹೊಸ ಹೊಸ ಸ್ನೇಹ ಬಾಂಧವ್ಯಗಳನ್ನು ಬೆಳಸಿಕೊಳ್ಳುವರು.

ಕೆಲವು ವಿನೋದಭರಿತವಾದ ಅಂತರಿಕ್ಷೆಯ ಆಟಗಳಿಗಾಗಿ “ಸೇತುವೆಯ” ಮೇಲಕ್ಕೆ ಮಕ್ಕಳೆಲ್ಲರನ್ನು ಕರೆಯುವದು ತುಂಬಾ ಸುಲಭ. ‘ಗೆಲಾಕ್ಸಿ ಎಕ್ಸ್‌ಪ್ರೆಸ್’ ಹೊಸ ಸೀಡಿಯಿಂದ ಕೆಲವು ಹಾಡುಗಳೊಂದಿಗೆ, ಒಂದು ಪ್ರಾರ್ಥನೆಯೊಂದಿಗೆ ಆ ದಿನವನ್ನು ಮುಕ್ತಾಯಗೊಳಿಸಿರಿ ಮತ್ತು ನಾಳೆಯ ವಿಬಿಎಸ್‌ಗೆ ಬರುವಂಥೆ ಮಕ್ಕಳನ್ನು ಆಹ್ವಾನಿಸುವದನ್ನು ಮಾತ್ರ ಮರೆಯಬೇಡಿರಿ!

**ಈ ವೆಕೇಷನ್ ಬೈಬಲ್ ಸ್ಕೂಲಲ್ಲಿ ನೀವು ಹೆಚ್ಚಾದ ಆನಂದವನ್ನು ಪಡೆಯುತ್ತೀರೆಂದು ನನ್ನ ನಿರೀಕ್ಷೆ... ಇದರೊಳಗೆ ನಿಮ್ಮ ಸೃಜನಾತ್ಮಕತೆಯನ್ನು ತುಂಬಾ ಹೆಚ್ಚಾಗಿ ಬಳಸುವಿರೆಂದು ನನಗೆ ಗೊತ್ತು ಮತ್ತು “ಈ ಪ್ರಪಂಚಕ್ಕೆ ಅತೀತವಾಗಿ” ಇದನ್ನು ಮಾಡತೊಡಗಿರಿ!**

**ಸಹೋದರಿ ಕ್ರಿಸ್ಟಿನಾ ಕ್ರಾಸ್ಸ್**



www.ChildrenAreImportant.com – Children's ministry resources, Sunday School, and Vacation Bible School (VBS) curriculum for churches and teachers. Kannada

# ಪರಿವಿಡಿ


| | |
|---|---|
| ಉಪೋದ್ಘಾತ | 1 |
| ಅಭಿನಂದನೆಗಳು | 2 |
| ಪಕ್ಷಿನೋಟ | 3 |
| ಈ ಪುಸ್ತಕವನ್ನು ಯಾವ ರೀತಿ ಉಪಯೋಗಿಸಕೊಳ್ಳಬೇಕು | 5 |
| ಇನ್ನಿತರ ಆಲೋಚನೆಗಳು | 9 |
| ಪಾಠ 1 | 11 |
| ಪಾಠ 2 | 14 |
| ಪಾಠ 3 | 17 |
| ಪಾಠ 4 | 20 |
| ಪಾಠ 5 | 23 |
| ಹಾಡುಗಳು | 26 |
| ಜೆರಾಕ್ಸ್ ಮಾಡಿಕೊಳ್ಳುವದಕ್ಕೆ ಇಟ್ಟಿರುವ ಸಂಪನ್ಮೂಲಗಳು | 30 |
| ಸಂಪೂರ್ಣ ಕಾರ್ಯಕ್ರಮ ಆನ್‌ಲೈನ್‌ನಲ್ಲಿ ಉಚಿತ | 33 |


## ಮಕ್ಕಳೇ ಪ್ರಮುಖರು

www.ChildrenAreImportant.com


ಈ ಮಾಹಿತಿಯನ್ನೆಲ್ಲಾ "ಗೆಲಾಕ್ಸಿ ಎಕ್ಸ್‌ಪ್ರೆಸ್" "ಮಕ್ಕಳೇ ಪ್ರಮುಖರು" ಎನ್ನುವ ಸಂಸ್ಥೆಯವರು ಬರೆದಿರುತ್ತಾರೆ ಮತ್ತು ಸರ್ವ ಹಕ್ಕುಗಳು ನಮ್ಮವೆಯಾಗಿರುತ್ತವೆ. ನಮ್ಮ ಈ ಮಾಹಿತಿಯನ್ನು ಡೌನ್‌ಲೋಡ್ ಮಾಡಿಕೊಳ್ಳುವದಕ್ಕೂ, ಉಪಯೋಗಿಸಿಕೊಳ್ಳುವದಕ್ಕೂ, ಮುದ್ರಿಸಿಕೊಳ್ಳುವದಕ್ಕೂ ಮತ್ತು ಯಾವ ನಿರ್ಬಂಧಗಳಿಲ್ಲದೇ ಎಲ್ಲಾ ಸಂಸ್ಥೆಗಳಿಗೆ ಮತ್ತು ಸಭೆಗಳಿಗೆ ಹಂಚುವದಕ್ಕೂ ಉಚಿತವಾಗಿ ಕೊಡಲ್ಪಟ್ಟಿದೆ. ನೀವು ಅನೇಕ ಜೀವನಗಳನ್ನು ಮಾರ್ಪಾಟು ಮಾಡುವದಕ್ಕೆ ಇಲ್ಲಿದ್ದೀರಿ; ನಿಮಗೆ ಸಹಾಯ ಮಾಡುವದಕ್ಕೆ ನಾವು ಇಲ್ಲಿದ್ದೇವೆ.ಹೆಚ್ಚಿನ ಮಾಹಿತಿಗಾಗಿ, ನಮ್ಮನ್ನು ಸಂಪರ್ಕಿಸಿರಿ :



info@ChildrenAreImportant.com
ಅಥವಾ 52-592-924-9041


ಇದರೊಳಗಿನ ಎಲ್ಲಾ ವಾಕ್ಯಭಾಗಗಳನ್ನು ಎನ್‌ಐವಿ ಎನ್ನುವ ಆಂಗ್ಲ ಬೈಬಲ್‌ನಿಂದ ತೆಗೆದು ಉಪಯೋಗಿಸಲಾಗಿದೆ. ಮತ್ತು ಇದನ್ನು ಕನ್ನಡ ಭಾಷಯೊಳಗೆ ಅನುವಾದ ಮಾಡಿರುವದರಿಂದ ಕನ್ನಡ ಬೈಬಲ್‌ನ್ನು ಉಪಯೋಗಿಸಲಾಗಿದೆ.


ಇದರಲ್ಲಿ ಕೆಲಸ ಮಾಡಿದ ಗುಂಪಿನಲ್ಲಿರುವ ಪ್ರತಿಯೊಬ್ಬರಿಗೂ ನಮ್ಮ ವಂದನೆಗಳು!ಎಡಿಟರ್ : ಕ್ರಿಸ್ಟಿನಾ ಕ್ರಾಸ್ ಸೃಜನಾತ್ಮಕವಾದ ಗುಂಪು: ಡ್ವೈಟ್ ಕ್ರಾಸ್, ಮೈಕ್ ಕಂಗಾಸ್, ಸುಕಿ ಕಂಗಾಸ್ ಮತ್ತು ವಿಕ್ಕೀ ಕಂಗಾಸ್.



www.ChildrenAreImportant.com
info@childrenareimportant.com
We are located in Mexico.

# ನಾವಿಗೇಷನ್ ಪ್ಯಾನೆಲ್

ಸಾಧಾರಣವಾದ ನೋಟ
















| | | |
|---|---|---|
| ದೇವರನ್ನು ಕರೆ!<br>ಮೋಶೆಯ ಜನನ<br>ದೇವರು<br>**ಉನ್ನತನು** | ಈ ಪಾಠವು ನಡೆಯುತ್ತಿರುವಾಗಲೇ, ಪ್ರತಿಸಾರಿ ವಿದ್ಯಾರ್ಥಿಗಳೆಲ್ಲರು "ದೇವರಿಗೆ ಕರೆ" ಎಂದು ಕೇಳಬೇಕು, ಅದಕ್ಕೆ ಅವರೆಲ್ಲರೂ "ಕರ್ತನೇ, ನನಗೆ ಸಹಾಯ ಮಾಡು!" ಎಂದು ಜಗಿಯುತ್ತಾ, ಅವರ ಎರಡು ಕೈಗಳನ್ನು ದೇವರ ಕಡೆಗೆ ಚಾಚಿ ಹೇಳಬೇಕು. | "ನಾನು ಯೆಹೋವನಿಗೆ ಮೊರೆಯಿಡುವಾಗ ಆತನು ತನ್ನ ಪರಿಶುದ್ಧ ಪರ್ವತದಿಂದ ಸದುತ್ತರವನ್ನು ಅನುಗ್ರಹಿಸುತ್ತಾನೆ." – ಕೀರ್ತ.3:4 |
| ದೇವರಿಗೆ ಸ್ಪಂದಿಸು!<br>ಮೋಶೆ ಮತ್ತು ಉರಿಯುತ್ತಿರು ಪೊದೆ<br>ದೇವರು<br>**ಅದ್ಭುತಕರನು** | ಈ ಪಾಠವು ನಡೆಯುತ್ತಿರುವಾಗ, ಪ್ರತೀಸಾರಿ ವಿದ್ಯಾರ್ಥಿಗಳು "ದೇವರಿಗೆ ಸ್ಪಂದಿಸು" ಎಂದು ಕೇಳಬೇಕು, ಅದಕ್ಕೆ ಅವರೆಲ್ಲರೂ "ಹೌದು, ಕರ್ತನೇ" ಎಂದು ತಮ್ಮ ಕೈಗಳನ್ನು ತಮ್ಮ ಕಿವಿಗಳ ಹತ್ತಿರ ಇಟ್ಟುಕೊಂಡು ಹೇಳಬೇಕು (ಕೇಳುತ್ತಿರುವ ಅಭಿನಯ). ಆದನಂತರ, "ನಾನು ಇಲ್ಲಿದ್ದೇನೆ!" ಎಂದು ಹೇಳುವಾಗ ಅವರ ಎರಡು ಕಾಲುಗಳನ್ನು ಸೈನಿಕನಂಥೆ ಹತ್ತಿರವಿಟ್ಟುಕೊಳ್ಳಬೇಕು. | "ಆಗ, ಯಾವನನ್ನು ಕಳುಹಿಸಲಿ, ಯಾವನು ನಮಗೋಸ್ಕರ ಹೋಗುವನು ಎಂಬ ಕರ್ತನ ನುಡಿಯನ್ನು ಕೇಳಿ, ಇಗೋ, ನಾನಿದ್ದೇನೆ, ನನ್ನ ನ್ನು ಕಳುಹಿಸು ಅಂದೆನು." – ಯೆಶಾ.6:8. |
| ದೇವರಿಗೆ ವಿಧೇಯನಾಗು!<br>ಐಗುಪ್ತ್ಯದಲ್ಲಿ ಮಾರಿರೋಗಗಳು<br>ದೇವರು<br>**ಆಶ್ಚರ್ಯಕರನು** | ಪಾಠ ನಡೆಯುತ್ತಿರುವಾಗ "ದೇವರಿಗೆ ವಿಧೇಯನಾಗು" ಎಂದು ಕೇಳಿದ ಪ್ರತಿಸಲ ವಿದ್ಯಾರ್ಥಿಗಳು "ನಾನು ಸಾಗುತ್ತಿರುವೆನು" ಎಂದು ಹೇಳಿ ಎದ್ದು ನಿಂತು, ಅವರವರ ಸ್ಥಾನಗಳನ್ನು ಬೇರೆ ವಿದ್ಯಾರ್ಥಿಗಳೊಂದಿಗೆ ಬದಲಿಸಿಕೊಳುತ್ತಾ ಇರಬೇಕು. | "ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವವನು ಆತನಲ್ಲಿ ನೆಲೆಗೊಂಡಿರುತ್ತಾನೆ, ಆತನು ಇವನಲ್ಲಿ ನೆಲೆಗೊಂಡಿರುತ್ತಾನೆ. ನಮ್ಮಲ್ಲಿ ನೆಲೆಗೊಂಡಿದ್ದಾನೆಂದು ಆತನು ನಮಗೆ ಅನುಗ್ರಹಿಸಿದ ಆತ್ಮನಿಂದಲೇ ಬಲ್ಲೆವು." – 1 ಯೋಹಾ.3:24. |
| ದೇವರಲ್ಲಿ ನಿರೀಕ್ಷಿಸು!<br>ಹಗಲು ಮೇಘ ಸ್ತಂಭ ಮತ್ತು ರಾತ್ರಿ ಅಗ್ನಿ ಸ್ತಂಭ<br>ದೇವರು<br>**ಮಹಿಮೆಯುಳ್ಳವನು** | ಈ ಪಾಠವು ನಡೆಯುತ್ತಿರುವಾಗಲೇ, ಪ್ರತಿಸಾರಿ ವಿದ್ಯಾರ್ಥಿಗಳೆಲ್ಲರು "ದೇವರಲ್ಲಿ ನಿರೀಕ್ಷಿಸು" ಎಂದು ಕೇಳಬೇಕು, ಅದಕ್ಕೆ ಅವರೆಲ್ಲರೂ "ನಾನು ಸಿದ್ಧವಾಗಿದ್ದೇನೆ" ಎಂದು ಜಗಿಯುತ್ತಾ, ಅವರ ಎರಡು ಕೈಗಳನ್ನು ಬಾಕ್ಸಿಂಗ್ ಆಡುವಂತೆ ತಮ್ಮ ಕೈಗಳನ್ನು ಆಡಿಸಿ ಹೇಳಬೇಕು, ಮತ್ತು ಒಬ್ಬರ ಕೈಗಳನ್ನು ಮತ್ತೊಬ್ಬರು ಹಿಡಿದುಕೊಂಡು ಕೆಳಗೆ ಕುಳಿತು "ಆದರೆ ನಾನು ಕಾದಿರ ಬೇಕು" ಎಂದು ಹೇಳಬೇಕು. | "ಯೆಹೋವನು ನ್ಯಾಯ ಸ್ವರೂಪನಾದ ದೇವರು; ಆತನಿಗಾಗಿ ಕಾದಿರುವವರೆಲ್ಲರೂ ಧನ್ಯರು." – ಯೆಶಾ.30:18. |
| ದೇವರನ್ನು ಆರಾಧಿಸು!<br>ಕೆಂಪು ಸಮುದ್ರವನ್ನು ದಾಟುವದು<br>ದೇವರು<br>**ಭಯಂಕರನು** | ಪಾಠದಲ್ಲಿ "ದೇವರನ್ನು ಆರಾಧಿಸು" ಎಂದು ಕೇಳಿದ ಪ್ರತಿಯೊಂದು ಬಾರಿ, ಮಕ್ಕಳು ಪ್ರತಿಕ್ರಿಯೆ ನೀಡಲು "ನಾನು ನಿನ್ನನ್ನೇ ಆರಾಧಿಸುವೆನು" ಎಂದು ಹೇಳಿ ಅವರ ಕೈಗಳನ್ನು ಆಕಾಶದ ಕಡೆಗೆ ಎತ್ತಿ ಆಕಡೆ ಮತ್ತು ಈಕಡೆ ಆಡಿಸಬೇಕು. | "ಯೆಹೋವನಿಗೆ ಸ್ತೋತ್ರ! ದೇವರನ್ನು ಆತನ ಪರಿಶುದ್ಧಾಲಯದಲ್ಲಿ ಸ್ತುತಿಸಿರಿ; ಆತನ ಶಕ್ತಿ ಪ್ರದರ್ಶಕವಾದ ಆಕಾಶಮಂಡಲದಲ್ಲಿ ಆತನನ್ನು ಸ್ತುತಿಸಿರಿ." – ಕೀರ್ತ.150:1. |



www.ChildrenAreImportant.com – Children's ministry resources, Sunday School, and Vacation Bible School (VBS) curriculum for churches and teachers. Kannada

| ಮೆಸ್ ಹಾಲ್ | ಕ್ಯಾಡೆಟ್ ತರಗತಿ | ಇಂಜಿನೀರಿಂಗ್ | ಅಂತರಿಕ್ಷದ ಆಟಗಳು |
| --- | --- | --- | --- |
| ರೋಬೋಟ್‌ಗಳು  ಟೆಲಿಸ್ಕೋಪ್‌ಗಳು |  | ಪೆಟ್ಟಿಗೆಯಲ್ಲಿ ಮೋಶೆ  | ಒಂದು ಪದವನ್ನು ಮಾಡಿ ತೋರಿಸಿರಿ<br>ರುಚಿ ಪರೀಕ್ಷೆ |
| ಮೋಶೆಯ ಉರಿಯುತ್ತಿರುವ ಪೊದೆ  ಅದ್ಭುತವಾದ ಅಳತೆ |  | ಉರಿಯುತ್ತಿರುವ ಪೊದೆ  | ಕುಡಿಯುವ ರಿಲೇ ಪಂದ್ಯ<br>ಬಾಳೆ ಹಣ್ಣು ತಿನ್ನುವ ಪಂದ್ಯ |
| ಮಾರಿ ರೋಗಗಳು (ಅಥವಾ ಉಪದ್ರವಗಳು)  ಚಲನೆ |  | ನಿಮ್ಮ ಕೆರಗಳನ್ನು ತೆಗೆದುಬಿಡಿ  | ವಿನೋದಾತ್ಮಕವಾದ ಶಬ್ದಗಳು<br>ತಲೆಗೆ ಅಂಟಿಸಿಕೊಳ್ಳುವದು |
| ಮೇಘ ಸ್ತಂಭಗಳು  ಅಂತರಿಕ್ಷ ನೌಕೆಗಳು |  | ಗೆಲಾಕ್ಸಿ ಎಕ್ಸ್‌ಪ್ರೆಸ್ ರಾಕೆಟ್  | ನೂಡಲ್ಸ್ ತಳ್ಳುವಿಕೆ<br>ಪಿರಾಮಿಡನ್ನು ಮಾಡುವುದು |
| ಒಣ ನೆಲದ ಮೇಲೆ ಸಮುದ್ರವನ್ನು ದಾಟುವುದು  ಸೂಪರ್‌ನೋವಾ |  | ಕೆಂಪು ಸಮುದ್ರವನ್ನು ದಾಟುವುದು  | ಗಡಿಬಿಡಿಯಾದ ಮಾರ್ಷ್‌ಮ್ಯಾಲೌ ಡ್ರಾಪ್<br>ಕೇಕ್ ರಿಲೇ |



www.ChildrenAreImportant.com – Children's ministry resources, Sunday School, and Vacation Bible School (VBS) curriculum for churches and teachers. Kannada

# ಈ ಕೈಪಿಡಿಯನ್ನು ಹೇಗೆ ಉಪಯೋಗಿಸಬೇಕು?

## ಸುಲಭಕರವಾದ ವಿಬಿಎಸ್

ನಿಮ್ಮ ಕೈಯಲ್ಲಿರುವ ವಿಬಿಎಸ್ ತುಂಬಾ ಸುಲಭಕರವಾದದ್ದು, ಪ್ರಣಾಳಿಕೆಯನ್ನು ಹಾಕುವದಕ್ಕೂ ತುಂಬಾ ಸುಲಭ ಮತ್ತು ಮಾಡುವದಕ್ಕೂ ಕೂಡ ಇದು ತುಂಬಾ ಸುಲಭಕರವಾದದ್ದು. ಒಂದು ತಾರೀಖನ್ನು ನಿರ್ಣಯಿಸಿಕೊಳ್ಳಿರಿ, ಕೆಲವು ಸಹಾಯಕರನ್ನು ಆಯ್ಕೆ ಮಾಡಿಕೊಳ್ಳಿರಿ, ನಿಮ್ಮ ಸ್ಥಳದ ಸುತ್ತಮುತ್ತ ಆಹ್ವಾನಿಸುವ ಪೋಸ್ಟರ್‌ಗಳನ್ನು ಅಂಟಿಸಿರಿ. ನೀವೀಗ ನಿಮ್ಮ ವಿಬಿಎಸ್ ಕಾರ್ಯಕ್ರಮವನ್ನು ನಡೆಸಿಕೊಳ್ಳಿರಿ!

ಕೆಲಸ ಮಾಡುವ ದೊಡ್ಡ ಗುಂಪಿನೊಂದಿಗೆ, ಎಲ್ಲರು ಇದರಲ್ಲಿ ಸೇರಿ, ಪಾಲ್ಗೊಂಡು ಕೆಲಸ ಮಾಡುವಾಗ ಇನ್ನೂ ವಿನೋದಾತ್ಮಕವಾಗಿ ಈ ವಿಬಿಎಸ್ ಇರುತ್ತದೆ, ಆದ್ದರಿಂದ, ಹೆಚ್ಚಿನ ಮಕ್ಕಳು ಸೇರಿ ಕೆಲಸ ಮಾಡುವಂಥೆ ಈ ಕೆಲಸವನ್ನು ಕೆಲವು ವಿವಿಧ ಭಾಗಗಳಾಗಿ ವಿಂಗಡಿಸಲಾಗಿದೆ.

ನಿಮ್ಮ ವಿಬಿಎಸ್ ಕಾರ್ಯಕ್ರಮದ ಕೆಲಸವನ್ನು ವಿಭಾಗಿಸಿಕೊಳ್ಳುವದಕ್ಕೆ ಇಲ್ಲಿ ನಿಮಗೆ ಕೆಲವು ಸಲಹೆಗಳುಂಟು :

ವಿಬಿಎಸ್ ನಿರ್ದೇಶಕರು ಒಬ್ಬರು
ಹಾಡುಗಳನ್ನು ನಡೆಸುವವರು ಒಬ್ಬರು
ಮುಖ್ಯ ಪಾಠಕ್ಕಾಗಿ ಪ್ರಸಂಗೀಕರು ಒಬ್ಬರು
ನಾಟಕಕ್ಕಾಗಿ ಇಬ್ಬರು ನಟರು (ಕೇಪ್ಟೆನ್ ಮತ್ತು ರೋಬೋ)
ತರಗತಿಯ ನಿರ್ವಾಹಕರು ಒಬ್ಬರು (ವಿದ್ಯಾರ್ಥಿ ಪುಸ್ತಕಗಳು ಮತ್ತು ಪಾಠಗಳನ್ನು ತಿರುಗಿ ಓದುಕೊಳ್ಳುವದಕ್ಕೆ)
ಹಸ್ತ ಕಲಾ ವಸ್ತುಗಳ ನಿರ್ವಾಹಕರು ಒಬ್ಬರು
ಅಲ್ಪಾಹಾರವನ್ನು ನಿರ್ವಹಿಸುವರು ಒಬ್ಬರು
ಆಟಗಳ ನಿರ್ವಹಿಸುವರು ಒಬ್ಬರು

ಪ್ರತೀ ಚಿಕ್ಕ ಗುಂಪಿಗಾಗಿ 6 ರಿಂದ 10 ನಾಯಕರು ಅಗತ್ಯವಾಗಿರುತ್ತಾರೆ, ಅದು ನಿಮ್ಮ ವಿಬಿಎಸ್‌ನಲ್ಲಿರುವ ಮಕ್ಕಳ ಸಂಖ್ಯೆಯ ಮೇಲೆ ಆಧಾರಪಟ್ಟಿರುತ್ತದೆ.

## ನಾಟಕಗಳು

ಪ್ರತೀ ದಿನ ಬಾಹ್ಯಾಕಾಶದ ನೌಕೆಯಾಗಿರುವ "ಗೆಲಾಕ್ಸಿ ಎಕ್ಸಪ್ರೆಸ್"ನೊಳಗೆ ಮಕ್ಕಳೆಲ್ಲರನ್ನು ಸೇರಿಸಿಕೊಂಡು, ತನ್ನ ಸಹಾಯಕನಾಗಿರುವ ರೋಬೋದೊಂದಿಗೆ ಕೆಪ್ಟೆನ್ ಸವಾರಿಗಾಗಿ ಕರೆದುಕೊಂಡು ಹೋಗುವನು. ನಿಮ್ಮ ಕೇಪ್ಟೆನ್ ತುಂಬಾ ಕೋಪದಿಂದ ಇರುತ್ತಾನೆ. ಯಾಕಂದರೆ ಆ ನೌಕೆಯ ವಿಷಯದಲ್ಲಿ ಆತನಿಗೆ ಹೆಚ್ಚಾದ ಬಾಧ್ಯತೆ ಇರುತ್ತದೆ. ಅದೇ ರೀತಿಯಾಗಿ ಆ ವಾರವೆಲ್ಲಾ ಆತ್ಮೀಯಕವಾದ ಪಾಠಗಳನ್ನು ಮಕ್ಕಳೆಲ್ಲರೂ ಕಲಿಯುವ ಸಾಮರ್ಥ್ಯವನ್ನು ಪಡೆಯುವರು. ಅಲ್ಲಿರುವ ಎಲ್ಲಾ ಪ್ರೇಕ್ಷಕರಿಗೆ ತನ್ನ ಸಹಾಯಕನಾದ ರೋಬೋನನ್ನು ಪರಿಚಯ ಮಾಡುವನು: ಒಂದು ತರ ವಿಕಾರವಾಗಿದ್ದು, ಕೆಲವುಸಲ ಸರಿಯಾಗಿ ಕೆಲಸ ಮಾಡದ ರೋಬೋಯಾಗಿ ಇರುತ್ತಾನೆ. ಕೆಲವುಸಲ ರೋಬೋ ಮಾತನಾಡುತ್ತಿರುವಾಗ ಮಾತುಗಳಿಗೆ ಬದಲಾಗಿ ಗೊಣುಗುತ್ತಾ, ದೊಡ್ಡ ದೊಡ್ಡ ಶಬ್ದಗಳನ್ನು ಮಾಡುತ್ತಾ ತನ್ನ ಮಾತುಗಳನ್ನು ಮುಕ್ತಾಯಗೊಳಿಸುವನು. ಈತನು ಮುಂದಕ್ಕೆ ಹೋಗುವದಕ್ಕೆ ಯಾವಾಗಲೂ ತನ್ನ ಕೀಲುಗಳಿಗೆ ಎಣ್ಣೆ ಬೇಕಾಗಿರುತ್ತದೆ.

ಪ್ರತಿ ದಿನ ಕೇಪ್ಟೆನ್ ಮತ್ತು ರೋಬೋಗಳು ಆ ದಿನದ ಮುಖ್ಯಾಂಶವನ್ನು ಪರಿಚಯ ಮಾಡುವರು ಮತ್ತು ಅದಕ್ಕೆ ಯಾವ ರೀತಿ ಸ್ಪಂದಿಸಬೇಕೆಂದು ತಿಳಿಸಿಕೊಡುವರು. ಮಕ್ಕಳೆಲ್ಲರೂ ತಮ್ಮ ಚಿಕ್ಕ ಚಿಕ್ಕ ಗುಂಪುಗಳಲ್ಲಿ ಕೇಳಿಸಿಕೊಳ್ಳುವಂಥೆ ಬಾಹ್ಯಾಕಾಶದ ಅನ್ವಯದ ಕುರಿತಾಗಿ ಕೇಪ್ಟೆನ್ ಪರಿಚಯ ಮಾಡುತ್ತಾನೆ.

ಪ್ರತಿ ದಿನ ವಿಬಿಎಸ್ ಆರಂಭವಾಗುವದಕ್ಕೋಸ್ಕರ ನಾಟಕದ ಆಲೋಚನೆಗಳು ಕೊಡಲ್ಪಟ್ಟಿವೆ, ಆದರೆ ನೀವು ಆ ದಿನವನ್ನು ಅವುಗಳೊಂದಿಗೆ ಮುಕ್ತಾಯಗೊಳಿಸಬಹುದು, ಅಥವಾ ಆಟದಲ್ಲಿ ಕೆಲವರು ಇರುವಂಥೆ ಮಾಡಿಕೊಳ್ಳಬಹುದು, ಅಥವಾ ತರಗತಿಗಳನ್ನು ಸಂದರ್ಶಿಸಲು ಸುತ್ತ ಮುತ್ತ ಹೋಗಬಹುದು. ಕೇಪ್ಟನ್ ಮತ್ತು ರೋಬೋಟ್‌ಗಳು ಬಂದು ಹೋಗುತ್ತಿರುವ ದೃಶ್ಯವನ್ನು ಕಾಣಲು ಮಕ್ಕಳೆಲ್ಲರೂ ಎಷ್ಟೋ ಸಂತೋಷಪಡುವರು.

## ನಟನೆಯಲ್ಲಿ ಜೀವಿಸಿರಿ!

ಪ್ರತಿ ದಿನ ವಿದ್ಯಾರ್ಥಿಗಳೆಲ್ಲರೂ ಆ ದಿನಕ್ಕಾಗಿ ಒಂದು ಪದವನ್ನು ಕಲಿತುಕೊಳ್ಳುವರು ಮತ್ತು ಅದಕ್ಕೆ ನಟನೆಯಲ್ಲಿ ಪ್ರತಿಸ್ಪಂದನೆ ಇರುತ್ತದೆ. ಈ ಚಟುವಟಿಕೆಯು ತುಂಬಾ ಪ್ರಾಮುಖ್ಯವಾದದ್ದು, ಆದ್ದರಿಂದ ನಿಮ್ಮ ಮಕ್ಕಳು ಮುಖ್ಯ ಪ್ರಸಂಗ ಸಮಯದಲ್ಲಿ ಬೇಸರಗೊಳ್ಳುವದಿಲ್ಲ. ಇದರಿಂದ ನಿಮ್ಮ ವಿಬಿಎಸ್ ಕಾರ್ಯಕ್ರಮವು ಒಂದು ಪ್ರತ್ಯೇಕವಾದ ಕಾರ್ಯಕ್ರಮವನ್ನಾಗಿ ಮಾಡುವದು. ನಿಮ್ಮ ವಿಬಿಎಸ್ ಕಾರ್ಯಕ್ರಮದಲ್ಲಿ, ನಾಯಕನು ಆ ದಿನದ ಮುಖ್ಯ ಪದವನ್ನು ಹೇಳಿದಾಗ, ಮಕ್ಕಳಿಗೆ ಅದಕ್ಕೆ ನಟನೆಯಲ್ಲಿ ಸ್ಪಂದಿಸುವ ವಿಧಾನ ತಿಳಿದರಬೇಕು, ಹೀಗೆ ಕಾರ್ಯಕ್ರಮವೆಲ್ಲಾ ನಡೆಯುತ್ತದೆ. ಅವರು ಇದನ್ನೆಲ್ಲಾ ಕೇಪ್ಟೆನ್ ಮತ್ತು ರೋಬೋರವರೊಂದಿಗೆ ನಾಟಕ ನಡೆಯುತ್ತಿರುವಾಗ ಕಲಿತುಕೊಳ್ಳುವರು. ಮತ್ತು ಉಳಿದ ದಿನವೆಲ್ಲಾ ನೀವು ಇದನ್ನು ನೋಡುವಿರಿ.

## ಸಂದೇಶ ವ್ಯವಸ್ಥೆ 1

### ದೇವರನ್ನು ಕರೆ!

ಈ ಪಾಠವು ನಡೆಯುತ್ತಿರುವಾಗಲೇ, ಪ್ರತಿಸಾರಿ ವಿದ್ಯಾರ್ಥಿಗಳೆಲ್ಲರು "ದೇವರಿಗೆ ಮೊರೆಯಿಡು" ಎಂದು ಕೇಳಬೇಕು, ಅದಕ್ಕೆ ಅವರೆಲ್ಲರೂ "ಕರ್ತನೇ, ನನಗೆ ಸಹಾಯ ಮಾಡು!" ಎಂದು ಜಿಗಿಯುತ್ತಾ, ಅವರ ಎರಡು ಕೈಗಳನ್ನು ದೇವರ ಕಡೆಗೆ ಚಾಚಿ ಹೇಳಬೇಕು.



www.ChildrenAreImportant.com – Children's ministry resources, Sunday School, and Vacation Bible School (VBS) curriculum for churches and teachers. Kannada

# ಕಾಲಾನುಕ್ರಮ

(2 1/2 ಗಂಟೆ ಕಾರ್ಯಕ್ರಮ)

ಸೇತುವೆ

**ವಿಸ್ಫೋಟನೆ!**

(ಹಾಡುಗಳು – 20 ನಿಮಿಷ
ಪ್ರಾರಂಭದ ನಾಟಕ – 10 ನಿಮಿಷ)

**ಮಿಷನ್ ಕಂಟ್ರೋಲ್‌ನಿಂದ ಅರ್ಜೆಂಟ್....**

(ಮುಖ್ಯ ಪಾಠ ಮತ್ತು ಕಂಠಪಾಠ – 20 ನಿಮಿಷ)

ಸ್ಟೇಷನ್‌ಗಳಿಗೆ...

ಮೆಸ್ ಹಾಲ್

(ಅಲ್ಪಾಹಾರ ಸ್ಟೇಷನ್ ಮತ್ತು ಬಾಹ್ಯಾಕಾಶದ ಅನ್ವಯಗಳು)

**ಸ್ಟೇಷನ್‌ಗಳ ಸರದಿ**
**20 ನಿಮಿಷ**

ಇಂಜಿನೀರಿಂಗ್

(ಹಸ್ತ ಕಲಾ ವಸ್ತುಗಳ ಸ್ಟೇಷನ್)

ಕ್ಯಾಡೆಟ್ ತರಗತಿ

(ವಿದ್ಯಾರ್ಥಿ ಪುಸ್ತಕ ಮತ್ತು ತಿರುಗಿ ಓದಿಕೊಳ್ಳುವ ಸ್ಟೇಷನ್)

... ಸೇತುವೆಗೆ ಹಿಂದುರಿಗಿ ಬರುವರು...

ಸೇತುವೆ

**ಬಾಹ್ಯಾಕಾಶದ ಆಟಗಳು**

(ಆಟಗಳು – 30 ನಿಮಿಷಗಳು)

**ಕ್ಯಾಡೆಟ್‌ಗಳು ಡಿಸ್ಮಿಸ್ ಆಯಿತು**

(ಮುಕ್ತಾಯಗೊಳಿಸುವ ಹಾಡು ಮತ್ತು ಪ್ರಕಟನೆಗಳು – 10 ನಿಮಿಷ)

## ಸ್ಟೇಷನ್‌ಗಳ ಸರದಿ

ಪ್ರತಿ ದಿನದ ಮಧ್ಯೆಯಲ್ಲಿ, ಮಕ್ಕಳೆಲ್ಲರೂ ಮೂರು ಗುಂಪುಗಳಾಗಿ ವಿಂಗಡಿಸಲ್ಪಡುವರು ಮತ್ತು ಸ್ಟೇಷನ್‌ಗಳೆಲ್ಲವುಗಳನ್ನು ಸುತ್ತಿ ಬರುತ್ತಾರೆ : ಅಲ್ಪಾಹಾರ ಕೊಠಡಿ (ಅಲ್ಪಾಹಾರ ಮತ್ತು ಬಾಹ್ಯಾಕಾಶದ ಅನ್ವಯ), ಇಂಜಿನೀರಿಂಗ್ (ಹಸ್ತ ಕಲಾ ಚಿತ್ರಗಳು) ಮತ್ತು ಕ್ಯಾಡೆಟ್ ತರಗತಿ (ವಿದ್ಯಾರ್ಥಿ ಪುಸ್ತಕಗಳು ಮತ್ತು ಪಾಠವನ್ನು ಪುನಃರ್ ಓದಿಕೊಳ್ಳುವದು). ಇನ್ನೊಂದು ಪುಟದಲ್ಲಿ ಈ ಸ್ಟೇಷನ್‌ಗಳ ಕುರಿತಾಗಿ ಹೆಚ್ಚಾದ ಮಾಹಿತಿಯನ್ನು ಓದಿರಿ.

## ಆಟಗಳು

ಈ ಕಾರ್ಯಕ್ರಮಕ್ಕಾಗಿ ಮಾಡಿದ ಈ ಆಟಗಳನ್ನೆಲ್ಲಾ ಒಂದು ದೊಡ್ಡ ಗುಂಪಿನೊಳಗೆ ಎಲ್ಲಾ ಮಕ್ಕಳು ಕುಳಿತುಕೊಂಡಾಗ ಮತ್ತು ಗುಂಪುಗಳಾಗಿ ಪ್ರತ್ಯೇಕಿಸಲ್ಪಟ್ಟಾಗ ಆಡಿಸಬೇಕಾಗಿರುತ್ತದೆ. (ನೀವು 2 ರಿಂದ 4 ಗುಂಪುಗಳಾಗಿ ವಿಂಗಡಿಸಬಹುದು). ಅತೀ ಸುಲಭಕರವಾದದ್ದೇನೆಂದರೆ, ಹುಡಿಗಿಯರ ಗುಂಪಿಗೆ ವಿರುದ್ಧವಾಗಿ ಹುಡುಗರ ಗುಂಪನ್ನು ನಿಲ್ಲಿಸಬಹುದು.
ಪ್ರತಿಯೊಂದು ಆಟಕ್ಕೂ, ತಮ್ಮ ತಂಡದ ಪರವಾಗಿ ಆಟ ಆಡಲು ತಮ್ಮ ತಂಡಗಳಿಂದ ಕೆಲವರನ್ನು ಕಳುಹಿಸಿಕೊಡುವರು, ಉಳಿದವರೆಲ್ಲರೂ ತಾವು ಕುಳಿತುಕೊಂಡ ಕುರ್ಚಿಗಳಿಂದ ನಗುತ್ತಾ, ಕಿರುಚುತ್ತಾ ತಮ್ಮ ತಂಡದವರನ್ನು ಉತ್ಸಾಹಪಡಿಸುವರು. ಇದರಿಂದ ಮಕ್ಕಳು ಬೇಸರಗೊಳ್ಳುವದಿಲ್ಲ, ಆಟ ಆಡಿದವರನ್ನು ಪಕ್ಕಕ್ಕೆ ಇಟ್ಟು, ಆಟ ಆಡದವರನ್ನು ಸೇರಿಸಿಕೊಳ್ಳುತ್ತಾ ಪ್ರತಿ ದಿನ ಅತೀ ಕಡಿಮೆ ಸಮಯದಲ್ಲಿ ವಿವಿಧವಾದ ಆಟಗಳನ್ನು ಆಡಿಸಿರಿ.
ಆಟಗಳಲ್ಲಿ ಮೊದಲ ಸಾಲಿನಲ್ಲಿರಲು ಭಾಗವಹಿಸುವ ವಿದ್ಯಾರ್ಥಿಗಳನ್ನು ಆರಿಸಿಕೊಳ್ಳುವದಕ್ಕೆ ಒಂದು ಆಲೋಚನೆ, ಅದೇನಂದರೆ, ನಿಮ್ಮ ವಿಬಿಎಸ್‌ನಲ್ಲಿ ಇತರ ಚಟುವಟಿಕೆಗಳಲ್ಲಿ ಚುರುಕುತನದಿಂದ ಇರುವ ವಿದ್ಯಾರ್ಥಿಗಳನ್ನು ನೋಡಿರಿ. ಈ ವಿದ್ಯಾರ್ಥಿಗಳು ಆಟ ಆಡುವಂಥ ಏನಾದರೊಂದನ್ನು ಮಾಡಿರಿ. ಅದು ಹೇಗೆಂದರೆ, ಅವರ ಕುತ್ತಿಗೆಗಳಿಗೆ ಯಾವುದಾದರೊಂದನ್ನು ಇಳಿ ಹಾಕಲು ಮಾಡಿರಿ, ಅವರ ಮಣಿಕಟ್ಟುಗಳಿಗೆ ಏನಾದರೊಂದನ್ನು ಕಟ್ಟಿರಿ, ಅಥವಾ ಅವರ ಜೇಬುಗಳಲ್ಲಿ ಒಂದು ಕಾರ್ಡನ್ನು ಹಾಕಿರಿ.
ಪ್ರತಿ ಆಟಕ್ಕಾಗಿ, ನಾವೆಷ್ಟು ಸಮಯವನ್ನು ಸಿದ್ಧಗೊಳಿಸಿದರೆ ಅಷ್ಟು ಚೆನ್ನಾಗಿ ಆಟಗಳು ಇರುತ್ತವೆ. ಈ ಆಟಗಳನ್ನೆಲ್ಲಾ ನೀವು ಸಿದ್ಧಗೊಳಿಸುವಾಗ, "ಗೇಮ್ ಷೋ" ಅಥವಾ "ನಿಕೆಲೋಡಿಯಾನ್" ಟಿವಿ ಕಾರ್ಯಕ್ರಮಗಳ ಕುರಿತಾಗಿ ಆಲೋಚನೆ ಮಾಡಿರಿ. ನಿಮ್ಮ ವಿದ್ಯಾರ್ಥಿಗಳನ್ನು ಮೊದಲ ಸಾಲಿನಲ್ಲಿ ನಿಲ್ಲಿಸಲು ನೀವು ಧೈರ್ಯವನ್ನು ಪಡೆದುಕೊಳ್ಳುವಿರಿ, ಆಟಗಳಿಗಾಗಿ ಸೌಂಡ್ ಎಫೆಕ್ಟ್ ಇಟ್ಟುಕೊಂಡು ಅಥವಾ ಮ್ಯೂಜಿಕ್ (ಸಂಗೀತ) ಇಟ್ಟುಕೊಂಡರೆ ಚೆನ್ನಾಗಿರುತ್ತದೆ.
(ಗೆಲಾಕ್ಸಿ ಎಕ್ಸ್‌ಪ್ರೆಸ್ ಸೀಡಿನಲ್ಲಿ ನೀವು ಆಟವಾಡಲು ನಿಮಗಾಗಿ ಆಟದ ಸಮಯ ಹಾಡನ್ನು ನಾವು ಕೊಟ್ಟಿರುತ್ತೇವೆ.)
ನಿಮ್ಮ ವಿಬಿಎಸ್‌ಗೆ ನಿಜವಾಗಿ ವಿನೋದ ವಾತಾವರಣವನ್ನು ತರುವದಕ್ಕೆ ಅತೀ ಕಡಿಮೆ ಬೆಲೆಯ ವಸ್ತುಗಳನ್ನು ಉಪಯೋಗಿಸಿರಿ. ಸಿದ್ಧವಾಗಿರ್ರಿ ಮತ್ತು ವಿನೋದವನ್ನು ಪಡೆಯಿರಿ!



www.ChildrenAreImportant.com – Children's ministry resources, Sunday School, and Vacation Bible School (VBS) curriculum for churches and teachers. Kannada

# ಸ್ಟೇಷನ್‌ಗಳ ಸರದಿ

## ಮೆಸ್ ಹಾಲ್






### ಅಲ್ಪಾಹಾರ ಸ್ಟೇಷನ್


ಇಲ್ಲಿ ನೀವು ಅಲ್ಪಾಹಾರವನ್ನು ಯಾವ ರೀತಿ ತಯಾರಿಸಬೇಕೆನ್ನುವದರ ಬಗ್ಗೆ ಕೆಲವು ನಿಯಮಗಳನ್ನು ಕಂಡುಕೊಳ್ಳುವಿರಿ. ಅದನ್ನು ತಿನ್ನುವದಕ್ಕೆ ಮುಂಚಿತವಾಗಿ ಹಸ್ತ ಕಲಾ ವಸ್ತುಗಳನ್ನು ಮಾಡುವದಕ್ಕೆ ಮಕ್ಕಳು ಹೇಗೆ ಸಂತೋಷಪಟ್ಟಿರುತ್ತಾರೋ ಹಾಗೆಯೇ ಆ ಅಲ್ಪಾಹಾರವನ್ನು ತಯಾರಿಸುವದಕ್ಕೂ ವಿದ್ಯಾರ್ಥಿಗಳು ಅಷ್ಟು ಸಂತೋಷಪಡಬೇಕೆಂದು ನಿಮ್ಮ ಮನಸ್ಸಿನಲ್ಲಿ ಇಟ್ಟುಕೊಂಡಿರ್ರಿ. ತಮ್ಮಷ್ಟಕ್ಕೆ ತಾವೇ ಅಲ್ಲಿ ಸ್ವಚ್ಚಗೊಳಿಸಿಕೊಳ್ಳಬೇಕೆಂದು ಅವರಿಗೆ ಬೋಧಿಸುವ ಅವಕಾಶವನ್ನು ಮಾತ್ರ ಬಿಟ್ಟುಕೊಳ್ಳಬೇಡಿರಿ.

### ಫಾಕ್ಟಾಯಿಡ್ (ಅಲ್ಪಾಹಾರದ ಸಮಯದಲ್ಲಿ ಬಾಹ್ಯಾಕಾಶದ ಅನ್ವಯದ ಕುರಿತಾಗಿ ಚರ್ಚೆ ಮಾಡುವದು)

ಅಲ್ಪಾಹಾರದ ಸಮಯದಲ್ಲಿ, ವಿದ್ಯಾರ್ಥಿಗಳೊಂದಿಗೆ ಬಾಹ್ಯಾಕಾಶದ ಅನ್ವಯದ ಕುರಿತಾಗಿ ಚರ್ಚೆ ಮಾಡಿರಿ, ಅದು ಪಾಠಕ್ಕೆ ಹೇಗೆ ಸಂಬಂಧಿಸುತ್ತದೆ ಎಂದು ಕೇಳಿರಿ ಮತ್ತು ಅವರ ದೈನಂದಿನ ಜೀವನಗಳಿಗೆ ಹೇಗೆ ಅನ್ವಯವಾಗುತ್ತದೆಯೆಂದು ಚರ್ಚಿಸಿರಿ. ಅಲ್ಪಾಹಾರ ಮತ್ತು ಬಾಹ್ಯಾಕಾಶದ ಅನ್ವಯದ ಕುರಿತಾದ ಮಾಹಿತಿಯನ್ನು ನೀವು ಅಲ್ಪಾಹಾರದ ಕೊಠಡಿಯ ನಾಯಕನ ಕರಪತ್ರದಲ್ಲಿಯೂ ಕಂಡುಕೊಳ್ಳಬಹುದು.




## ಇಂಜಿನೀರಿಂಗ್

### ಹಸ್ತ ಕಲಾ ಚಿತ್ರಗಳ ಸ್ಟೇಷನ್

ಹಸ್ತ ಕಲಾ ಚಿತ್ರಕ್ಕಾಗಿ ಇಲ್ಲಿ ನೀವು ಕೆಲವು ಸಲಹೆಗಳು ಮತ್ತು ನಿಯಮಗಳೊಂದಿಗೆ ಒಂದು ಆಲೋಚನೆಯನ್ನು ಪಡೆಯುವಿರಿ. ಗೆಲಾಕ್ಸಿ ಎಕ್ಸ್‌ಪ್ರೆಸ್ ವಿಬಿಎಸ್ ಕಾರ್ಯಕ್ರಮದಲ್ಲಿರುವ ಎಲ್ಲಾ ಹಸ್ತ ಕಲಾ ವಸ್ತುಗಳೆಲ್ಲವೂ ಪ್ರತಿಯೊಂದು ಹಸ್ತ ಕಲಾ ಚಿತ್ರಕ್ಕಾಗಿ ಒಂದು ಕಾಗದವನ್ನು ಉಪಯೋಗಿಸುವಂಥ ಡಿಜೈನ್ ಮಾಡಲಾಗಿವೆ. ಅವುಗಳನ್ನು ತುಂಬಾ ಬೆಲೆಯುಳ್ಳ ವಸ್ತುಗಳನ್ನಾಗಿ ನಾವು ಕಾಪಾಡಿಕೊಳ್ಳಬೇಕು. ಆನ್‌ಲೈನ್‌ನಲ್ಲಿ ಮಾದರಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳಿರಿ ಮತ್ತು ನಿರ್ದೇಶಕರ ಕೈಪಿಡಿಯಲ್ಲಿಯೂ, ಇಂಜಿನೀರಿಂಗ್ ನಾಯಕನ ಕರಪತ್ರದಲ್ಲಿಯೂ ಹಸ್ತ ಕಲಾ ವಸ್ತುಗಳ ಮಾಹಿತಿಯನ್ನು ಕಂಡುಕೊಳ್ಳಬಹುದು. ಇಂಜಿನೀರಿಂಗ್ ನಾಯಕನ ಕರಪತ್ರದಲ್ಲಿ ಜೆರಾಕ್ಸ್ ಮಾಡಿಕೊಳ್ಳುವದಕ್ಕೆ ಮಾದರಿಗಳನ್ನು ಕೂಡಾ ಕಂಡುಕೊಳ್ಳಬಹುದು.

## ಕ್ಯಾಡೆಟ್

### ವಿದ್ಯಾರ್ಥಿ ಪುಸ್ತಕಗಳು ಮತ್ತು ಪುನಃರ್ ಪರಿಶೀಲನೆ ಮಾಡುವ ಸ್ಟೇಷನ್

ಚಿಹ್ನೆಯ ಭಾಷೆಯಲ್ಲಿ ಬೈಬಲ್ ಕಥೆಯಿಂದ ಕೆಲವು ಮುಖ್ಯ ಪದಗಳಿಗಾಗಿ ನಿಯಮಗಳನ್ನು ನೀವಿಲ್ಲಿ ಕಾಣಬಹುದು. ಕಥೆಯನ್ನು ಪುನಃ ನೋಡಿರಿ, ಈ ಚಿಹ್ನೆ ಭಾಷೆಯಲ್ಲಿ ಈ ಪದಗಳನ್ನು ಬೋಧಿಸಿರಿ. ಆದನಂತರ ವಿದ್ಯಾರ್ಥಿ ಪುಸ್ತಕಗಳನ್ನು  ಪಾಸ್ ಮಾಡಿ ಮತ್ತು ಪಜಿಲ್‌ಗಳೊಂದಿಗೆ ಯಾರನನ್ನಾದರೂ ಸಹಾಯಕ್ಕಾಗಿ ಇಟ್ಟುಕೊಳ್ಳಿರಿ.

**ಕುಟುಂಬ**

ಹೆಬ್ಬೆರಳು ಮತ್ತು ತೋರು ಬೆರಳುಗಳನ್ನು ಮುಟ್ಟಿಸು, ಕೈಗಳು ಮುಟ್ಟುವವರೆಗೂ ಹೊರಗಿನ ವೃತ್ತವನ್ನು ಎಳೆಯಿರಿ.





www.ChildrenAreImportant.com – Children's ministry resources, Sunday School, and Vacation Bible School (VBS) curriculum for churches and teachers. Kannada

ಮಕ್ಕಳ ಸೇವೆ ಅನೇಕಬಾರಿ ನಿರ್ಲಕ್ಷ್ಯತೆಗೆ, ಅತೀ ಕಡಿಮೆ ಖರ್ಚಿನ ಸೇವೆ ಎಂಬುದಾಗಿ ಪರಿಗಣಿಸಲ್ಪಟ್ಟಿದೆ ಮತ್ತು ಕ್ರೈಸ್ತ ಸೇವೆಗಳಲ್ಲಿ ಅತೀ ಹೆಚ್ಚಾಗಿ ಈ ಸೇವೆಯನ್ನು ಮಾಡುತ್ತಿರುತ್ತಾರೆ. ಆದರೆ ಇನ್ನೂ ಅನೇಕ ಲಕ್ಷಾಂತರ ಮಕ್ಕಳು ಯೇಸುವಿನ ಕುರಿತಾಗಿ ಕೇಳುವ ಅವಶ್ಯಕತೆಯುಂಟು!



**ಇದಕ್ಕಾಗಿಯೇ ನಾವು ನಮ್ಮ ಸಂಪೂರ್ಣ ಸಮಯವನ್ನೆಲ್ಲಾ ಸಂಡೇ ಸ್ಕೂಲ್ ಮತ್ತು ವೆಕೇಷನ್ ಬೈಬಲ್ ಸ್ಕೂಲ್‌ಗೆ ಸಂಬಂಧಿಸಿದ ಪಠ್ಯ ಕ್ರಮಗಳನ್ನು, ತರಬೇತಿಗೆ ಬೇಕಾಗುವ ಅಗತ್ಯತೆಗಳನ್ನು ಮತ್ತು ಮಕ್ಕಳ ಸೇವೆಗಾಗಿ ಬೇಕಾಗುವ ಇನ್ನಿತರ ಸಂಪನ್ಮೂಲಗಳನ್ನು ವಾಸ್ತವಿಕವಾಗಿಯೂ, ಸಂಪೂರ್ಣವಾಗಿಯೂ ತಯಾರಿಸುವದಕ್ಕೆ ವೆಚ್ಚಿಸುತ್ತಿದ್ದೇವೆ.**

ನಾವು ಈಗಾಗಲೇ ಲ್ಯಾಟಿನ್ ಅಮೇರಿಕಾ ಗೋಸ್ಕರ ಈ ಕೆಳಗಿನವುಗಳನ್ನು ಸ್ಪಾನಿಷ್ ಭಾಷೆಯಲ್ಲಿ ಸಿದ್ಧಗೊಳಿಸಿದ್ದೇವೆ.

> 7 ವರ್ಷದ ಸಂಡೇ ಸ್ಕೂಲ್ ಪಠ್ಯ ಕ್ರಮ
> 7 ವಿಬಿಎಸ್ ಪಠ್ಯ ಕ್ರಮಗಳು
> ಹಾಡುಗಳಿಗೆ ನೃತ್ಯಗಳು ಅಥವಾ ನಿಯಮಗಳೊಂದಿಗೆ 14 ಡಿವಿಡಿಗಳು
> ಸಂಗೀತ 23 ಸೀಡಿಗಳು
> ತರಬೇತಿಯ ಪುಸ್ತಕಗಳು ಮತ್ತು ವೀಡಿಯೋಗಳು
> ಮೂವಿ ಕ್ಯಾಂಪುಗಳು
> ಈಸ್ಟರ್ ಮತ್ತು ಕ್ರಿಸ್ಮಸ್ ಕಾರ್ಯಕ್ರಮಗಳು
> ಗೊಂಬೆಗಳು ಮತ್ತು ಬಣ್ಣಗಳನ್ನು ಹಾಕಲು ಪುಸ್ತಕಗಳು

ಮಕ್ಕಳೇ ಪ್ರಮುಖರು

ಎಂದು ನಾವು ನಂಬುತ್ತಿರುವದರಿಂದಲೇ ಇವೆಲ್ಲವನ್ನು ಮಾಡಲು ಇಚ್ಚಿಸುತ್ತಿದ್ದೇವೆ.



www.ChildrenAreImportant.com

ನಮ್ಮ ಈ ಮಾಹಿತಿಯನ್ನು ಡೌನ್‌ಲೋಡ್ ಮಾಡಿಕೊಳ್ಳುವದಕ್ಕೂ, ಉಪಯೋಗಿಸಿಕೊಳ್ಳುವದಕ್ಕೂ, ಮುದ್ರಿಸಿಕೊಳ್ಳುವದಕ್ಕೂ ಮತ್ತು ಯಾವ ನಿರ್ಬಂಧಗಳಿಲ್ಲದೇ ಎಲ್ಲಾ ಸಂಸ್ಥೆಗಳಿಗೆ ಮತ್ತು ಸಭೆಗಳಿಗೆ ಹಂಚುವದಕ್ಕೂ ಉಚಿತವಾಗಿ ಕೊಡಲ್ಪಟ್ಟಿದೆ.

* ಅನೇಕ ಭಾಷೆಗಳಲ್ಲಿ ಈ ರೀತಿಯಾದ ಅಂಶಗಳನ್ನು ಬರೆಯಲು, ಮುದ್ರಿಸಿದವುಗಳನ್ನು ಹಂಚಲು ನಮ್ಮೊಂದಿಗೆ ಸಹಕರಿಸಲು ಆಸಕ್ತಿಯಿಂದ ನೀವು ಇರುವದಾದರೆ, ದಯೆಮಾಡಿ ನಮ್ಮನ್ನು ಸಂಪರ್ಕಿಸಿ. ನಿಮ್ಮೊಂದಿಗೆ ನಾವು ಮಾತನಾಡಲು ಇಷ್ಟಪಡುತ್ತಿದ್ದೇವೆ! info@childrenareimportant.com



www.ChildrenAreImportant.com – Children's ministry resources, Sunday School, and Vacation Bible School (VBS) curriculum for churches and teachers. Kannada

# ಹೆಚ್ಚಿನ ಆಲೋಚನೆಗಳು




## ಹೆಚ್ಚಿನ ಹಸ್ತ ಕಲಾ ವಸ್ತುಗಳು



ಇದು ಸಂತೋಷ ಮತ್ತು ಸಂಭ್ರಮವನ್ನು ತೋರಿಸುವದು, ಸೂಪರ್‌ನೋವಾದಂಥೆ ಇರುತ್ತದೆ! ದೇವರ ಕುರಿತಾಗಿ ಮತ್ತು ಆತನು ನಮಗಾಗಿ ಮಾಡಿದ ಕಾರ್ಯಗಳ ಕುರಿತಾಗಿ ನಾವು ಆಲೋಚಿಸುತ್ತಿರುವಾಗ ನಮ್ಮಲ್ಲಿ ಎಷ್ಟೋ ಸಂತೋಷವು ಹುಕ್ಕಿ ಬರುವದು.

"ನಾನು ದೇವರನ್ನು ಆರಾಧಿಸುವೆನು" ಎಂದು ಶೀರ್ಷಿಕೆ ಹೇಳಬಹುದು.

ಹಸ್ತ ಕಲಾ ಚಟುವಟಿಕೆ : ಬಾಹ್ಯಾಕಾಶದಿಂದ ಭೂ ಗ್ರಹವನ್ನು ನೋಡಿದಾಗ ಕಾಣುವಂಥ ಭೂಮಿಯ ಚಿತ್ರ.



1. ಒಂದು ಟವಲ್ ಉಪಯೋಗಿಸಿ ಕಾಗದದ ಮಧ್ಯೆಯಲ್ಲಿ ಒಂದು ದೊಡ್ಡ ವೃತ್ತವನ್ನು ವಾಟರ್‌ಪ್ರೂಫ್ ಮಾರ್ಕರ್‌ನಿಂದ ಎಳೆಯಿರಿ.
2. ಭೂ ಗ್ರಹವನ್ನು ಬಣ್ಣಗಳಿಂದ ತುಂಬಿಸಲು ಮಕ್ಕಳಿಗೆ ಹಸಿರು ಬಣ್ಣದ ಮಾರ್ಕರ್‌ಗಳನ್ನು ಕೊಡಿರಿ. ನೀರಿನ ಚಿತ್ರವನ್ನು ಬಿಡಿಸಲು ನೀಲಿ ಮಾರ್ಕರ್‌ಗಳನ್ನು ಕೊಡಿರಿ.
3. ಇವಾಗ ನೀರಿನಿಂದ ಬಣ್ಣ ಹಚ್ಚಲು ವಿದ್ಯಾರ್ಥಿಗಳಿಗೆ ಹೇಳಿ ಆರಂಭಿಸಿ. ಆ ವೃತ್ತವನ್ನೆಲ್ಲಾ ನೀರಿನಿಂದ ಒಂದು ಸಲ ಹಸಿ ಮಾಡಬೇಕು ಮತ್ತು ಆ ಬಣ್ಣಗಳು ಚೆನ್ನಾಗಿ ಕಲಬೆರಕೆ ಯಾಗುವಂಥೆ ನೋಡಿಕೊಳ್ಳಿರಿ.
4. ಒಂದು ಸಲ ಅದು ಒಣಗಿ ಹೋದನಂತರ, ವೃತ್ತದ ಸುತ್ತಲಿರುವ ಕಪ್ಪು ಗೆರೆಯನ್ನು ಕತ್ತರಿಸಿ ಮತ್ತು ಒಂದು ಕಪ್ಪು ಕಾಗದದ ಮೇಲೆ ಅದನ್ನು ಅವರು ಅಂಟಿಸಲಿ.

## ತರಗತಿಯ ಚಟುವಟಿಕೆ



ಪ್ರತಿಯೊಬ್ಬ ಮಗು ತನ್ನದೇಯಾದ ಮೇಘವನ್ನು ಮಾಡಲಿ ಮತ್ತು ಪ್ರತಿಯೊಬ್ಬರಿಂದ ಆ ಮೇಘಗಳನ್ನು ಒಂದು ಗೂಡಿಸಿ ಮೇಘ ಸ್ತಂಭವನ್ನಾಗಿ ಮಾಡಿರಿ. ಮೇಘಗಳನ್ನು ಮಾಡುವದಕ್ಕೆ, ಅವರೇ ಅವುಗಳನ್ನು ಚಿತ್ರಿಸಿ, ಕತ್ತರಿಸಿ ಮತ್ತು ಅವುಗಳನ್ನು ಅಲಂಕರಿಸಿ ಅಂಟಿಸಲಿ. (ಮಾರ್ಕೆಟ್‌ನಲ್ಲಿ ಸಿಗುವ ಬಿಳಿ ಪುಡಿ ಅಥವಾ ಗ್ಲಿಟ್ಟರ್‌ನ್ನು ಉಪಯೋಗಿಸಿರಿ.) ಅಗ್ನಿ ಜ್ವಾಲೆಗಳಿಗಾಗಿ ಅದೇ ವಿಧಾನವನ್ನು ಉಪಯೋಗಿಸಿ.



www.ChildrenAreImportant.com – Children's ministry resources, Sunday School, and Vacation Bible School (VBS) curriculum for churches and teachers. Kannada



ನಿಮ್ಮ ವಿಬಿಎಸ್ ಕಾರ್ಯಕ್ರಮವನ್ನು ಚೆನ್ನಾಗಿ ಯಶಸ್ವಿಗೊಳಿಸಲು ಉಪಯೋಗಿಸುವದಕ್ಕೆ ನಿಮ್ಮ ಉಪಾಧ್ಯಾಯರಿಗೆ ಈ ಸಾಧನೆಗಳೆಲ್ಲಾ ಅದ್ಭುತವಾಗಿರುತ್ತವೆ! ಗ್ರೇ ಟೇಪ್‌ಯಿಂದಾಗಲಿ ಅಥವಾ ಟಿನ್‌ಫಾಯಿಲ್‌ನಿಂದಾಗಲಿ 2 ಲೀಟರ್ ಸೋಡಾ ಬಾಟಿಲ್‌ಗಳ ಮೇಲೆ ಸಂಪೂರ್ಣವಾಗಿ ಸುತ್ತಿರಿ, ಟಿಸ್ಸ್ಯೂ ಕಾಗದದ ಜ್ವಾಲೆಗಳನ್ನು ಅಂಟಿಸಿರಿ ಮತ್ತು ನಿಮ್ಮ ಸೊಂಟಕ್ಕೆ ಅದನ್ನು ಕಟ್ಟಿಕೊಳ್ಳಿರಿ. ನಿಮ್ಮ ಉಪಾಧ್ಯಾಯರು "ಜೆಟ್ಟ ಪ್ಯಾಕ್‌ಗಳನ್ನು" ಕಟ್ಟಿಕೊಂಡಂಥೆ ಕಾಣಿಸಿಕೊಳ್ಳುವರು!

ನಿಮ್ಮ ವಿಬಿಎಸ್ ಕಾರ್ಯಕ್ರಮದಿಂದ ಇಂಥಹ ಚಿತ್ರಗಳನ್ನು ಪಡೆಯಲು ಮಕ್ಕಳೆಲ್ಲರೂ ಸಂತೋಷಪಡುತ್ತಾರೆ.




ಇಲ್ಲಿ ವಿನೋದವುಂಟು, ಹೆಚ್ಚಿನ ಹಸ್ತ ಕಲಾ ವಸ್ತುವನ್ನು ನೀವು ನೋಡಿರಿ! ಒಂದು ಕಟ್ಟಿಗೆಯನ್ನು ತೆಗೆದುಕೊಂಡು, ಒಂದು ಕಡೆಗೆ ಅಗ್ನಿಯಂಥೆ ಕಾಣಿಸಿಕೊಳ್ಳಲು ಅಲಂಕರಿಸಿ, ಮತ್ತೊಂದು ಕಡೆಗೆ ಮೇಘ ಸ್ತಂಭದಂಥೆ ಕಾಣಿಸುವಂಥೆ ಅಲಂಕರಿಸಿ!




## ಚಟುವಟಿಕೆ : ಚಂದ್ರನ ಕುಳಿಗಳು



ನಿಮ್ಮ ವಿದ್ಯಾರ್ಥಿಗಳು ಹಿಟ್ಟಿನ ಮಿಶ್ರಣವನ್ನು ಮಾಡುವಂಥೆ ಹೇಳಿರಿ ಮತ್ತು ಅದಾದನಂತರ ಅದರೊಳಗೆ ಚಿಕ್ಕ ಚಿಕ್ಕ ಕಲ್ಲುಗಳನ್ನು ಹಾಕಿರಿ. ಅವಾಗಲೇ ನಿಮ್ಮ ಕಣ್ಣುಗಳ ಮುಂದೆ ಕುಳಿಗಳು ಬಂದಿರುವದನ್ನು ನೋಡಿವಿರಿ.


ಹಿಟ್ಟಿನ ಮಿಶ್ರಣ : 4 ಬಟ್ಟಲು ಹಿಟ್ಟು ಮತ್ತು 1/2 ಬಟ್ಟಲು ಎಣ್ಣೆ.



www.ChildrenAreImportant.com – Children's ministry resources, Sunday School, and Vacation Bible School (VBS) curriculum for churches and teachers. Kannada


# 1ನೇ ಅಂತರಿಕ್ಷ ಯಾನ

# ದೇವರನ್ನು ಕರೆ!




ಅಂತರಿಕ್ಷದ ಉಪಕರಣಗಳು:

**ನೆಬುಕೊಪಿಯಾ**





## ವಿಸ್ಫೋಟನೆ! ಪ್ರಾರಂಭದ ನಾಟಕ

ಅವರು ದೇವರ ದೊಡ್ಡತನವನ್ನು ಕಾಣಲು ಪ್ರಯಾಣ ಮಾಡುತ್ತಿರುವಾಗ ಸಾಹಸಗಳ ವಿನೋದಾತ್ಮಕ ವಾರಕ್ಕೆ ಮಕ್ಕಳೆಲ್ಲರನ್ನು ಕೇಪ್ಟನ್ ಆಹ್ವಾನಿಸುತ್ತಾರೆ. ಆದನಂತರ, ತನ್ನ ಸಹಾಯಕನಾದ ರೋಬೋಟ್‌ನನ್ನು ಎಲ್ಲರಿಗೆ ಪರಿಚಯ ಮಾಡುವನು. ಬಹಳ ದೂರದಲ್ಲಿರುವವಗಳನ್ನು ಚೆನ್ನಾಗಿ ನೋಡುವದಕ್ಕೆ ಅದ್ಭುತವಾದ ಟೆಲಿಸ್ಕೋಪ್‌ಗಳನ್ನು ಉಪಯೋಗಿಸುವ ಸ್ಥಳವಾದ "ನೆಬೂಕೊಪಿಯೋ" ಎನ್ನುವ ಅಂತರಿಕ್ಷದ ಸ್ಟೇಷನ್ ಸಂದರ್ಶಿಸುವವದನ್ನು ಮತ್ತು ಶನಿ ಗ್ರಹಕ್ಕೆ ಯಾವ ರೀತಿ ಅವರೆಲ್ಲರೂ ಪ್ರಯಾಣ ಮಾಡುತ್ತಾರೆನ್ನುವದನ್ನು ಕೇಪ್ಟೆನ್ ಚೆನ್ನಾಗಿ ಅವರೆಲ್ಲರೊಂದಿಗೆ ಹಂಚಿಕೊಳ್ಳುವನು. ಪ್ರತೀ ದಿನ ದೇವರ ದೊಡ್ಡತನದ ಕುರಿತಾಗಿ ಅವರೆಲ್ಲರೂ ವಿಶೇಷವಾದ, ಅತೀ ಪ್ರಾಚೀನ ಪುಸ್ತಕವಾದ ಸತ್ಯವೇದದಿಂದ ನೇರವಾಗಿ ಕಲಿತುಕೊಳ್ಳುವರೆಂದು ಕೇಪ್ಟೆನ್ ಹೇಳುವನು. ಅಂತರಿಕ್ಷಕ್ಕೆ ಪ್ರಯಾಣವಾಗಲು ಟೇಕಾಫ್‌ಗೆ ಮಕ್ಕಳೆಲ್ಲರೂ ಸಿದ್ಧತೆಯಲ್ಲಿ ಇಲ್ಲದಿರುವ ಸಂದರ್ಭವನ್ನು ಕಂಡಾಗ, ಕೇಪ್ಟನ್ ಮಕ್ಕಳನ್ನು ಕೀಟಲೆ ಮಾಡುವದರ ಮೂಲಕ ಅಂಶದ ಹಾಡನ್ನು ಪರಿಚಯ ಮಾಡಿರಿ. ಆ ಹಾಡಿನೊಂದಿಗೆ ರೋಬೋಟ್ ಅವರನ್ನು ಸಿದ್ಧಪಡಿಸುವನು. ಟೇಕಾಫ್‌ಗಾಗಿ ಮುಖ್ಯ ಹಾಡಿನಲ್ಲಿ ಮಕ್ಕಳೆಲ್ಲರನ್ನು ಹಾಡಿನ ನಾಯಕ ನಡೆಸುವನು. ಅಂಶದ ಹಾಡು ಮುಗಿದ ನಂತರ, ಟೇಕಾಫ್‌ಗಾಗಿ ಮತ್ತು ಪ್ರಯಾಣಕ್ಕಾಗಿ ಒಂದು ಒಳ್ಳೆಯ ಸೌಂಡ್ ಟ್ರ್ಯಾಕ್‌ನ್ನು ನೀವು ಉಪಯೋಗಿಸಬಹುದು, ಪ್ರಯಾಣ ಮಾಡುತ್ತಿರುವಾಗಲೇ ನಾಟಕವನ್ನು ಮುಂದೆವರಿಸಿರಿ.

"ಗೆಲಾಕ್ಸಿ ಎಕ್ಸಪ್ರೆಸ್" ಅಂತರಿಕ್ಷ ನೌಕೆ ಕೆಲವು ಕ್ಷುದ್ರಗ್ರಹಗಳನ್ನು ಸಂಧಿಸುತ್ತದೆ ಮತ್ತು ಅವುಗಳೊಂದಿಗೆ ತಗಲಿಕೊಳ್ಳದೇ ಚೆನ್ನಾಗಿ ತಪ್ಪಿಸಿಕೊಳ್ಳಲು ಯತ್ನಿಸಬೇಕು. ರೋಬೋಟ್ ಎಲ್ಲಿ ಕುಸಿದು ಬೀಳುತ್ತದೆಯೆಂದು ಅವನು ತುಂಬ ಹೆದರಿ ಅಸ್ಥಿರಗೊಂಡು ಒದರುವನು ಮತ್ತು ದೇವರಿಗೆ ಮೊರೆಯಿಡುವದಾಗಿ ಕೇಪ್ಟೆನ್ ಅವನಿಗೆ ತಿಳಿಸಿಕೊಡುವನು.

ಪ್ರೇಕ್ಷಕರಾಗಿರುವ ಮಕ್ಕಳಿಗೆ ಕೇಪ್ಟೆನ್ ಆ ದಿನದ ಪದವಾಗಿರುವ "ದೇವರಿಗೆ ಮೊರೆಯಿಡು" ಎಂಬುದನ್ನು ತಿಳಿಸುವನು ಮತ್ತು "ಕರ್ತನೇ, ನನಗೆ ಸಹಾಯ ಮಾಡು!" ಎಂದು ಪ್ರತಿ ಸ್ಪಂದನೆಯಾಗಿ ಮಕ್ಕಳೆಲ್ಲರೂ ಜಿಗಿದು ಮತ್ತು ಅವರ ಕರಗಳನ್ನು ದೇವರ ಕಡೆಗೆ ಚಾಚುವರು. ರೋಬೋಟ್ ಅನೇಕ ಬಾರಿ ಪ್ರಯತ್ನಿಸಿ ಮಕ್ಕಳೊಂದಿಗೆ ಆ ಪದಗಳನ್ನು ಮತ್ತು ಅಭಿನಯನವನ್ನು ವಿದ್ಯಾರ್ಥಿಗಳೊಂದಿಗೆ ಕಲಿಯುವನು.


ಕೊನೆಯದಾಗಿ ಅವರು ಸುರಕ್ಷಿತವಾಗಿ ಶನಿ ಗ್ರಹಕ್ಕೆ ಸೇರುವರು. ಆ ಗ್ರಹದ ಸುತ್ತಲು ಇರುವ ಸುರಳಿಯನ್ನು ಕಂಡು ರೋಬೋಟ್ ಅದು ವೇಗವಾಗಿ ಪ್ರಯಾಣಿಸಲು ವಿಶಾಲ ಮಾರ್ಗವೆಂದು ಅಂದುಕೊಂಡನು. ಅಲ್ಲಿ ನೌಕೆಯನ್ನು ಇಳಿಸಲು ತೊಂದರೆ ಇದ್ದರಿಂದ, ರೋಬೋಟ್ ದೇವರಿಗೆ ಮತ್ತೊಮ್ಮೆ ಪ್ರೇಕ್ಷಕರೊಂದಿಗೆ "ದೇವರಿಗೆ ಮೊರೆಯಿಡು" ಎಂದಾಗ ಅವರೆಲ್ಲರು "ಕರ್ತನೇ, ನನಗೆ ಸಹಾಯ ಮಾಡು!" ಎಂದು ಪ್ರತಿಸ್ಪಂದಿಸುವರು. ಬೈಬಲ್‌ನಿಂದ ಗಗನಯಾತ್ರಿಕನ ತರಬೇತಿಗಾಗಿ ಸರಿಯಾದ ಸಮಯದಲ್ಲೇ ಅವರು ಇಳಿದುಕೊಂಡರು. (ಪ್ರೇಕ್ಷಕರೊಂದಿಗೆ ವಿನೋದಾತ್ಮಕವಾಗಿ ಇಳಿದುಕೊಂಡ ನಂತರ, ಮುಖ್ಯ ಪಾಠವನ್ನು ಹೇಳುವದಕ್ಕೆ ಪ್ರಾರಂಭಿಸಿರಿ)



## ಒಳ ಸಂದೇಶ...

ಬೈಬಲ್ ವಾಕ್ಯ

"ನಾನು ಯೆಹೋವನಿಗೆ ಮೊರೆಯಿಡುವಾಗ ಆತನು ತನ್ನ ಪರಿಶುದ್ಧ ಪರ್ವತದಿಂದ ಸದುತ್ತರವನ್ನು ಅನುಗ್ರಹಿಸುತ್ತಾನೆ." – ಕೀರ್ತ.3:4.



## ಮಿಷನ್ ಕಂಟ್ರೋಲ್‌ನಿಂದ ಅರ್ಜೆಂಟ್..


ಮುಖ್ಯ ಪಾಠ

**ಮೋಶೆಯ ಜನನ**

ಇಸ್ರಾಯೇಲ್ಯರು ತಾವು ಮಾಡಬೇಕಾದ ಬಿಟ್ಟೀ ಕೆಲಸಕ್ಕಾಗಿ ನಿಟ್ಟುಸುರು ಬಿಟ್ಟು ಗೋಳಾಡುತ್ತಾ ಇದ್ದರು. ಆ ಗೋಳು ದೇವರಿಗೆ ಮುಟ್ಟಿತು. ದೇವರು ಅವರ ನರಳಾಟವನ್ನು ಕೇಳಿ ತಾನು ಅಬ್ರಹಾಮ ಇಸಾಕ ಯಾಕೋಬರಿಗೆ ಮಾಡಿದ ವಾಗ್ದಾನವನ್ನು ನೆನಪಿಗೆ ತಂದುಕೊಂಡು ಇಸ್ರಾಯೇಲ್ಯರನ್ನು ನೋಡಿ ಅವರಲ್ಲಿ ಲಕ್ಷ್ಯವಿಟ್ಟನು.

(ವಿಮೋ.2:23–25)

ಈ ದಿನ ನಾವು ಕಲಿತುಕೊಳ್ಳುತ್ತಿರುವಂಥೆ ಆ ದಿನದಂದು ದೇವರ ಜನರು ವಿಮೋಚನಕಾಂಡ 2ನೇ ಅಧ್ಯಾಯದಲ್ಲಿ ಒಂದು ಪ್ರಾಮುಖ್ಯವಾದ ಪಾಠವನ್ನು ಕಲಿತುಕೊಂಡಿದ್ದಂಥೆ ಸತ್ಯವೇದವು ನಮಗೆ ತಿಳಿಸುತ್ತಿದೆ. ನಮಗೆ ಸಹಾಯ ಬೇಕಾದಾಗ ನಾವು ದೇವರಿಗೆ ಮೊರೆಯಿಡ ಬೇಕಾದ ಅವಶ್ಯಕತೆಯುಂಟು!




## ಸಂದೇಶ ವ್ಯವಸ್ಥೆ

ದೇವರನ್ನು ಕರೆ!

ಈ ಪಾಠವು ನಡೆಯುತ್ತಿರುವಾಗಲೇ, ಪ್ರತಿಸಾರಿ ವಿದ್ಯಾರ್ಥಿಗಳೆಲ್ಲರು "ದೇವರಿಗೆ ಮೊರೆಯಿಡು" ಎಂದು ಕೇಳಬೇಕು, ಅದಕ್ಕೆ ಅವರೆಲ್ಲರೂ "ಕರ್ತನೇ, ನನಗೆ ಸಹಾಯ ಮಾಡು!" ಎಂದು ಜಿಗಿಯುತ್ತಾ, ಅವರ ಎರಡು ಕೈಗಳನ್ನು ದೇವರ ಕಡೆಗೆ ಚಾಚಿ ಹೇಳಬೇಕು.



www.ChildrenAreImportant.com – Children's ministry resources, Sunday School, and Vacation Bible School (VBS) curriculum for churches and teachers. Kannada



ಇಸ್ರಾಯೇಲ್ಯರು ತಮ್ಮ ಜೀವನದಲ್ಲಿ ನರಳಾಟವನ್ನು ಅನುಭವಿಸುತ್ತಿದ್ದರು ಮತ್ತು ಅವರೆಲ್ಲರೂ ಗುಲಾಮರಾಗಿದ್ದರು. ಅನೇಕರು ಕಡು ಬಡತನದಲ್ಲಿದ್ದಾರೆ ಮತ್ತು ಅವರಿಗೆ ತಿನ್ನುವದಕ್ಕೆ ಆಹಾರವೇ ಇಲ್ಲ. ನಮ್ಮ ತಂದೆ ತಾಯಿಯವರು ಅನೇಕ ಸಲ ಜಗಳವಾಡುತ್ತಿರುವದರಿಂದ ನಾವು ಕಷ್ಟಕ್ಕೆ ಒಳಗಾಗಿರಬಹುದು ಅಥವಾ ನಾವು ಶಾಲೆಯಲ್ಲಿ ಗೇಲಿಗೆ ಅಥವಾ ಹಾಸ್ಯಾಸ್ಪದಕ್ಕೆ ಗುರಿಯಾಗುತ್ತಿರಬಹುದು. ಆ ಸಮಯದಲ್ಲೇ ನಾವು ದೇವರಿಗೆ ಮೊರೆಯಿಡಬೇಕು! ದೇವ ಜನರು ಈ ಸಮಯದಲ್ಲಿ ಕೇವಲ ಬಡವರೇಯಾಗಿದ್ದಿಲ್ಲ, ಅವರು ತುಂಬಾ ಹಸಿವಿನಿಂದ ನರಳಾಡುತ್ತಿದ್ದರು; ಐಗುಪ್ತಿಯರಿಂದ ಅವರೆಲ್ಲರೂ ಹಾಸ್ಯಾಸ್ಪದಕ್ಕೆ ಗುರಿಯಾಗಿದ್ದರು. ಆ ಎಲ್ಲಾ ಒತ್ತಡದಿಂದ, ಅವರ ಮಧ್ಯೆಯಲ್ಲಿಯೇ ಅವರೆಲ್ಲರು ಜಗಳವಾಡಬಹುದಾಗಿತ್ತು. ಜೀವನ ತುಂಬಾ ಕಷ್ಟಕರವಾಗಿತ್ತು. ಐಗುಪ್ತ ದೇಶದ ಅಧಿಕಾರಿ ಅಲ್ಲಿರುವ ಎಲ್ಲಾ ಗಂಡು ಶಿಶುಗಳನ್ನು ಕೊಂದು ಹಾಕಬೇಕೆಂದು ಆದೇಶಿಸಿದನು! ಆಗ ಇನ್ನೂ ಪರಿಸ್ಥಿತಿಗಳು ತುಂಬಾ ಹಾಳಾದವು. ಅದು ಒಂದು ತರಹ ಭಯಂಕರ ಹತ್ಯಾಕಾಂಡ!!! ಆಗ ಯಾರಾದರೂ ದೇವರಿಗೆ ಮೊರೆಯಿಡಬೇಕಾದವರು ಇದ್ದಾರೆಂದರೆ, ಅವರೇ ಇಸ್ರಾಯೇಲ್ಯರು.


## ಆಸ್ಟ್ರೋನಾಮಿಕಲ್ ಅಬ್ಬರ್ವೇಷನ್

## [ ದೇವರು ಉನ್ನತನು ]

ಆದರೆ ದೇವರು ಒಂದು ಪ್ರಣಾಳಿಕೆಯನ್ನಿಟ್ಟುಕೊಂಡಿದ್ದರು. ಮೋಶೆ ಹುಟ್ಟಿದಾಗ ಆತನು ಅವನ ಮೇಲೆ ಲಕ್ಷ್ಯವಿಟ್ಟಿದ್ದನು ಮತ್ತು ಅವನನ್ನು ಕೊಲ್ಲದಂಥೆ ಆತನು ಕಾಪಾಡಿದನು. ಅವನನ್ನು ಆ ಕ್ರೂರ ಸೈನಿಕರು ತೆಗೆದುಕೊಂಡು ಹೋಗಿ ಕೊಲ್ಲದಂತೆ ಮೋಶೆಯ ತಾಯಿ ಬಚ್ಚಿಡುವದಕ್ಕೆ ತುಂಬಾ ಪ್ರಯತ್ನಿಸಿದಳು. ಆದರೆ ಹೆಚ್ಚಿನ ಕಾಲ ಅವನನ್ನು ಬಚ್ಚಿಡುವದಕ್ಕೆ ಅವಳ ಕೈಲಿಯಾಗಲಿಲ್ಲ. ಆ ಸಮಯದಲ್ಲೇ ಬಹುಶಃ ಒಂದು ಒಳ್ಳೆಯ ಆಲೋಚನೆ ಅವಳಿಗೆ ಬಂದಿರಬಹುದು : ಅದೇನಂದರೆ, ದೇವರಿಗೆ ಮೊರೆಯಿಡುವದು! ತನ್ನ ಮಗನಾದ ಮೋಶೆಯನ್ನು ಒಂದು ಪೆಟ್ಟಿಗೆಯಲ್ಲಿ ಬಚ್ಚಿಟ್ಟು ಆ ನದಿಯಲ್ಲಿ ಬಿಟ್ಟಿರುವದನ್ನು ದೇವರು ನೋಡಿದ್ದರು. ಅವನು ಆ ನದಿಯಲ್ಲೇ ಮುಳುಗಿ ಹೋಗಬಹುದಾಗಿತ್ತು ಅಥವಾ ಯಾರಿಗೂ ಸಿಗಲಾರದಂಥೆ ತುಂಬಾ ದೂರಕ್ಕೆ ಹೋಗ ಬಹುದಾಗಿತ್ತು, ಆದರೆ ದೇವರು ತನ್ನನ್ನು ತುಂಬಾ ಸುರಕ್ಷಿತವಾಗಿ ಇಟ್ಟಿದ್ದಾನೆ. ಐಗುಪ್ತ ಅಧಿಕಾರಿ ಮನೆಯ ಮುಂದೆ ಆ ಪೆಟ್ಟಿಗೆಯು ಬಂದು ತೇಲಿಯಾಡುತ್ತಿರುವಂಥೆ ಮತ್ತು ಫರೋಹನ ಮಗಳು ಆ ಮಗುವನ್ನು ದತ್ತತೆ ಮಾಡಿಕೊಳ್ಳುವಂತೆ ದೇವರು ಮಾಡಿದರು. ನಮ್ಮ ದೇವರು ತುಂಬಾ ದೊಡ್ಡ ದೇವರು! ಮೋಶೆ ಜೀವನದ ವಿಷಯವಾಗಿ ದೇವರು ಒಂದು ಪ್ರತ್ಯೇಕವಾದ ಪ್ರಣಾಳಿಕೆಯನ್ನು ಹೊಂದಿಕೊಂಡಿದ್ದರು ಮತ್ತು ಪೆಟ್ಟಿಗೆಯಲ್ಲಿ ಒಂದು ಚಿಕ್ಕ ಮಗುವಾಗಿ ಇದ್ದಾಗ, ಆ ಪೆಟ್ಟಿಗೆ ನದಿಯ ಮೇಲೆ ಬರುತ್ತಿರುವಾಗ ಕೂಡ ದೇವರು ಮೋಶೆನನ್ನು ನೋಡಿದರು. ದೇವರು ನಿನ್ನನ್ನು, ನನ್ನನ್ನು ನೋಡುತ್ತಿದ್ದಾರೆ, ನಮ್ಮಲ್ಲಿರುವ ಪ್ರತಿಯೊಬ್ಬರ ಕುರಿತಾಗಿ ದೇವರಿಗೆ ಚೆನ್ನಾಗಿ ಗೊತ್ತು.

ದೇವರಿಗೆ ಮೊರೆಯಿಡಬೇಕು ಎನ್ನುವ ಒಂದು ಪ್ರಾಮುಖ್ಯವಾದ ಪಾಠವನ್ನು ನಾವೆಲ್ಲರೂ ಈ ದಿನದಂದು ಕಲಿತುಕೊಳ್ಳಬಹುದು. ನಿಮಗಾಗಿ ಮತ್ತು ನನಗಾಗಿ ಕಷ್ಟ ಸಂದರ್ಭಗಳು ಬರುತ್ತವೆ. ಉದಾಹರಣೆಗೆ, ನಮ್ಮ ಶಾಲೆಯ ಹತ್ತಿರ ಒಂದು ಕಷ್ಟಕರವಾದ ಪರಿಸ್ಥಿತಿ ಬರಬಹುದು ಅಥವಾ ಸಹೋದರನೊಂದಿಗೆ ಜಗಳವಾಡುವ ಸಮಯ ಬರಬಹುದು, ಆ ಸಮಯದಲ್ಲಿ ನೀವು ಮಾಡಬೇಕಾದ ಒಂದು ಒಳ್ಳೆಯ ಕೆಲಸವೇನೆಂದರೆ, ದೇವರಿಗೆ ಮೊರೆಯಿಡುವದೇ. ಅದನ್ನೆ ಇಸ್ರಾಯೇಲ್ಯರು ಮಾಡಿದ್ದರು. ಅವರು ದೇವರಿಗೆ ಮೊರೆಯಿಟ್ಟರು ಮತ್ತು ದೇವರು ಅವರ ಮೊರೆಯನ್ನು ಕೇಳಿಸಿಕೊಂಡು, ಅವರನ್ನು ಜ್ಞಾಪಕ ಮಾಡಿಕೊಂಡಿದ್ದಾನೆಂದು ಸತ್ಯವೇದವು ನಮಗೆ ತಿಳಿಸುತ್ತಿದೆ. ದೇವರು ಅವರನ್ನು ನೋಡಿದರು ಮತ್ತು ಅವರ ಕುರಿತಾಗಿ ಎಲ್ಲಾ ತಿಳಿದುಕೊಂಡಿದ್ದರು. ಅವರ ಮೇಲೆ ಕನಿಕರಪಟ್ಟರು ಮತ್ತು ಅವರನ್ನು ರಕ್ಷಿಸಿದರು. ಆ ಸ್ಥಳದಲ್ಲಿ ಮೋಶೆಯ ವಿಷಯವಾಗಿ ಒಂದು ಅದ್ಭುತವಾದ ಪ್ರಣಾಳಿಕೆಯನ್ನು ಇಟ್ಟುಕೊಂಡಿದ್ದರು... ಒಬ್ಬ ಇಸ್ರಾಯೇಲ್ಯನಾಗಿ ಹುಟ್ಟಿದನು, ಮರಣದಿಂದ ರಕ್ಷಿಸಿದನು, ಪೆಟ್ಟಿಗೆಯ ಮುಖಾಂತರ ಮರಣವನ್ನು ತಪ್ಪಿಸಿದನು ಮತ್ತು ಫರೋಹನ ಕುಟುಂಬದೊಳಗೆ ದತ್ತತೆಯ ಮಗು ತೆಗೆದುಕೊಂಡು ಹೋದನು. ಇವತ್ತು ನಾವು ಕಲಿತುಕೊಂಡಿರುವದನ್ನು ಕ್ರಿಯೆಯಲ್ಲಿ ಅನುಸರಿಸೋಣ ಮತ್ತು ದೇವರಿಗೆ ಮೊರೆಯಿಡೋಣ!

## ಮೆಸ್ ಹಾಲ್







### ರೋಬೋಟ್‌ಗಳು

ಅಲ್ಪಾಹಾರ ಕೇಂದ್ರ ಬಿಸ್ಕೇಟ್‌ಗಳಿಂದ ಆರಂಭಿಸಿರಿ, ಕಾಗದದ ಮೇಲೆ ಬಿಸ್ಕೇಟ್‌ಗಳ ಸುತ್ತಾ ರೋಬೋಟ್ ಚಿತ್ರವನ್ನು ಬಿಡಿಸಿರಿ ಮತ್ತು ಬಿಸ್ಕೇಟ್‌ಗಳ ಮೇಲೆ ಚಿಕ್ಕ ಚಿಕ್ಕ ಸಿಹಿ ತಿಂಡಿಗಳನ್ನು ಇಡಿರಿ.

ಅಥವಾ, ಸ್ವಲ್ಪ ಕ್ರೀಮ್ ಚೀಜ್‌ನ್ನು ಉಪಯೋಗಿಸಿರಿ ಮತ್ತು ಆರೋಗ್ಯಕರವಾದ ರೋಬೋಟ್‌ಗಾಗಿ ಫ್ರೀಜ್‌ನಲ್ಲಿಟ್ಟುರವ ತರಕಾರಿಯನ್ನು ತೆಗೆದು ಚಿಕ್ಕ ಚಿಕ್ಕ ತುಂಡುಗಳನ್ನಾಗಿ ಮಾಡಿ ಅದರ ಮೇಲೆ ಅಂಟಿಸಿರಿ. ನಿಮಗೆ ಇಷ್ಟವಾದರೆ ಮುಂಚಿತವಾಗಿಯೇ ರೋಬೋಟ್‌ನ ಚಿತ್ರಗಳನ್ನು ಬಿಡಿಸಿದ ಕಾಗದದ ಪ್ಲೇಟ್‌ಗಳನ್ನು ಉಪಯೋಗಿಸಬಹುದು.





### ಫ್ಯಾಕ್ಟಾಯಿಡ್

(ಅಲ್ಪಾಹಾರವನ್ನು ತೆಗೆದುಕೊಳ್ಳುತ್ತಿರುವಾಗ ಅಂತರಿಕ್ಷ ಅನ್ವಯದ ಕುರಿತಾಗಿ ಚರ್ಚಿಸಕೊಳ್ಳಬಹುದು)

### ಟೆಲಿಸ್ಕೋಪ್‌ಗಳು

ಟೆಲಿಸ್ಕೋಪ್‌ಗಳು ಅದ್ಭುತವಾದ ವಸ್ತು ಸಾಮಾಗ್ರಿಗಳು. ವಿಶಾಲವಾದ ಈ ದೊಡ್ಡ ವಿಶ್ವದಲ್ಲಿರುವವುಗಳನ್ನೆಲ್ಲಾ ನಾವು ಅವುಗಳಿಂದ ನೋಡಬಹುದು. ಭೂಮಿಯಿಂದ ನಮ್ಮ ಕಣ್ಣುಗಳಿಂದ ಗ್ರಹಗಳನ್ನಾಗಲಿ ಅಥವಾ ಚಂದ್ರಗಳನ್ನಾಗಲಿ ಸ್ಪಷ್ಟವಾಗಿ ನೋಡುವದಕ್ಕೆ ಆಗುವದಿಲ್ಲ. ಆಕಾಶದಲ್ಲಿ ಅವುಗಳೆಲ್ಲಾ ಸಾವಿರಾರು ಚಿಕ್ಕ ಚಿಕ್ಕ ಚುಕ್ಕೆಗಳಂತೆ ಕಾಣಿಸಿಕೊಳ್ಳುತ್ತವೆ. ಆದರೆ ಟೆಲಿಸ್ಕೋಪ್‌ನಿಂದ ಅವುಗಳನ್ನು ಅತೀ ಸಮೀಪವಾಗಿದ್ದಂತೆ ಕಾಣಬಹುದು. ಗ್ರಹಗಳ ಮೇಲೆ ಕುಳಿಗಳಿರುವದನ್ನು, ಗೆಲಾಕ್ಸಿಗಳನ್ನು ಮತ್ತು ಆಸಕ್ತಿಕರವಾದ ಅನೇಕ ಸಂಗತಿಗಳನ್ನು ನಾವು ಕಾಣಬಹುದು. ಟೆಲಿಸ್ಕೋಪ್‌ನಿಂದ, ಬಹುದೂರವಿದ್ದವುಗಳನ್ನು ತುಂಬಾ ಹತ್ತಿರವಾಗಿ ನಾವು ನೋಡಬಹುದು. ಕೆಲವುಸಲ ನಾವು ಅಷ್ಟು ಪ್ರಾಮುಖ್ಯ ವ್ಯಕ್ತಿಗಳಾಗಿ ಎಣಿಸಲ್ಪಡುವದಿಲ್ಲ. ನಕ್ಷತ್ರಗಳಿಂದ ತುಂಬಿರುವ ವಿಶ್ವದಲ್ಲಿ ನಾವು ಒಂದು ಚಿಕ್ಕ ನಕ್ಷತ್ರದಂತೆ ಇರುತ್ತೇವೆ. ಕೆಲವು ಸಂದರ್ಭಗಳಲ್ಲಿ ನಮ್ಮನ್ನು ಯಾರು ನೋಡುತ್ತಿಲ್ಲವೆಂದು ಅಂದುಕೊಳ್ಳುತ್ತೇವೆ, ಆದರೆ ದೇವರು ನಮ್ಮನ್ನು ತುಂಬಾ ಹತ್ತಿರವಾಗಿ ನೋಡುವವನಾಗಿದ್ದಾನೆ. ದೇವರ ಬಳಿ ಟೆಲಿಸ್ಕೋಪ್ ಇದ್ದ ಹಾಗೆ, ನಮ್ಮ ಸುತ್ತಮುತ್ತ ಸಾವಿರಾರು ಜನರಿದ್ದರು ನಮ್ಮನ್ನು ಅತೀ ಸಮೀಪವಾಗಿ ಕಾಣುವನು ಮತ್ತು ಅನೇಕ ಸಾವಿರಾರು ಮೈಲಿಗಳ ದೂರದಲ್ಲಿದ್ದಂತೆ ಆತನಿಗೆ ಅನಿಸುತ್ತದೆ.



www.ChildrenAreImportant.com – Children's ministry resources, Sunday School, and Vacation Bible School (VBS) curriculum for churches and teachers. Kannada

# ಕ್ಯಾಡೆಟ್ ತರಗತಿ




ಕ್ಯಾಡೆಟ್ ತರಗತಿ


## ದೇವರನ್ನು ಕರೆ!

ಮೊತ್ತೊಂದು ಬಾರಿ ಕಥೆಯನ್ನು ಪುನಃರಾವೃತ ಮಾಡಿಕೊಳ್ಳಿರಿ, ಚಿಹ್ನೆಯ ಭಾಷೆಯಲ್ಲಿ ಈ ಪದಗಳನ್ನು ಬೋಧಿಸಿರಿ. ಆದನಂತರ ವಿದ್ಯಾರ್ಥಿ ಪುಸ್ತಕಗಳನ್ನು ಹಂಚಿರಿ ಮತ್ತು ಪಜಿಲ್‌ಗಳನ್ನು ಮಾಡುತ್ತಿರುವಾಗ ಅವರೊಂದಿಗೆ ಸಹಾಯಕರೊಬ್ಬರನ್ನು ಇಟ್ಟುಕೊಳ್ಳಿರಿ.

**ಶಿಶು**
ಜೋಗುಳ
ಆಡಿಸುವ ಕೈಗಳು



**ಭೀತಿ/ ಭಯ**
ಬೆರಳುಗಳನ್ನು ಮುಟ್ಟುವದು, ಕೈಗಳನ್ನು ತೆರೆದು ಮತ್ತು ಎದೆಯನ್ನು ಕಪ್ಪಿಕೊಳ್ಳುವದು.



**ಕುಟುಂಬ**
ಹೆಬ್ಬೆರಳು ಮತ್ತು ತೋರು ಬೆರಳುಗಳನ್ನು ಮುಟ್ಟಿಸು, ಕೈಗಳು ಮುಟ್ಟುವವರೆಗೂ ಹೊರಗಿನ ವೃತ್ತವನ್ನು ಎಳೆಯಿರಿ.



# ಇಂಜಿನೀರಿಂಗ್



ಇಂಜಿನೀರಿಂಗ್

## ಪೆಟ್ಟಿಗೆಯಲ್ಲಿ ಮೋಶೆ

ಬೇಕಾದವುಗಳು :

ಸಿದ್ಧಗೊಳಿಸಿದ ಚಿತ್ರ (ಮುದ್ರಿಸಿರುವದು, ಕತ್ತರಿಸಿರುವದು ಮತ್ತು ರಂಧ್ರಗಳನ್ನು ಮಾಡುವ ಪಂಚ್) ಕ್ರಯಾನ್‌ಗಳು (ಅಥವಾ ಕಲರ್ ಪೆನ್ಸಿಲ್‌ಗಳು, ಮಾರ್ಕರ್‌ಗಳು, ಅಥವಾ ಬಣ್ಣ (ಪೇಂಟ್))

ಸೂಚನೆಗಳು :

1. ಹಿಂಬಾಗದಲ್ಲಿ ವಿದ್ಯಾರ್ಥಿಗಳು ತಮ್ಮ ಹೆಸರುಗಳನ್ನು ಬರೆಯಲು ಹೇಳಿರಿ ಮತ್ತು ಮುಂಭಾಗದಲ್ಲಿ ಬಣ್ಣ ಹಾಕಿಸಿರಿ.
2. ಆ ರಂಧ್ರಗಳ ಮೂಲಕ ವಿದ್ಯಾರ್ಥಿಗಳು ತಂತಿಯನ್ನು ತೂರಿ ಕಟ್ಟುವದಕ್ಕೆ ಹೇಳಿರಿ.

# ಸೇತುವೆ

ಆಟಗಳಿಗೋಸ್ಕರ ಮತ್ತು ಮುಕ್ತಾಯ ಮಾಡುವದಕ್ಕೋಸ್ಕರ ಸೇತುವೆಯ ಹತ್ತಿರಕ್ಕೆ ಬರುವದು.

## ಒಂದು ಪದವನ್ನು ಮಾಡಿ ತೋರಿಸಿರಿ

ಪ್ರತೀ ತಂಡದಿಂದ ಮೂವರು ಮಕ್ಕಳನ್ನು ಕರೆದು, ವೇದಿಕೆಯ ಮೇಲೆ ಆ ಮಕ್ಕಳನ್ನು ನಿಲ್ಲಿಸಿರಿ ಮತ್ತು ಅವರಿಗೆ ಕೊಡಲ್ಪಟ್ಟಿರುವ 2 ಅಕ್ಷರಗಳ ಪದವನ್ನು ಅವರ ಅಭಿನಯದಿಂದ ಮಾಡಿ ತೋರಿಸ ಬೇಕೆಂದು ಹೇಳಿರಿ. ಅಲ್ಲಿ ಅದೇ ಆಟವನ್ನು ಅನೇಕಬಾರಿ ಆಡಿಸಬಹುದು. ಮತ್ತು ಪ್ರತೀ ತಂಡವು ಅಲ್ಲಿರುವ ಗಡಿಯಾರದೊಂದಿಗೆ ಪೈಪೋಟಿ ಪಡಬೇಕಾದ ಅವಶ್ಯಕತೆ ಇರುತ್ತದೆ.

ಅಲ್ಲಿರುವ ನಾಯಕನು ಹೋಗು ಎಂದು ಹೇಳಿದಾಗ, ನಾಯಕನು ಒಂದು ತಂಡಕ್ಕೆ ಆ ಪದವನ್ನು ತಿಳಿಸುವನು, ಆಗ ಅವರು ಏನನ್ನು ಮಾತನಾಡದೇ ಅವರ ಶರೀರಗಳಿಂದ ಅಭಿನಯವನ್ನು ಮಾಡುವದರ ಮೂಲಕ ಆ ಪದವನ್ನು ತಿಳಿಸಬೇಕಾಗಿರುತ್ತದೆ. ಪ್ರೇಕ್ಷಕರಾಗಿರುವ ತಂಡವು ಮಾತ್ರವೇ ಆ ಪದವನ್ನು ಗುರುತಿಸಬೇಕು. ಅವರು ಹೇಳಿರುವದು ಸರಿಯಾಗಿದ್ದರೆ, ನಾಯಕನು ಗಡಿಯಾರವನ್ನು ನಿಲ್ಲಿಸಿ, ಅವರು ಎಷ್ಟು ಸೆಕೆಂಡುಗಳಲ್ಲಿ ಸರಿಯಾದ ಪದವನ್ನು ಗುರುತಿಸಿದ್ದಾರೆನ್ನುವದನ್ನು ಬರೆದುಕೊಳ್ಳುವನು.

ನಿಮ್ಮ ತಂಡಗಳು ಹುಡುಗರು ಮತ್ತು ಹುಡಿಗಿಯರಾಗಿದ್ದರೆ, ಉದಾಹರಣೆಗೆ ಹುಡಿಗಿಯರಿಗೆ ಪದವು ಬಂದಿದೆಯೆಂದು ತಿಳಿದುಕೊಳ್ಳಿರಿ, ಆ ಹುಡುಗಿಯರು ವೇದಿಕೆಯ ಮೇಲಕ್ಕೆ ಬಂದು, ತಮ್ಮ ಅಭಿನಯದಿಂದ ಆ ಪದವನ್ನು ತಿಳಿಸಬೇಕು, ಹಾಗೆ ಮಾಡುತ್ತಿರುವ ಸಂದರ್ಭದಲ್ಲಿ ಪ್ರೇಕ್ಷಕರಾಗಿರುವ ಹುಡಿಗಿಯರೆಲ್ಲರೂ ಚೀರುತ್ತಾ, ಕಿರಿಚುತ್ತಾ ಆ ಪದವೇನೆಂಬುವದನ್ನು ಗುರುತಿಸಬೇಕು, ಒಂದುವೇಳೆ ಹುಡುಗರು ಪಾಲ್ಗೊಳ್ಳುವದಾದರೇ, ಹುಡಿಗಿಯರೇ ಗೆಲ್ಲುವದಕ್ಕೆ ಸಹಾಯ ಮಾಡಿದಂಥಾಗುವದು. 2 ಅಕ್ಷರಗಳಿಂದ ಉಂಟಾಗುವ ಕೆಲವು ಪದಗಳು ಇಲ್ಲಿವೆ : ನಾಯಿ, ಬೆಕ್ಕು, ಹಂದಿ, ಸೂರ್ಯ, ಮೊಲ, ಹಾವು, ಇನ್ನೂ ಇತ್ಯಾದಿ.

## ರುಚಿ ಪರೀಕ್ಷೆ

ಪ್ರತೀ ತಂಡದಿಂದ ಒಬ್ಬೊಬ್ಬರನ್ನು ವೇದಿಕೆಯ ಮೇಲಕ್ಕೆ ಬರುವಂತೆ ಆಹ್ವಾನಿಸಿರಿ. ವಿವಿಧವಾದ ಅಡುಗೆಗಳನ್ನು ಮಾಡಿ ಅಲ್ಲಿ ಸಿದ್ಧಪಡಿಸಿರಿ. ಅವರಿಗೆ ಕಾಣದಂತೆ ಆ ಅಡುಗೆಗಳನ್ನು ಬಚ್ಚಿಟ್ಟಿರಿ. ಮತ್ತು ಇಬ್ಬರು ವಿದ್ಯಾರ್ಥಿಗಳ ಕಣ್ಣುಗಳಿಗೆ ಏನಾದರೂ ಕಟ್ಟಿ, ಅವರನ್ನು ಮುಂದಕ್ಕೆ ಕರೆದುಕೊಂಡು ಬನ್ನಿರಿ. ಒಂದು ಅಡುಗೆಯನ್ನು ಮಾತ್ರ ಆ ವೇದಿಕೆಯ ಮೇಲಕ್ಕೆ ತೆಗೆದುಕೊಂಡು ಬನ್ನಿರಿ, ಆಗ ಆ ವಿದ್ಯಾರ್ಥಿಗಳು ಅವುಗಳನ್ನು ರುಚಿ ನೋಡಿ, ಅದು ಯಾವ ಅಡುಗೆಯೆಂದು ಹೇಳಬೇಕು. ಉಳಿದ ಎಲ್ಲಾ ವಿದ್ಯಾರ್ಥಿಗಳು ಅದು ಏನೆಂದು ಹೊರಗೆ ಹೇಳಬಾರದು, ಯಾಕಂದರೆ ಅದು ಇನ್ನೂ ಸವಾಲಾಗಿ ಇರುವದಕ್ಕೆ ಪ್ರಯತ್ನಿಸಿರಿ. (ನಿಮ್ಮ ತರಗತಿಯವರು ಉತ್ತರ ಹೇಳದಂತೆ ನೋಡಿಕೊಳ್ಳಿರಿ!) ಪ್ರತೀ ವಿದ್ಯಾರ್ಥಿ ಒಂದುಸಲ ಮಾತ್ರ ಉತ್ತರವನ್ನು ಹೇಳುವದಕ್ಕೆ ಅವಕಾಶವಿರುತ್ತದೆ. ಅವರು ಉತ್ತರ ಹೇಳುವದಕ್ಕೆ ಕೇವಲ 10 ಸೆಕೆಂಡ್‌ಗಳ ಸಮಯವನ್ನು ಮಾತ್ರವೇ ಕೊಡಿರಿ. ಒಂದುವೇಳೆ ಏನಾದರೂ ಚಲ್ಲಿಹೋದರೆ ಹೊರಸುವದಕ್ಕೆ ಆ ಸ್ಥಳದಲ್ಲಿ ನ್ಯಾಪ್‌ಕಿನ್‌ಗಳನ್ನು ಅಥವಾ ಟವಲ್‌ಗಳನ್ನು ಇಟ್ಟುಕೊಳ್ಳಿರಿ. ಆ ವಿದ್ಯಾರ್ಥಿಗಳು ಇನ್ನೂ ಹೆಚ್ಚಾದ ಅಡುಗೆಗಳನ್ನು ರುಚಿ ನೋಡುವದಕ್ಕೆ ಅನುಕೂಲ ಮಾಡಿರಿ. ಹೆಚ್ಚಿನ ಅಡುಗೆಗಳನ್ನು ಯಾವ ತಂಡದವರು ಕಂಡುಹಿಡಿಯುವರೋ ಅವರೇ ಗೆಲ್ಲುವರು.



www.ChildrenAreImportant.com – Children's ministry resources, Sunday School, and Vacation Bible School (VBS) curriculum for churches and teachers. Kannada


# 2ನೇ ಅಂತರಿಕ್ಷ ಯಾನ


## ದೇವರಿಗೆ ಸ್ಪಂದಿಸು!




ಅಂತರಿಕ್ಷದ ಉಪಕರಣಗಳು:

ಮೆಗಂಟರೆಸ್





ಪ್ರಾರಂಭದ ನಾಟಕ

### ವಿಸ್ಫೋಟನೆ!

ಇವತ್ತು ಕೇಪ್ಟನ್ ಮಾತುಗಳಿಗೆ ರೋಬೋಟ್ ಸ್ಪಂದಿಸಲು ತುಂಬಾ ಕಷ್ಟಪಡುತ್ತಾನೆ. ತಾನು ಕಿವುಡನಾಗಿ ಕಾಣಿಸಿಕೊಳ್ಳುತ್ತಾನೆ. ಕೇಪ್ಟನ್ ರೋಬೋಟ್‌ನನ್ನು ಶುಭ ತಿಳಿಸುವದರೊಂದಿಗೆ ನಾಟಕವನ್ನು ಪ್ರಾರಂಭಿಸಿರಿ ಮತ್ತು ಟೇಕಾಫ್‌ಗಾಗಿ ನೌಕೆಯನ್ನು ಸಿದ್ಧಗೊಳಿಸಲು ಪ್ರಯತ್ನಿಸಿರಿ, ಆದರೆ ಸಂಪೂರ್ಣವಾಗಿ ರೋಬೋಟ್ ಕೇಪ್ಟನ್‌ನನ್ನು ನಿರ್ಲಕ್ಷ್ಯ ಮಾಡುವನು. ಅವರು ಮಾತನಾಡಿಕೊಳ್ಳುವದಕ್ಕೆ ಕಷ್ಟಪಡುತ್ತಿರುವ ಸಮಯದಲ್ಲಿಯೇ ಕೇಪ್ಟನ್ ರೋಬೋಟ್‌ಗೆ ಮತ್ತು ಪ್ರೇಕ್ಷಕರೆಲ್ಲರಿಗೆ ಆ ದಿನದ ಪ್ರತಿಸ್ಪಂದನೆಯನ್ನು ತಿಳಿಸುಕೊಡುವನು :

ಈ ಪಾಠವು ನಡೆಯುತ್ತಿರುವಾಗ, ವಿದ್ಯಾರ್ಥಿ ಪ್ರತೀ ಸಾರಿ "ದೇವರಿಗೆ ಸ್ಪಂದಿಸು" ಎಂದು ಕೇಳಿಸಿಕೊಳ್ಳುವನು, ಅದಕ್ಕೆ ಅವರೆಲ್ಲರೂ "ಹೌದು, ದೇವರೇ!" ಎಂದು ಹೇಳುತ್ತಾ ಅವರ ಕೈಯನ್ನು ಅವರ ಕಿವಿಯ ಹತ್ತಿರ ಇಟ್ಟುಕೊಳ್ಳಬೇಕು (ಕೇಳುವ ಅಭಿನಯ). ಆದನಂತರ, "ನಾನು ಇಲ್ಲಿದ್ದೇನೆ!" ಎಂದು ಹೇಳುವಾಗ ಅವರ ಎರಡು ಕಾಲುಗಳನ್ನು ಸೈನಿಕನಂತೆ ಹತ್ತಿರವಿಟ್ಟುಕೊಳ್ಳಬೇಕು.

ಇವತ್ತು ನೀವೆಲ್ಲರೂ ಆಕಾಶದಲ್ಲೇ 15ನೇ ಅತೀ ಪ್ರಕಾಶಮಾನವಾದ ಅಂಟಾರೀಸ್ ಎನ್ನುವ ದೊಡ್ಡ ನಕ್ಷತ್ರದ ಕಡೆಗೆ ಪ್ರಯಾಣ ಮಾಡುವಿರೆಂದು ಕೇಪ್ಟನ್ ಹಂಚಿಕೊಳ್ಳುವನು. "ಮೆಗಾಂಟೇರ್ಸ್" ಎನ್ನುವ ಅಂತರಿಕ್ಷದ ಸ್ಟೇಷನ್‌ನಲ್ಲಿ ಇಳಿದುಕೊಳ್ಳುವರು ಮತ್ತು ವಿಶ್ವವು ಎಷ್ಟು ದೊಡ್ಡದೋ ಎಂದು ಅಲ್ಲಿಂದ ನೋಡಿವಿರಿ ಎಂದು ಹೇಳುವನು.

(ಅಂಶದ ಹಾಡನ್ನು ಹಾಡಿರಿ, ಆದನಂತರ ವಿಸ್ಫೋಟನೆಯ ಶಬ್ದದ ಟ್ರ್ಯಾಕನ್ನು ಹಾಕಿಕೊಂಡು ಟೇಕಾಫ್ ಮಾಡಿಕೊಳ್ಳಿರಿ.)

ಪ್ರಯಾಣಿಸುತ್ತಿರುವಾಗ, ಅವರು ತಮ್ಮ ಗುರಿಯನ್ನು ಸೇರುವ ಕ್ರಮದಲ್ಲಿ, ಮಿಲ್ಕೀ ವೇ ಎನ್ನುವ ಗೆಲಾಕ್ಸಿಯನ್ನು (ಇದು ವಿಶಾಲವಾದ ರಹದಾರಿಯೆನ್ನುವಂಥೆ) ಹಿಡಿದುಕೊಳ್ಳುವ ಅವಶ್ಯಕತೆಯಿದೆಯೆಂದು ರೋಬೋಟ್‌ಗೆ ಕೇಪ್ಟನ್ ತಿಳಿಸುವನು. ರೋಬೋಟ್ ಸರಿಯಾಗಿ ಕೇಳಿಸಿಕೊಳ್ಳುವದಿಲ್ಲ. ಆದ್ದರಿಂದ ಅವರೆಲ್ಲರೂ ಮಿಲ್ಕೀ ವೇ ಹೆಬ್ಬಾಗಿಲು ನೋಡುವದನ್ನು ಕಳೆದುಕೊಂಡರು ಮತ್ತು ಅವರು ಮತ್ತೊಂದನ್ನು ನೋಡಬೇಕಾದ ಅಗತ್ಯತೆ ಬಂತು. ಕೇಪ್ಟನ್ ರೋಬೋಟ್‌ಗೆ ಎಣ್ಣೆಯನ್ನು ಹಚ್ಚಿದಾಗ, ರೋಬೋಟ್ ಕೇಪ್ಟನ್ ಹೇಳಿದ ಮಾತುಗಳನ್ನೆಲ್ಲಾ ಸರಿಯಾಗಿ ಕೇಳಿಸಿಕೊಳ್ಳುತ್ತಾನೆ. (ಅಂಶದ ಪದವನ್ನು ಅನೇಕಬಾರಿ ಬಳಸಿರಿ : "ದೇವರಿಗೆ ಸ್ಪಂದಿಸು" ಮತ್ತು "ಹೌದು ಕರ್ತನೇ, ನಾನಿಲ್ಲಿದ್ದೇನೆ")

ಬೈಬಲ್ ನಿಂದ ಅಂತರಿಕ್ಷಯಾನಿಕ ತರಬೇತಿಗಾಗಿ ಸರಿಯಾದ ಸಮಯದಲ್ಲಿ ಇಳಿದುಕೊಳ್ಳುತ್ತಾರೆ (ಅಥವಾ ಲ್ಯಾಂಡ್ ಆಗುತ್ತಾರೆ)!

(ಪ್ರೇಕ್ಷಕರೊಂದಿಗೆ ವಿನೋದಾತ್ಮಕವಾದ ಲ್ಯಾಂಡಿಂಗ್ ಆದನಂತರ, ಮುಖ್ಯ ಪಾಠವನ್ನು ಆರಂಭಿಸಿರಿ)



### ಒಳ ಸಂದೇಶ...

ಬೈಬಲ್ ವಾಕ್ಯ

"ಆಗ, ಯಾವನನ್ನು ಕಳುಹಿಸಲಿ, ಯಾವನು ನಮಗೋಸ್ಕರ ಹೋಗುವನು ಎಂಬ ಕರ್ತನ ನುಡಿಯನ್ನು ಕೇಳಿ, ಇಗೋ, ನಾನಿದ್ದೇನೆ, ನನ್ನ ನ್ನು ಕಳುಹಿಸು ಅಂದೆನು." – ಯೆಶಾ.6:8.




### ಮಿಷನ್ ಕಂಟ್ರೋಲ್‌ನಿಂದ ಅರ್ಜೆಂಟ್..

ಮುಖ್ಯ ಪಾಠ

#### ಮೋಶೆ ಮತ್ತು ಉರಿಯುತ್ತಿರು ಪೊದೆ

"ಮೋಶೆ ತನ್ನ ಮಾವನಾಗಿರುವ ಮಿದ್ಯಾನ್ಯರ ಆಚಾರ್ಯನಾದ ಇತ್ರೋನನ ಮಂದೆಯನ್ನು ಮೇಯಿಸುತ್ತಿರುವಾಗ ಆ ಮಂದೆಯನ್ನು ಕಾಡಿನ ಹಿಂಭಾಗಕ್ಕೆ ನಡಿಸಿಕೊಂಡು ಹೋರೇಬ್ ಎಂಬ ದೇವರ ಬೆಟ್ಟಕ್ಕೆ ಬಂದನು. ಅಲ್ಲಿ ಮುಳ್ಳಿನ ಪೊದೆಯೊಳಗೆ ಉರಿಯುವ ಬೆಂಕಿಯಲ್ಲಿ ಯೆಹೋವನ ದೂತನು ಅವನಿಗೆ ಕಾಣಿಸಿಕೊಂಡನು. ಹೇಗಂದರೆ ಅವನು ಒಂದು ಮುಳ್ಳಿನ ಪೊದೆಯನ್ನು ಕಂಡನು. ಆ ಪೊದೆಯು ಬೆಂಕಿಯಿಂದ ಉರಿಯುತ್ತಿದ್ದರೂ ಅದು ಸುಟ್ಟುಹೋಗದೇ ಇತ್ತು. ಆಗ ಮೋಶೆ – ನಾನು ದಾರಿಬಿಟ್ಟು ಈ ಆಶ್ಚರ್ಯವನ್ನು ನೋಡಿ ಪೊದೆಯ ಸುಟ್ಟು ಹೋಗದೆ ಇರುವದಕ್ಕೆ ಕಾರಣವನ್ನು ತಿಳಿಕೊಳ್ಳುವೆನು ಅಂದುಕೊಂಡನು. ನೋಡುವದಕ್ಕೆ ಅವನು ದಾರಿ ಬಿಟ್ಟದ್ದನ್ನು ಯೆಹೋವನು ಕಂಡನು. ದೇವರು ಆ ಪೊದೆಯೊಳಗಿಂದ – ಮೋಶೆಯೇ, ಮೋಶೆಯೇ ಎಂದು ಕರೆದನು. ಅದಕ್ಕವನು – ಇಗೋ, ಇದ್ದೇನೆ ಅಂದನು. ದೇವರು ಅವನಿಗೆ ನೀನು ಹತ್ತಿರ ಬರಬೇಡ; ನಿನ್ನ ಕಾಲಿನ ಕೆರಗಳನ್ನು ತೆಗೆದುಹಾಕು; ನೀನು ನಿಂತಿರುವ ಸ್ಥಳವು ಪರಿಶುದ್ಧ ಭೂಮಿ ಎಂದು ಹೇಳಿದನು.

ಅದಲ್ಲದೇ ಆತನು – ನಾನು ನಿನ್ನ ತಂದೆಯಾದ ದೇವರು, ಅಬ್ರಹಾಮನ ದೇವರು, ಇಸಾಕನ ದೇವರು, ಯಾಕೋಬನ ದೇವರು ಅಂದಾಗ ಮೋಶೆ ದೇವರನ್ನು ನೋಡುವದಕ್ಕೆ ಭಯಪಟ್ಟು ಮುಖವನ್ನು




### ಸಂದೇಶ ವ್ಯವಸ್ಥೆ

ದೇವರಿಗೆ ಸ್ಪಂದಿಸು!

ಈ ಪಾಠವು ನಡೆಯುತ್ತಿರುವಾಗ, ಪ್ರತೀಸಾರಿ ವಿದ್ಯಾರ್ಥಿಗಳು "ದೇವರಿಗೆ ಸ್ಪಂದಿಸು" ಎಂದು ಕೇಳಬೇಕು, ಅದಕ್ಕೆ ಅವರೆಲ್ಲರೂ "ಹೌದು, ಕರ್ತನೇ" ಎಂದು ತಮ್ಮ ಕೈಗಳನ್ನು ತಮ್ಮ ಕಿವಿಗಳ ಹತ್ತಿರ ಇಟ್ಟುಕೊಂಡು ಹೇಳಬೇಕು (ಕೇಳುತ್ತಿರುವ ಅಭಿನಯ). ಆದನಂತರ, "ನಾನು ಇಲ್ಲಿದ್ದೇನೆ!" ಎಂದು ಹೇಳುವಾಗ ಅವರ ಎರಡು ಕಾಲುಗಳನ್ನು ಸೈನಿಕನಂಥೆ ಹತ್ತಿರವಿಟ್ಟುಕೊಳ್ಳಬೇಕು.



www.ChildrenAreImportant.com – Children's ministry resources, Sunday School, and Vacation Bible School (VBS) curriculum for churches and teachers. Kannada



## ಆಸ್ಟ್ರೋನಾಮಿಕಲ್ ಅಬ್ಸರ್ವೇಷನ್

# ದೇವರು ಅದ್ಭುತಕರನು

ಮುಚ್ಚಿಕೊಂಡನು." (ವಿಮೋ.3:1–6).
ಮೋಶೆನೊಂದಿಗೆ ಮಾತನಾಡಲು ತನ್ನನ್ನು ತಾನು ಪ್ರತ್ಯಕ್ಷಪಡಿಸಿಕೊಂಡಿದ್ದಾರೆ, ಇದು ಎಷ್ಟು ಅದ್ಭುತವಾದ ಕಾರ್ಯ!!! ಮೋಶೆಯನ್ನು ದೇವರು ಕರೆದರು ಮತ್ತು ತನ್ನ ಹೆಸರು ಆತನಿಗೆ ಗೊತ್ತಿತ್ತು! ದೇವರು ನಮ್ಮನ್ನು ಕರೆದಾಗ ನಾವೇನು ಮಾಡಬೇಕೆಂದು ಇವತ್ತು ನಾವು ಕಲಿತುಕೊಳ್ಳುತ್ತಿದ್ದೇವೆ.... ಅದೇನಂದರೆ, ದೇವರಿಗೆ ಸ್ಪಂದಿಸಬೇಕು!

ಮೋಶೆ ತನ್ನ ಕುರಿಗಳನ್ನು ಕಾಯುವದರಲ್ಲಿಯೇ ತನ್ನ ಮನಸ್ಸನ್ನು ತೊಡಗಿಸಿಕೊಂಡಿದ್ದನು. ಆ ಸಮಯದಲ್ಲಿ ಮೋಶೆ ಪ್ರಾರ್ಥನೆ ಮಾಡಿರಲಿಲ್ಲ ಅಥವಾ ಯಾವುದೇ ಅತ್ಮೀಯಕವಾದ ಕಾರ್ಯವನ್ನು ಮಾಡಿರಲಿಲ್ಲ. ಅವನು ಕೆಲಸವನ್ನು ಮಾಡುತ್ತಿರುವ ಸಮಯದಲ್ಲಿಯೇ ದೇವರು ಕರೆದಿದ್ದರು. 'ಹೇ, ನೀನು ಅಲ್ಲಿದ್ದೀಯಾ?' ಎಂದು ಆತನು ಹೇಳಲಿಲ್ಲ, ಆದರೆ ಆತನು ಹೆಸರಿಟ್ಟು ಮೋಶೆಯನ್ನು ಕರೆದನು! ಆ ಕ್ಷಣದಲ್ಲಿ "ಮೋಶೆಯೇ ಮೋಶೆಯೇ" ಎಂದು ಅಕಸ್ಮಿಕವಾಗಿ ಬಂದ ಕರೆಯನ್ನು ಕೇಳಿಸಿಕೊಂಡು, ಮೋಶೆಯು ತನ್ನ ಸುತ್ತಮುತ್ತ ತಿರುಗಿ ನೋಡಿರಬಹುದು. ತನ್ನನ್ನು ಯಾರೋ ಕರೆಯುತ್ತಿದ್ದಾರೆಂದು ತಿಳಿದು ತನ್ನ ಸುತ್ತಮುತ್ತ ಮತ್ತು ಆಚೆ ಈಚೆ ನೋಡುವದಕ್ಕೆ ಪ್ರಯತ್ನ ಪಟ್ಟಿರಬಹುದು. ಅವನ ಸುತ್ತ ಯಾರು ಕಾಣಿಸಿಕೊಂಡಿರಲಿಲ್ಲ. ಅವನು ಮಾತ್ರವೇ ಒಬ್ಬಂಟಿಗನಾಗಿದ್ದನು. ಆದನಂತರ ಅವನು ಅದನ್ನು ನೋಡಿದನು. ಒಂದು ಮುಳ್ಳಿನ ಪೊದೆಯು ಬೆಂಕಿಯಲ್ಲಿ ಇರುವದನ್ನು ನೋಡಿದನು!!! ತನ್ನ ಚೀಲದೊಳಗಿನಿಂದ ಫೈರ್ ಎಗ್ಸಿಂಟಿಗಿಷರ್‌ನನ್ನು ಹೊರ ತೆಗೆದುಕೊಂಡು, ಆ ಬೆಂಕಿಯನ್ನು ಆರಿಸುವದಕ್ಕೆ ಪ್ರಯತ್ನಪಟ್ಟಿರುತ್ತಾನೆಂದು ನೀವು ಯೋಚಿಸುತ್ತಿದ್ದೀರಾ? ಆ ಪೊದೆಯು ನಿಜವಾಗಿ ಉರಿಯುತ್ತಿಲ್ಲವೆಂದು ತಿಳಿದ ಆ ಕ್ಷಣವೇ ಅದು ಏನೆಂಬುವದನ್ನು ನೋಡಬೇಕೆಂದು ಒಂದುವೇಳೆ ಅಲ್ಲಿಗೆ ಹೋಗಿರಬಹುದು. ಅದು ಉರಿಯುತ್ತಿದೆ, ಆದರೆ ಅದು ಸುಟ್ಟು ಹೋಗುತ್ತಾಯಿಲ್ಲ! ಅದಲ್ಲದೇ, ಆ ಪೊದೆಯು ಮೋಶೆಯನೊಂದಿಗೆ ಮಾತನಾಡಲು ಆರಂಭಿಸಿತು! ಅದಕ್ಕೆ ಮೋಶೆ, "ನಾನು ದೇವರಿಗೆ ಸ್ಪಂದಿಸಬೇಕೋ?" ಎನ್ನುವ ಆಲೋಚನೆ ಬಂದಿರಬಹುದು.

ನಾನು ಮತ್ತು ನೀವೆಲ್ಲರೂ ಕೂಡ ಸಹಜವಾಗಿ ಆ ರೀತಿಯಾದ ಉರಿಯುತ್ತಿರುವ ಪೊದೆಯನ್ನು ನೋಡಿರುವದಿಲ್ಲ ಮತ್ತು ಆ ರೀತಿಯಾಗಿ ದೇವರು ನಮ್ಮ ಜೊತೆಯಲ್ಲಿ ಮಾತನಾಡಿರುವದಿಲ್ಲ, ಆದರೆ ಎಲ್ಲಾ ಸಮಯದಲ್ಲಿ ದೇವರು ನಮ್ಮೊಂದಿಗೆ ಮಾತನಾಡುವದಕ್ಕೆ ಇಷ್ಟಪಡುತ್ತಿದ್ದಾನೆ. ದೇವರು ನಿಮ್ಮೊಂದಿಗೆ ಮಾತನಾಡಲು, ನಿಮ್ಮೊಂದಿಗೆ ಸಮಯವನ್ನು ಕಳೆಯಲು ಅಥವಾ ನಿಮಗೆ ಮಾರ್ಗದರ್ಶಿಯಾಗಿರಲು ಯಾವಾಗಲೂ ಪ್ರಯತ್ನ ಮಾಡುತ್ತಿರುತ್ತಾರೆ. ಇಲ್ಲಿ ವಿಷಯವೇನಂದರೆ, ನಮ್ಮಲ್ಲಿರುವ ಕೆಲವರು ಮಾತ್ರವೇ ಆ ಮಾತುಗಳಿಗೆ ಕಿವಿಗೊಡುತ್ತಿದ್ದಾರೆ. ಉಳಿದವರೆಲ್ಲರೂ ದಿನವೆಲ್ಲಾ ದೇವರನ್ನು ನಿರ್ಲಕ್ಷ್ಯ ಮಾಡುತ್ತಿದ್ದಾರೆ. ಆತನು ಸಜೀವವುಳ್ಳವನು ಎನ್ನುವ ವಿಷಯವನ್ನು ಅಥವಾ ಆತನು ನಮ್ಮೊಂದಿಗೆ ಮಾತನಾಡಲು ಬಯಸುತ್ತಿದ್ದಾನೆ ಎನ್ನುವದನ್ನು ಕೂಡ ಮರೆತಿದ್ದಾರೆ. ಎಂದಿಗಾದರೂ ನೀವು ದೇವರಿಗೆ ಸ್ಪಂದಿಸುವಿರೆನ್ನುವ ನಿರೀಕ್ಷೆ ದೇವರಲ್ಲಿದೆ! ನಿಜವಾಗಿ ನಮ್ಮ ದೇವರು ಆಶ್ಚರ್ಯಕರನಲ್ಲವೋ?

ಈ ದಿನದಂದು ನಾವು ಮಾಡುತ್ತಿರುವಂಥೆ ಆ ದಿನದಂದು ದೇವರನ್ನು ನಿರ್ಲಕ್ಷ್ಯ ಮಾಡಬೇಕೆಂದು ಮೋಶೆ ತನ್ನ ಮನಸ್ಸಿನಲ್ಲಿ ನಿರ್ಣಯಿಸಕೊಳ್ಳಬಹುದದಾಗಿತ್ತು. ಆದರೆ ಅವನು ನಿಂತು, ದೇವರ ಮಾತುಗಳನ್ನು ಕೇಳಿಸಿಕೊಂಡನು. ಸ್ಪಂದಿಸುವದಕ್ಕೆ ತನ್ನ ಬಾಯಿಯನ್ನು ಮತ್ತು ತನ್ನ ಹೃದಯವನ್ನು ತೆರೆದನು. "ಹೌದು ಕರ್ತನೇ, ನಾನಿಲ್ಲಿದ್ದೇನೆ" ಎನ್ನುವ ಈ ಮಾತಿನೊಂದಿಗೆ ದೇವರಿಗೆ ಉತ್ತರಕೊಟ್ಟನು. ಬಾನಿಸತ್ವದಲ್ಲಿರುವ ಇಸ್ರಾಯೇಲ್ಯರನ್ನು ರಕ್ಷಿಸಬೇಕೆನ್ನುವ ದೊಡ್ಡ ಸಂಕಲ್ಪ ದೇವರದಾಗಿತ್ತು. ಮೋಶೆಯನ್ನು ಉಪಯೋಗಿಸುಕೊಳ್ಳಬೇಕೆಂದು ಆತನ ಬಯಕೆಯಾಗಿತ್ತು. ಯಾವ ಫ್ಯಾಶನ್ ಪದಗಳನ್ನು ಬಳಸದೇ, ಕೇವಲ "ನಾನಿಲ್ಲಿದ್ದೇನೆ" ಎನ್ನುವ ಅತೀ ಚಿಕ್ಕ ಮಾತಿನಿಂದ ದೇವರ ಕರೆಗೆ ಮೋಶೆ ಉತ್ತರಕೊಟ್ಟನು. ನಿಮ್ಮ ಜೀವನದಿಂದಲೂ ಅನೇಕವಾದ ಅದ್ಭುತ ಕಾರ್ಯಗಳನ್ನು ಮಾಡಬೇಕೆಂದು ದೇವರು ಬಯಸುತ್ತಿದ್ದಾನೆ! ನಿಮಗಾಗಿ ಆತನ ಹತ್ತಿರ ಆಶ್ಚರ್ಯಕರವಾದ ಪ್ರಣಾಳಿಕೆಗಳುಂಟು, ಆದರೆ ನೀವು ನಿಂತು, ಆತನ ಮಾತುಗಳನ್ನು ಕೇಳಬೇಕಷ್ಟೆ. ನೀವು ದೇವರಿಗೆ ಸ್ಪಂದಿಸಬೇಕೆಂದು ದೇವರು ಬಯಸುತ್ತಿದ್ದಾನೆ.

**ಮೆಸ್ ಹಾಲ್** ಅಲ್ಪಾಹಾರ ಕೇಂದ್ರ





## ಮೋಶೆಯ ಉರಿಯುತ್ತಿರುವ ಪೊದೆ

ಬ್ರೊಕಲಿ ತರಕಾರಿ ಹಸಿರು ಪೊದೆಗಳಂತೆ ಕಾಣುವದು ಮತ್ತು ಮೋಶೆ ನೋಡಿದ ಉರಿಯುತ್ತಿರುವ ಪೊದೆಯನ್ನು ಅದು ಸೂಚಿಸುವದು.

ಹೂಕೋಸು ಕೂಡ ಚಿಕ್ಕ ಮರಗಳಂತೆ ಕಾಣಿಸಿಕೊಳ್ಳುವದು. ಅಗ್ನಿಜ್ವಾಲೆಗಳಾಗಿ ಕಾಣಿಸಿಕೊಳ್ಳುವಂಥೆ ಅವುಗಳನ್ನು ತೆಗೆದುಕೊಂಡು ಕೆಚಪ್‌ನಲ್ಲಿ ಹಾಕಿ ತೆಗೆಯಿರಿ, ಅಥವಾ ನಿಜವಾದ ಅಗ್ನಿಜ್ವಾಲೆಗಳಾಗಿ ಕಂಡುಬರಲು ಬಿಸಿ ಸಾಸ್‌ನೊಳಗೆ ಹಾಕಿ ತೆಗೆಯಿರಿ!







## ಫ್ಯಾಕ್ಟಾಯಿಡ್

(ಅಲ್ಪಾಹಾರವನ್ನು ತೆಗೆದುಕೊಳ್ಳುತ್ತಿರುವಾಗ ಅಂತರಿಕ್ಷ ಅನ್ವಯದ ಕುರಿತಾಗಿ ಚರ್ಚಿಸಕೊಳ್ಳಬಹುದು)

## ಅದ್ಭುತವಾದ ಅಳತೆ

ನಮ್ಮ ಹೆಸರುಗಳು ದೇವರಿಗೆ ಗೊತ್ತು ಮತ್ತು ಆತನು ನಮ್ಮನ್ನು ಪ್ರೀತಿಸುತ್ತಿದ್ದಾನೆ, ಈ ವಿಶ್ವದಲ್ಲಿ ನಾವು ದೊಡ್ಡವರೆಂದು ಮತ್ತು ಅತೀ ಪ್ರಾಮುಖ್ಯವಾದವರೆಂದು ಎಣಿಸಿಕೊಳ್ಳಬೇಕು. ಮಂಗಳ ಗ್ರಹಕ್ಕೆ, ಬುಧನಿಗೆ, ಶುಕ್ರನಿಗೆ ಮತ್ತು ಪ್ಲುಟೋಗೆ ನಮ್ಮ ಭೂ ಗ್ರಹವನ್ನು ಹೋಲಿಸಿದಾಗ, ಹೇಗೆ ದೊಡ್ಡದಾಗಿ ಕಾಣಿಸಿಕೊಳ್ಳುವದೋ ಹಾಗೆಯೇ ನಾವು ಕಾಣಿಸಿಕೊಳ್ಳುತ್ತೇವೆ. (2ನೇ ಪೋಸ್ಟರ್‌ನನ್ನು ತೋರಿಸಿರಿ) ಆದರೆ ನೀವು ಗುರು ಗ್ರಹಕ್ಕೆ, ಶನಿ ಗ್ರಹಕ್ಕೆ, ಯುರೇನಸ್‌ಗೆ ಮತ್ತು ನೆಪ್ಚೂನ್‌ಗೆ ನಮ್ಮ ಗ್ರಹವನ್ನು ಹೋಲಿಸಿದರೆ, ಚಿಕ್ಕದಾಗಿ ಕಾಣಿಸಿಕೊಳ್ಳುವದು. (3ನೇ ಪೋಸ್ಟರ್‌ನನ್ನು ತೋರಿಸಿರಿ) ವಿಶ್ವಕ್ಕೆ ಸಂಬಂಧಪಟ್ಟ ಇನ್ನೂ ಕೆಲವು ಪೋಸ್ಟರ್‌ಗಳು ಇಲ್ಲಿವೆ ಅವುಗಳನ್ನು ಸಹ ನೋಡಿರಿ. (4–6ರ ವರೆಗೆ ಇರುವ ಪೋಸ್ಟರ್‌ಗಳನ್ನು ತೋರಿಸಿರಿ) ಇಂಥಹ ಅತೀ ದೊಡ್ಡ ವಿಶ್ವದಲ್ಲಿ ದೇವರು ನಿನ್ನನ್ನು ನೋಡಬಲ್ಲ ಮತ್ತು ನಿಮ್ಮ ಹೆಸರುಗಳನ್ನು ತಿಳಿದುಕೊಂಡಿರುವನು, ಆದರೆ ಆತನು ನಿಮ್ಮನ್ನು ಕರೆಯುವಾಗ ಆತನಿಗೆ ಸ್ಪಂದಿಸಬೇಕು. ಇವಾಗ ನೀವು ಅತೀ ಪ್ರಾಮುಖ್ಯವಾದವರೆಂದು ತಿಳಿಯಿರಿ, ಆದರೆ ನಿಜಕ್ಕೂ ಈ ವಿಶ್ವದಲ್ಲಿ, ನೀವು ತುಂಬಾ ತುಂಬಾ ತುಂಬಾ ಚಿಕ್ಕವರು.



www.ChildrenAreImportant.com – Children's ministry resources, Sunday School, and Vacation Bible School (VBS) curriculum for churches and teachers. Kannada

ಇಂಜಿನೀರಿಂಗ್




ಇಂಜಿನೀರಿಂಗ್

## ಉರಿಯುತ್ತಿರುವ ಪೊದೆ

ಬೇಕಾದ ವಸ್ತುಗಳು :
ಪ್ರತಿ ವಿದ್ಯಾರ್ಥಿಗಾಗಿ ಆ ಚಿತ್ರವನ್ನು ಮುದ್ರಿಸಿ ಕಾಪಿ ಮಾಡಿಕೊಡಿರಿ
ಹರಿದ ಚಿಕ್ಕ ಚಿಕ್ಕ ಟಿಷ್ಯೂ ಕಾಗದಗಳು
ಕ್ರಯಾನ್‌ಗಳು
ಸೂಚನೆಗಳು :

1. ಪೊದೆಯಂತೆ ಇರುವವಗಳನ್ನು ಮಾಡಿಕೊಳ್ಳಿರಿ, ಅಥವಾ ಮಕ್ಕಳೇ ಆ ಚಿತ್ರವನ್ನು ಬಿಡಿಸಲು ಅನುಮತಿಸಿರಿ.
2. ಕೊಂಬೆಗಳಿಗೆ ಕಂದು ಬಣ್ಣವನ್ನು ಹಚ್ಚಿರಿ.
3. ಒಂದು ಕಟ್ಟಿಗೆಗೆ ಸುತ್ತ ಮುತ್ತ ಟಿಷ್ಯೂ ಕಾಗದವನ್ನು ಗಟ್ಟಿಯಾಗಿ ಹಚ್ಚಿರಿ, ಕ್ರಯಾನ್ ಅಥವಾ ಪೆನ್ಸಿಲ್, ಆದನಂತರ ಅದನ್ನು ಎಲೆಗಳನ್ನು ಮತ್ತು ಜ್ವಾಲೆಗಳನ್ನು ಬಿಡಿಸುವಂತೆ ಚಿತ್ರದ ಮೇಲೆ ಒಂದು ಅಂಟುನೊಳಗೆ ಒತ್ತಿರಿ.
4. ಅವರ ಚಿತ್ರದಲ್ಲಿ ಮಕ್ಕಳು ತಮ್ಮ ಸ್ವಂತ ಆಲೋಚನೆಗಳಿಂದ ಅನೇಕ ಚಿತ್ರಗಳನ್ನು ಬಿಡಿಸಬಹುದು, ಅವು ಯಾವುವೆಂದರೆ, ಕಲ್ಲುಗಳು, ಮರಳು, ಮರುಭೂಮಿಯನ್ನು, ಗುಡ್ಡ ಬೆಟ್ಟಗಳನ್ನು, ಸೂರ್ಯನನ್ನು, ಚಂದ್ರನನ್ನು, ಇನ್ನೂ ಅನೇಕವಾದವುಗಳನ್ನು ತಾವೇ ಸ್ವಂತವಾಗಿ ಬಿಡಿಸಬಹುದು. ನಿಮಗೆ ಸಮಯವಿದ್ದರೇ, ನಿಮ್ಮ ಮಕ್ಕಳು ಸೃಜನಾತ್ಮಕವಾಗಿ ಕೆಲಸ ಮಾಡಿಸಿರಿ!

ಕ್ಯಾಡೆಟ್ ತರಗತಿ





ಕ್ಯಾಡೆಟ್ ತರಗತಿ

### ದೇವರಿಗೆ ಸ್ಪಂದಿಸು!

ಮೊತ್ತೊಂದು ಬಾರಿ ಕಥೆಯನ್ನು ಪುನಃರಾವೃತ ಮಾಡಿಕೊಳ್ಳಿರಿ, ಚಿಹ್ನೆಯ ಭಾಷೆಯಲ್ಲಿ ಈ ಪದಗಳನ್ನು ಬೋಧಿಸಿರಿ. ಆದನಂತರ ವಿದ್ಯಾರ್ಥಿ ಪುಸ್ತಕಗಳನ್ನು ಹಂಚಿರಿ ಮತ್ತು ಪಜಿಲ್‌ಗಳನ್ನು ಮಾಡುತ್ತಿರುವಾಗ ಅವರೊಂದಿಗೆ ಸಹಾಯಕರೊಬ್ಬರನ್ನು ಇಟ್ಟುಕೊಳ್ಳಿರಿ.

### ದೇವ ದೂತನು



ಹೆಗಲ ಮೇಲೆ ಬೆರಳುಗಳನ್ನಿಟ್ಟು; ಒಳಗೆ ಮತ್ತು ಹೊರಗೆ, ಮೇಲೆ ಕೆಳಗೆ ಕೈಗಳನ್ನು ಆಡಿಸಬೇಕು.

### ಕೇಳಿರಿ



ನಿಮ್ಮ ಬಲ ಕಿವಿಯ ಸಮಾನವಾಗಿ ನಿಮ್ಮ ಅಂಗೈಯನ್ನು ಇಟ್ಟು, ಮುಂದಕ್ಕೆ ತೋರಿಸುತ್ತಾ; ನಿಮ್ಮ ತಲೆಯನ್ನು ಎಡಗಡೆಗೆ ತಿರುಗಿಸಿರಿ.

### ಮೋಶೆ



ನಿಮ್ಮ ಹೆಬ್ಬೆರಳನ್ನು ಮತ್ತು ತೋರು ಬೆರಳನ್ನು ನಿಮ್ಮ ಹಣೆ ಮತ್ತು ಕಿವಿಯ ನುಡುವಿನ ಭಾಗಕ್ಕೆ ತೋರಿ; ನಿಮ್ಮ ಕೈಗಳನ್ನು ಎರಡು ಕಡೆಗಳಿಗೆ ತಿರುಗಿಸುವಾಗ ನಿಮ್ಮ ಬೆರಳುಗಳನ್ನು ಮುಚ್ಚಿಕೊಳ್ಳಿ.

ಆಟಗಳಿಗೋಸ್ಕರ ಮತ್ತು ಮುಕ್ತಾಯ ಮಾಡುವದಕ್ಕೋಸ್ಕರ ಸೇತುವೆಯ ಹತ್ತಿರಕ್ಕೆ ಬರುವದು.

ಸೇತುವೆ

## ಕುಡಿಯುವ ರಿಲೇ ಪಂದ್ಯ

ಒಂದೊಂದು ಗುಂಪಿನಿಂದ ಮುವ್ವರು ಮಕ್ಕಳನ್ನು ಸಾಲಾಗಿ ನಿಲ್ಲಿಸಿ. ಪ್ರತಿಯೊಂದು ಗುಂಪಿಗಾಗಿ ಕೊಠಡಿಯ ಮತ್ತೊಂದು ಕಡೆ ಒಂದು ಮೇಜಿನಮೇಲೆ ಬಿಂದಿಗೆಯಲ್ಲಿ ನೀರನ್ನಿಡಿ. ಭಾಗವಹಿಸುತ್ತಿರುವ ಪ್ರತಿಯೊಂದು ಮಗುವಿಗೆ ಒಂದು ಪೈಪನ್ನು ನೀಡಿ. ವಿದ್ಯಾರ್ಥಿಗಳು ಮೆಜಿನ ಕಡೆಗೆ ಓಡಿ ನಾಯಕನು ವಿಜಲ್ ಹಾಕುವವರೆಗು ನೀರು ಕುಡಿಯುತ್ತಿರುವರು. ಅವರು ಹಿಂತಿರುಗಿ ಓಡಿದಾಗ ಮತ್ತೊಬ್ಬ ವಿದ್ಯಾರ್ಥಿಯು ಓಡಿಬಂದು ನೀರು ಕುಡಿಯುವುದನ್ನು ಪ್ರಾರಂಭಿಸುವನು. ಸಮಯವಾದ ನಂತರ ವಿಜೇತ ತಂಡವರ ಬಳಿ ಸ್ವಲ್ಪ ನೀರು ಉಳಿಡಿರುತ್ತದೆ. (ಅಥವಾ ಮೊದಲು ನೀರು ಮುಗಿಸುವರು.)

## ಬಾಳೆ ಹಣ್ಣು ತಿನ್ನುವ ಪಂದ್ಯ


ಒಂದೊಂದು ಗುಂಪಿನಿಂದ ಒಂದು ಮಗುವನ್ನು ಎನ್ನಿಸಿಕೊಳ್ಳಿರಿ, ಅವರು ಬಾಳೆ ಹಣ್ಣಿನ ಸಿಪ್ಪೆ ಬಿಡಿಸಿ ಹಣ್ಣನು ತಿನ್ನಬೇಕು. ಆದರೆ ಅವರ ಒಂದು ಕೈ ಹಿಂಬದಿಯಲ್ಲಿರಬೇಕು. ನಾಯಕನು 'ಹೋಗು' ಎಂದು ಹೇಳಿದ ಕೂಡಲೆ, ಮಕ್ಕಳೆಲ್ಲ ಒಂದು ಕೈ ಮತ್ತು ಹಲ್ಲುಗಳನ್ನು ಉಪಯೋಗಿಸಿ ಬಾಳೆ ಹಣ್ಣಿನ ಸಿಪ್ಪೆ ಬಿಡಿಸಲು ಆರಂಭಿಸಬೇಕು. ಆ ಸಿಪ್ಪೆಯನ್ನು ಬಿಡಿಸಿದ ಕೂಡಲೆ, ಅವರು ಗೆಲ್ಲಲು ಆ ಪೂರ್ತಿ ಹಣ್ಣನ್ನು ತಿನ್ನಬೇಕು.



www.ChildrenAreImportant.com – Children's ministry resources, Sunday School, and Vacation Bible School (VBS) curriculum for churches and teachers. Kannada


# 3ನೇ ಅಂತರಿಕ್ಷ ಯಾನ

## ದೇವರಿಗೆ ವಿಧೇಯನಾಗು!




ಅಂತರಿಕ್ಷದ ಉಪಕರಣಗಳು:

ವೆಲಾಸಿಟರ





ಪ್ರಾರಂಭದ ನಾಟಕ

### ವಿಸ್ಫೋಟನೆ!

ಇಂದು ರೋಬೋಟ್ ದೂರು ಹೇಳುತ್ತಿದ್ದಾನೆ ಎಕೆಂದರೆ ಕಳೆದ ರಾತ್ರಿ ಸಾಕಷ್ಟು ನಿದ್ರೆ ಮಾಡಿಲ್ಲ, ಮತ್ತು ಅವನು ಈಗ ಹಗುರವಾಗಿ ನಿದ್ರೆ ಮಾಡಲು ಇಚ್ಚಿಸುತ್ತಿದ್ದಾನೆ. ಕಳಚುವಿಕೆಯಬಗ್ಗೆ ಸಿದ್ದತೆ ಮಾಡಲು ಕೇಪ್ಟೆನ್ ಹೇಳಿದ ಪ್ರತಿಸಾರಿ, ರೋಬೋಟ್ ವಿಧೇಯನಾಗಲು ಇಷ್ಟಪಡುತಿಲ್ಲಾ, ಮತ್ತು ಬೇಸರಗೊಂಡಹಾಗೆ ಕಾಣುತ್ತಿದೆ. ರೋಬೋಟ್ ಅವಿಧೇಯನಾಗಿ ಇದ್ದು ಅವರು ಒದ್ದಾಡುತಿರುವಾಗ, ಪ್ರೇಕ್ಷಕರಿಗೆ ಆ ದಿನದ ಪದವನ್ನು "ದೇವರಿಗೆ ವಿಧೇಯನಾಗು" ಎಂಬುದನ್ನು ಪ್ರತಿಸ್ಪಂದನೆಯೊಂದಿಗೆ ಬೋಧಿಸಿ. ಪ್ರೇಕ್ಷಕರೆಲ್ಲ ಜಿಗಿದು ಮುನ್ನಡೆಯುತ್ತ "ನಾನು ಸಾಗುತ್ತಿರುವೆನು" ಎಂದು ಹೇಳಿ, ಅವರ ಸ್ಥಾನಗಳನ್ನು ಬರೆಯವರೊಂದಿಗೆ ಬದಲಿಸಿಕೊಳುತ್ತಾರೆ! ಇಂದಿನ ತರಗತಿಯ ಮುಖ್ಯ ಉದ್ದೇಶವೇನಂದರೆ ಪ್ರೇಕ್ಷಕರು ಅವರ ಆಸನಗಳನ್ನು ಬದಲಿಸುತ್ತಲೇ ಇರುವರು, ಅವರು ಕಾರ್ಯನಿರತರಾಗಿರುವರು ಮತ್ತು "ದೇವರಿಗೆ ವಿಧೇಯನಾಗು" ಎಂಬುವ ಪದವನ್ನು ಕೇಳುವರು.

ರೋಬೋಟ್ ಪ್ರಾರಂಭದಲ್ಲಿ ಸರಿಯಾಗಿಯಿಲ್ಲದೆ ಮತ್ತು ಶಬ್ಧಗಳನ್ನುಂಟು ಮಾಡುತ್ತಾ ಮಾತನಾಡದೇಯಿದ್ದರು, ಕೇಪ್ಟೆನ್ ರೋಬೋಟನನ್ನು ಎಬ್ಬಿಸಲು ಹೆಚ್ಚಾದ ಕೆಫೆನ್‌ನೊಂದಿಗೆ ತುಂಬಿದ ದೊಡ್ಡ ಕೋಕ–ಕೋಲವನು ಅವನಿಗೆ ಕೊಟ್ಟನು. (ಪೋಸ್ಟರ್ ಬೋರ್ಡ್ ಅಥವಾ ಕಾರ್ಡ್ ಬೋರ್ಡ್‌ನಿಂದ ಒಂದು ದೊಡ್ಡ ಕೋಕ್ ಅಥವ ಕಾಫ್ಫೀಯನ್ನು ಮಾಡಿ) ಈಗ ರೋಬೋಟ್ ತುಂಬ ಚುರುಕಾಗಿ ಈ ಪ್ರಾಂತವೆಲ್ಲ, ಅವನು ಅಂತರೀಕ್ಷ ನೌಕೆಗಿಂತ ಅಥವಾ ಧೂಮಕೇತುವಿಗಿಂತ ಅಥವ ಕಾಂತಿವೇಗಕ್ಕಿಂತ ವೇಗವಾಗಿ ತಿರುಗಾಡುವವನು.

ಅಂಶದ ಹಾಡನ್ನು ಹಾಡಿರಿ ಮತ್ತು ಅಂತರಿಕ್ಷಕ್ಕೆ ಟೇಕಾಫ್ ಮಾಡಿರಿ. ಈ ಹೊತ್ತಿನಲ್ಲಿ ಅವರು ಎಲ್ಲಿಗೆ ಹೋಗುತ್ತಿರುವದು ರೋಬೋಟನಿಗೆ ತಿಳಿಯದ ಕಾರಣ, ಕೇಪ್ಟನ್ ಅವನಿಗೆ ಹೇಳುತ್ತಿದ್ದಾನೆ. ಅವರು ಹತ್ತಿರವಿರುವ ನಕ್ಷತ್ರದ ಕಡೆಗೆ ಹೋಗುತ್ತಿರುವರು ಮತ್ತು "ವೆಲೊಸಿಸ್ಟಾರ್" ಎಂಬ ಬಾಹ್ಯಾಕಾಶದ ಸ್ಟೇಷನ್‌ನಲ್ಲಿ ಇಳಿದು ಅಲ್ಲಿ ಚಲನೆಯ ಬಗ್ಗೆ ಕಲಿಯುತ್ತಾರೆ. (ಈ ಎಲ್ಲಾ ಸಮಯವು ರೋಬೋಟ್ ಆ ಪ್ರಾಂತವನ್ನೆಲ್ಲಾ ತಿರುಗಾಡುತ್ತಿರುವನು.) ಅವರು ತುಂಬಾ ಶೀಘ್ರವಾಗಿ ಅಲ್ಲಿಗೆ ಲ್ಯಾಂಡ್ ಆಗಿದ್ದರು, ಇದರಿಂದ ಈ ಇಡೀ ವಾರದಲ್ಲಿ ಇವತ್ತು ಮಾಡಿದ ಪ್ರಯಾಣವು ಅತೀ ಕಡಿಮೆ ಸಮಯದಲ್ಲಿ ನಡೆದಿತ್ತು (ಯಾಕೆಂದರೆ ನಾವು ಅತಿ ಸಮೀಪವಾದ ನಕ್ಷತ್ರವನ್ನು ಸಂದರ್ಶಿಸಲು ಹೋಗುತ್ತಿದ್ದೇವೆ), ಪಾತಾಂಶದೊಳಗೆ ಪ್ರವೇಶಿಸಿರಿ. ಅಲ್ಲಿ ಲ್ಯಾಂಡ್ ಆದನಂತರ ರೋಬೋಟ್ ಉತ್ಸಾಹದಿಂದ ಓಡಾಡುತ್ತಿದ್ದನು, ಕೇಪ್ಟನ್ ಅವನನ್ನು ಅಟ್ಟಿಸಿಕೊಂಡು ಹೊರಗೆ ಹೋದರು.



### ಒಳ ಸಂದೇಶ...

ಬೈಬಲ್ ವಾಕ್ಯ

"ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವವನು ಆತನಲ್ಲಿ ನೆಲೆಗೊಂಡಿರುತ್ತಾನೆ, ಆತನು ಇವನಲ್ಲಿ ನೆಲೆಗೊಂಡಿರುತ್ತಾನೆ. ನಮ್ಮಲ್ಲಿ ನೆಲೆಗೊಂಡಿದ್ದಾನೆಂದು ಆತನು ನಮಗೆ ಅನುಗ್ರಹಿಸಿದ ಆತ್ಮನಿಂದಲೇ ಬಲ್ಲೆವು."
– 1 ಯೋಹಾ.3:24.



### ಮಿಷನ್ ಕಂಟ್ರೋಲ್‌ನಿಂದ ಅರ್ಜೆಂಟ್..


ಮುಖ್ಯ ಪಾಠ

ಐಗುಪ್ತ್ಯದಲ್ಲಿ ಮಾರಿರೋಗಗಳು

"ಈಗ ಕೇಳು, ಇಸ್ರಾಯೇಲ್ಯರ ಕೂಗು ನನಗೆ ಮುಟ್ಟಿತು; ಐಗುಪ್ತ್ಯರು ಅವರಿಗೆ ಕೊಡುವ ಉಪದ್ರವವನ್ನು ನಾನು ನೋಡಿದ್ದೇನೆ. ಆದದರಿಂದ ನನ್ನ ಜನರಾಗಿರುವ ಇಸ್ರಾಯೇಲ್ಯರನ್ನು ಐಗುಪ್ರದೇಶದಿಂದ ಹೊರಗೆ ಬರ ಮಾಡುವವದಕ್ಕೆ ನಿನ್ನನ್ನು ಫರೋಹನ ಬಳಿಗೆ ಕಳುಹಿಸುತ್ತೇನೆ ಬಾ ಅಂದನು.... ನೀನು ಹೊರಟುಹೋಗು; ನಾನು ನಿನ್ನ ಬಾಯಿಗೆ ಸಹಾಯವಾಗಿದ್ದು ನೀನು ಮಾತಾಡಬೇಕಾದದ್ದನ್ನು ಬೋಧಿಸುವೆನು ಎಂದು ಹೇಳಿದನು." ಅದಕ್ಕೆ ಮೋಶೆ, "ಸ್ವಾಮಿ, ಈ ಕಾರ್ಯಕ್ಕೆ ಬೇರೊಬ್ಬನನ್ನು ನೇಮಿಸಬೇಕು ಎನ್ನಲು ಯೆಹೋವನು ಅವನ ಮೇಲೆ ಕೋಪಗೊಂಡು....

ಆ ಮೇಲೆ ಮೋಶೆ ತನ್ನ ಮಾವನಾದ ಇತ್ರೋನನ ಬಳಿಗೆ ಹಿಂದಿರುಗಿ ಬಂದು – ಅಪ್ಪಣೆಯಾದರೆ ನಾನು ಐಗುಪ್ತದೇಶದಲ್ಲಿರುವ ಸ್ವಜನರ ಬಳಿಗೆ ತಿರಿಗಿ ಹೋಗಿ ಅವರು ಜೀವದಿಂದಿದ್ದಾರೋ ಏನೋ ನೋಡುವೆನು. (ವಿಮೋಚನಕಾಂಡ 3:9–10, 4:12–18)

ವಿಧೇಯತೆ ತೋರಿಸುವದು ತುಂಬ ಕಷ್ಟಕರವಾದ ಕಾರ್ಯ. ಯಾರು ವಿಧೇಯರಾಗಿರಲು ಇಷ್ಟ ಪಡುವುದಿಲ್ಲ. ಯಾರೆಯಾಗಲಿ ಅವರು ಮಾಡುವ ಕೆಲಸ ನಿಲ್ಲಿಸಿ ಬೇರೆಯವರಿಗೆ ವಿಧೇಯರಾಗಿರಲು ಇಷ್ಟ ಪಡುವುದಿಲ್ಲ. ಪ್ರತ್ಯೇಕವಾಗಿ ದೇವರಿಗೆ ವಿಧೇಯರಾಗಿರಲು ಬಹಳ ಕಷ್ಟಕರವಾದ್ದದು ಯಾಕಂದರೆ ನಾವು ದೇವರನ್ನು



### ಸಂದೇಶ ವ್ಯವಸ್ಥೆ

"ದೇವರಿಗೆ ವಿಧೇಯನಾಗು!"

ಪಾಠ ನಡೆಯುತ್ತಿರುವಾಗ "ದೇವರಿಗೆ ವಿಧೇಯನಾಗು" ಎಂದು ಕೇಳಿದ ಪ್ರತಿಸಲ ವಿದ್ಯಾರ್ಥಿಗಳು "ನಾನು ಸಾಗುತ್ತಿರುವೆನು" ಎಂದು ಹೇಳಿ ಎದ್ದು ನಿಂತು, ಅವರವರ ಸ್ಥಾನಗಳನ್ನು ಬೇರೆ ವಿದ್ಯಾರ್ಥಿಗಳೊಂದಿಗೆ ಬದಲಿಸಿಕೊಳುತ್ತಾ ಇರಬೇಕು.



www.ChildrenAreImportant.com – Children's ministry resources, Sunday School, and Vacation Bible School (VBS) curriculum for churches and teachers. Kannada


ಕಾಣುವುದಿಲ್ಲ ಮತ್ತು ಆತನು ಅಸ್ತಿತ್ವದಲ್ಲಿಲ್ಲವೆಂದು ಭಾವಿಸಿ ಆತನಿ ವಿಧೇಯತೆಯನ್ನು ತೋರುವುದಿಲ್ಲ. ಎಲ್ಲರು ಅವರ ಸ್ವಂತ ಕಾರ್ಯಗಳನ್ನು ಮಾಡಲು ಬಯಸುತ್ತಾರೆ. ನೀವು ನಿಮ್ಮ ತಂದೆ ತಾಯಿಯರಿಗೆ ವಿಧೇಯರಾಗಿಲ್ಲದಿದ್ದರೇ ಏನಾಗುವುದು ಗೊತ್ತೆ? ನೀವು ಒಬ್ಬಂಟರಲ್ಲಾ! ಮನುಷ್ಯ ಜಾತಿಯೇ ಈ ರೀತಿಯಾಗಿ ಹುಟ್ಟಿ ಬಂದಿದೆ. ನಿವು ತಿಳಿದಿರುವ ಹಾಗೆ ನಾವು ಚಿಕ್ಕ ಮುದ್ದಾದ ಪಶು ಪಕ್ಷಿಗಳಾಗಿ ಹುಟ್ಟಲಿಲ್ಲ. ನಾವು ಸ್ವಾರ್ಥಿಗಳಾಗಿ ಹುಟ್ಟಿ, ಈ ಸರ್ವ ಪ್ರಪಂಚವು ನಮ್ಮ ಸುತ್ತಲು ಸುತ್ತುತ್ತದೆ ಎಂದು ಯೋಚಿಸುತ್ತೇವೇ. ಕೆಲವೊಮ್ಮೆ ದೇವರಿಗೆ ವಿಧೇಯರಾಗಿರಬೇಕೆಂದು ಗೊತ್ತಿದ್ದು, ಅದನ್ನು ನಾವು ಮಾಡುವದಿಲ್ಲ. ನಾವು ಗಡಿಬಿಡಿಯಾಗಿ, ಅದರಿಂದ ಹೊರ ಬರಲು ಅನೇಕವಾದ ಕಾರಣಗಳನ್ನು ಹೇಳುತ್ತೇವೆ. ಹೌದು, ಮೋಶೆ ಇದನ್ನೇ ಮಾಡಿದನು.

ದೇವರು ಆತನ ಜನರನ್ನು ಬಾನಿಸತ್ವ ಮತ್ತು ನರಳಾಟದಿಂದ ಬಿಡಿಸಲು ಅತ್ಯುನ್ನತವಾದ ಪ್ರಣಾಳಿಕೆಯುಳ್ಳವನಾಗಿದ್ದನು. ಆತನ ಜನರನ್ನು ಬಿಡುಗಡೆಯಾಗುವ ಸಮಯದಲ್ಲೇ ಆತನ ಮಹತ್ವ ಮತ್ತು ದೊಡ್ಡತನವನ್ನು ತೋರಬೇಕೆಂದು ಇಷ್ಟಪಟ್ಟಿದ್ದನು. ಆತನ ಜನರು ಹೋಗಲು ಐಗುಪ್ತ್ಯರು ಅಪ್ಪಣೆ ನೀಡುವವರೆಗು, ಅವರ ಮೇಲೆ ಕೇಡುಗಳು, ದುಷ್ ಕಾರ್ಯಗಳು, ಒಂದಕ್ಕೆ ಕೇಡಾಗೆ ಮತ್ತೊಂದನ್ನು ಬರಮಾಡಲು ದೇವರು ನಿಶ್ಚಯಿಸಿಕೊಂಡಿದ್ದರು. ಫರೋಹನ ಬಳಿ ಮೋಶೆ ಮಾತ್ರ ಮಾತನಾಡಲು ದೇವರು ಬಯಸಿದ್ದರು. ಮೋಶೆ ದೇವರ ಮನುಷ್ಯನು. ಆದರೆ ಮೋಶೆ ದೇವರಿಗೆ ಅವಿಧೇಯನಾಗಿದ್ದನು. ಮೋಶೆಗೆ ಹೋಗುವದಕ್ಕೆ ಇಷ್ಟವಿರಲಿಲ್ಲ.

ನಾನು ಅಷ್ಟು ಚೆನ್ನಾಗಿ ಮಾತನಾಡುವ ವ್ಯಕ್ತಿಯಲ್ಲವೆಂದು ಮೋಶೆ ದೇವರಿಗೆ ಪದೇ ಪದೇ ಬೇಡಿಕೊಂಡನು, ಚೆನ್ನಾಗಿ ಮಾತನಾಡುವ ಬೇರೆ ಯಾರಾದರೊಬ್ಬರನ್ನು ಕಳುಹಿಸಬೇಕೆಂದು ದೇವರಲ್ಲಿ ಕೇಳಿಕೊಂಡನು. ಬೇರೆಯವರನ್ನು ಕಳುಹಿಸಬೇಕೆಂದು ಮೋಶೆ ದೇವರನ್ನು ಬೇಡಿಕೊಂಡನು!!! ನೀವು ನಿಮ್ಮ ತಾಯಿಯೊಂದಿಗೆ ನನ್ನನ್ನು ಎಲ್ಲಿಗಾದರು ಕಳುಹಿಸಬಾರದೆಂದು ಅಥವಾ ಏನಾದರೂ ಮಾಡುವದಕ್ಕೆ ನನಗೆ ಹೇಳಬಾರದೆಂದು ಎಂದಾದರೂ ಬೇಡಿಕೊಂಡಿದ್ದೀರಾ? ಹಾಗಾದರೆ ಮೋಶೆಗೆ ಹೇಗೆ ಅನಿಸಿತೋ ನಿಮಗೆ ಇವಾಗ ಚೆನ್ನಾಗಿ ಗೊತ್ತಿರುತ್ತದೆ. ದೇವರಿಗೆ ದೊಡ್ಡ ಪ್ರಣಾಳಿಕೆಯುಂಟು, ಮತ್ತು ಮೋಶೆ ದೇವರಿಗೆ ವಿಧೇಯತೆಯನ್ನು ತೋರಿಸುವದೇ ಪ್ರಾಮುಖ್ಯವಾದ ಸಂಗತಿ. ಮೋಶೆ ಗಡಿಬಿಡಿಗೆ ಒಳಗಾಗಿರುವದನ್ನು ದೇವರು ಕಂಡು ತುಂಬಾ ದಣಿದು ಹೋದರು. ದೇವರು ಮೋಶೆಯ ಮೇಲೆ ಕೋಪಗೊಂಡನು ಎಂದು ಬೈಬಿಲ್ ನಮಗೆ ತಿಳಿಯಪಡಿಸುತ್ತಿದೆ! ಮೋಶೆಯೊಂದಿಗೆ ಇನ್ನೊಬ್ಬ ವ್ಯಕ್ತಿಯನ್ನು ಕಳುಹಿಸಲು ಮತ್ತು ಅವನಿಗೆ ಸಹಾಯವನ್ನು ಮಾಡುವದಕ್ಕೆ ದೇವರು ಅನುಮತಿಸಿದರು. ಮೋಶೆ ಏನು ಮಾಡಿರಬಹುದೆಂದು ನೀವಂದುಕೊಳ್ಳುತ್ತಿದ್ದೀರಾ??? ಹೌದು ಅದು ಸರಿಯೇ, ಕೊನೆಯ ಭಾಗದಲ್ಲಿ ದೇವರಿಗೆ ವಿಧೇಯತೆಯನ್ನು ತೋರಿಸಿದನು!

ದೇವರ ಪ್ರಣಾಳಿಕೆಯು ಆತನ ಮಹಿಮೆ ಏನೆಂಬುವದನ್ನು ಪ್ರತ್ಯಕ್ಷಪಡಿಸಿತು ಮತ್ತು ಕೋಲು ಹಾವಾಗಿ, ಹಾವು ಕೋಲಾಗಿ ಮಾರ್ಪಡುವ ಅದ್ಭುತದೊಂದಿಗೆ ಆರಂಭವಾಯಿತು. ದೇವರ ಪ್ರಜೆಗಳನ್ನು ಕಳುಹಿಸುವದಕ್ಕೆ ಫರೋಹನು ಒಪ್ಪಿಕೊಳ್ಳಲಿಲ್ಲ, ಆದ್ದರಿಂದ ದೇವರು ಅನೇಕ ಮಾರಿ ರೋಗಗಳನ್ನು ಕಳುಹಿಸಿದನು, ಪ್ರತೀ ಸಾರಿ ಪಶ್ಚಾತ್ತಾಪ ಪಡುವದಕ್ಕೆ ಫರೋಹನಿಗೆ ಒಳ್ಳೆಯ ಅವಕಾಶವನ್ನು ಕೊಟ್ಟನು, ಆದರೂ ಫರೋಹನು ದೇವರ ಜನರನ್ನು ಬಿಡಲಿಲ್ಲ. ದೇವರು ಒಂದು ಮಾರಿ ರೋಗವಾದ ಮೇಲೆ ಮತ್ತೊಂದು ಮಾರಿ ರೋಗವನ್ನು ಕಳುಹಿಸಲು ಆರಂಭಿಸಿದನು : ರಕ್ತ, ಕಪ್ಪೆಗಳು, ಹೇನು, ಹುಳಗಳು, ದನಗಳಿಗೆ ಮರಣ, ಹುಣ್ಣು ಬೊಕ್ಕೆಗಳು, ಆನೆ ಕಲ್ಲು, ಮಿಡತೆಗಳು, ಕಾರ್ಗತ್ತಲು ಮತ್ತು ಚೊಚ್ಚಲು ಮಕ್ಕಳ ಸಾವು. ಅವುಗಳೆಲ್ಲವಾದನಂತರ, ಫರೋಹನು ಸೋತು ಹೋಗಿ, ದೇವರನ್ನು ಗೆಲ್ಲಿಸಿದನು! ದೇವರ ಜನರು ಹೋಗುವದಕ್ಕೆ ಸ್ವಾತಂತ್ರ್ಯತೆಯನ್ನು ಪಡೆದರು. ಮತ್ತು ಅವರೆಲ್ಲರೂ ದೇವರ ಮಹಿಮೆಯನ್ನು ಕಂಡರು!

ಮೋಶೆಯು ಕಾರಣಗಳನ್ನು ಹೇಳುವದನ್ನು ನಿಲ್ಲಿಸಿದ್ದರಿಂದಲೇ ಇದೆಲ್ಲಾ ಕೂಡ ನಡೆಯಿತು. ಎದ್ದೇಳು, ಹೋಗು ಮತ್ತು ದೇವರಿಗೆ ವಿಧೇಯನಾಗು!




## ಆಸ್ಟ್ರೋನಾಮಿಕಲ್ ಅಬ್ಬರ್ರೇಷನ್

### ದೇವರು ಆಶ್ಚರ್ಯಕರನು

## ಮೆಸ್ ಹಾಲ್

ಅಲ್ಪಾಹಾರ ಕೇಂದ್ರ








### ಮಾರಿ ರೋಗಗಳು (ಅಥವಾ ಉಪದ್ರವಗಳು)

ವಿವಿಧವಾದ ಪದಾರ್ಥಗಳಿಂದ ಯಾವ ರೀತಿ ಕಪ್ಪೆಯನ್ನು ಜೋಡಿಸುವದೆನ್ನುವದನ್ನು ವಿದ್ಯಾರ್ಥಿಗಳೆಲ್ಲರಿಗೆ ತೋರಿಸಿರಿ. ಒಂದು ಚಿಕ್ಕ ಆಪಿಲ್‌ನನ್ನಾಗಲಿ ಅಥವಾ ಶರೀರಾಕೃತಿಗಾಗಿ ಒಂದು ಬಿಸ್ಕೇಟನ್ನಾಗಲಿ ಬಳಸಿರಿ. ಕಾಲುಗಳನ್ನು ಮಾಡುವದಕ್ಕೆ ಹಸಿರು ದ್ರಾಕ್ಷೆಯನ್ನಾಗಲಿ, ತರಕಾರಿಗಳನ್ನಾಗಲಿ ಅಥವಾ ಸೊಪ್ಪನ್ನಾಗಲಿ ಬಳಸಿರಿ. ಕಣ್ಣುಗಳಿಗಾಗಿ ಒಣ ದ್ರಾಕ್ಷಿಯನ್ನಾಗಲಿ, ಚಿಕ್ಕ ಚಿಕ್ಕ ಸಿಹಿ ದಿನುಸುಗಳನ್ನಾಗಲಿ ಅಥವಾ ಚಾಕ್ಲೆಟ್ ತುಂಡುಗಳನ್ನಾಗಲಿ ಬಳಸಿರಿ. ನಾಲಿಗೆಗಾಗಿ ಕ್ಯಾರೆಟ್‌ನ ಅತೀ ಸಣ್ಣ ಚೂರನ್ನು ಬಳಸಿರಿ. ಇನ್ನೂ ಹೆಚ್ಚಿನ ವಿನೋದಕ್ಕಾಗಿ ಮಕ್ಕಳೇ ತಮ್ಮ ಸ್ವಂತ ಕಪ್ಪೆಗಳನ್ನು ಮಾಡುವದಕ್ಕೆ ಪ್ರೋತ್ಸಹಿಸಿರಿ.ಇಷ್ಟವಾದರೆ : ರಕ್ತವನ್ನಾಗಿ ಮಾರ್ಪಡಿಸಿದ ನೀರನ್ನು ಬಡಿಸಲು, ಮುಂಚಿತವಾಗಿಯೇ ಒಂದು ದೊಡ್ಡ ಪಾತ್ರೆಯ ತಳ ಭಾಗದಲ್ಲಿ ಕುಡಿಯುವ ಕೆಂಪು ಪುಡಿಯನ್ನು ಇಡಿರಿ. ವಿದ್ಯಾರ್ಥಿಗಳೆಲ್ಲರೂ ನೋಡುತ್ತಿರುವಾಗಲೇ ಅವರ ಮುಂದೆ ಒಂದು ಬಿಂದಿಗೆಯಲ್ಲಿ ನೀರನ್ನು ತೆಗೆದುಕೊಂಡು ಆ ಪಾತ್ರೆನೊಳಗೆ ಸುರಿಯಿರಿ. ಅದನ್ನು ಕಲಬೆರಿಕೆ ಮಾಡುತ್ತಿದಂತೆಯೇ, ಅದು ಕೆಂಪು ಬಣ್ಣಕ್ಕೆ ಮಾರ್ಪಡುವದು.



### ಫ್ಯಾಕ್ಟಾಯಿಡ್

(ಅಲ್ಪಾಹಾರವನ್ನು ತೆಗೆದುಕೊಳ್ಳುತ್ತಿರುವಾಗ ಅಂತರಿಕ್ಷ ಅನ್ವಯದ ಕುರಿತಾಗಿ ಚರ್ಚಿಸಕೊಳ್ಳಬಹುದು)


### ಚಲನೆ

ಈ ವಿಶ್ವದಲ್ಲಿ ದೇವರು ಚಲನೆಯನ್ನು ಉಂಟು ಮಾಡಿದ್ದಾರೆ. ಆರಂಭದಿಂದಲೇ ಈ ಭೂ ಗ್ರಹವು ತನ್ನಷ್ಟಕ್ಕೆ ಅದು ತಿರುಗುತ್ತಾ, ಸೂರ್ಯನ ಸುತ್ತಲೂ ತಿರುಗುವಂಥೆ ದೇವರು ಮಾಡಿದ್ದಾರೆ. ಆದರೆ ಭೂಮಿಯ ಮೇಲೆ ನಿಂತುಕೊಂಡಿರು ನಾವು ಆ ರೀತಿ ತಿರುಗುತ್ತಿರುವಂಥೆ ನಮಗೆ ಅನಿಸುವದಿಲ್ಲ! (ಒಂದು ವೃತ್ತದಲ್ಲಿ ಮಕ್ಕಳು ತಿರುಗುವಂಥೆ ಮಾಡಿರಿ, ಆದನಂತರ ಅದೇ ತರಗತಿಯ ಇನ್ನೊಂದು ಭಾಗದಲ್ಲಿ ನಡೆಯುವಂಥೆ ಹೇಳಿರಿ) ಈ ಭೂಮಿ ತನ್ನಷ್ಟಕ್ಕೆ ಅದು ತಿರುಗುತ್ತಾ ಮತ್ತು ಸೂರ್ಯನ ಸುತ್ತಲೂ ತಿರುಗುತ್ತಿದ್ದರೇ, ಅದರ ಮೇಲಿರುವ ನಮಗೆ ನಡೆಯುವದು ತುಂಬಾ ಕಷ್ಟವಲ್ಲವೋ? ದೇವರು ವಿಶ್ವದಲ್ಲಿ ಚಲನೆಯನ್ನು ಹೇಗೆ ಉಂಟು ಮಾಡಿದರೋ, ಅದೇ ರೀತಿ ನಮ್ಮ ಜೀವನಗಳಲ್ಲಿಯೂ ಆತನು ಚಲನೆಯನ್ನುಂಟು ಮಾಡಿದನು. ನಮ್ಮ ಜೀವನದಲ್ಲಿ ಹೆಜ್ಜೆಗಳನ್ನು ಕ್ರಿಯೆಯಲ್ಲಿ ಹಾಕುವದು, ಅನೇಕ ಸಂಕಷ್ಟಗಳನ್ನು ಎದುರ್ಗೊಳ್ಳುವದು ಮತ್ತು ಕಷ್ಟಕರವಾದ ಮಾರ್ಗವು ಕಂಡುಬಂದರು ಆತನಿಗೆ ವಿಧೇಯತೆ ತೋರಿಸುವದು ಎನ್ನುವವುಗಳೆಲ್ಲಾ ದೇವರ ಪ್ರಣಾಳಿಕೆಯಲ್ಲಿವೆ. ನಿಜವಾಗಿ, ಚಲನೆಯಿಲ್ಲದಿದ್ದರೇ, ನಾವು ಅತೀ ಶೀಘ್ರದಲ್ಲಿಯೇ ಬೇಸರಗೊಂಡು, ನಮಗೆ ಯಾರಾದರೂ ವಿನೋದವನ್ನು ಹಂಚಬೇಕೆಂದು ಎದುರು ನೋಡುತ್ತೇವೆ. ಭೂಮಿ ಯಾವ ರೀತಿ ತನ್ನಷ್ಟಕ್ಕೆ ಅದು ತಿರುಗುತ್ತಾ ಮುಂದೆವರೆಯುತ್ತಿದೆಯೋ, ಅದೇ ರೀತಿ ನಮ್ಮ ಜೀವನದಲ್ಲಿಯೂ ಸಹ ದೇವರು ಮಾರ್ಗದರ್ಶಿಯಾಗಿ ಮುಂದೆವರೆಯುತ್ತಿರುತ್ತಾರೆ. “ಹೌದು ಕರ್ತನೇ” ಎಂದು ಹೇಳಿ, ಮುಂದಕ್ಕೆ ಚಲಿಸುವದೇ ನಮ್ಮ ಸ್ಪಂದನೆಯಾಗಿರಬೇಕು.



www.ChildrenAreImportant.com – Children's ministry resources, Sunday School, and Vacation Bible School (VBS) curriculum for churches and teachers. Kannada

# ಕ್ಯಾಡೆಟ್ ತರಗತಿ




## ದೇವರಿಗೆ ವಿಧೇಯನಾಗು

ಮೊತ್ತೊಂದು ಬಾರಿ ಕಥೆಯನ್ನು ಪುನಃರಾವೃತ ಮಾಡಿಕೊಳ್ಳಿರಿ, ಚಿಹ್ನೆಯ ಭಾಷೆಯಲ್ಲಿ ಈ ಪದಗಳನ್ನು ಬೋಧಿಸಿರಿ. ಆದನಂತರ ವಿದ್ಯಾರ್ಥಿ ಪುಸಕಗಳನ್ನು ಹಂಚಿರಿ ಮತ್ತು ಪಜಿಲ್‌ಗಳನ್ನು ಮಾಡುತ್ತಿರುವಾಗ ಅವರೊಂದಿಗೆ ಸಹಾಯಕರೊಬ್ಬರನ್ನು ಇಟ್ಟುಕೊಳ್ಳಿರಿ.

### ರಕ್ಷಿಸು

ಎದೆಯ ಮೇಲಿರುವ ಬಲಗೈ ಎಡಕ್ಕೂ, ಎಡಗೈ ಬಲಕ್ಕೂ ಇಟ್ಟಿರುವ ಕೈಗಳನ್ನು ತೆರೆಯುವದು.




### ಎಲ್ಲರೂ ಸೇರಿ

ಮುಷ್ಟಿಗಳನ್ನು ಒಂದು ಕಡೆಗೆ ಸೇರಿಸಿ.



### ಪಕ್ಕಕ್ಕೆ ಹೋಗು

ಬಲಗೈ ಹತ್ತಿರವಾಗುತ್ತಿದ್ದಂತೆ, ಆ ಕೈಯನ್ನು ಮುಂದಕ್ಕೆ ಕದಲಿಸುವದು



### ದೇವರು

ಮುಷ್ಟಿಗಳನ್ನು ಒಂದಕ್ಕೊಂದು ಮುಟ್ಟಿಸಿರಿ.ಅಂಗೈಯಲ್ಲಿ ಬಲಗೈ ತೋರು ಬೆರಳನ್ನು ಮೇಲ್ಗಡೆಯಿಂದ ಇಡುವದು.



ಆಟಗಳಿಗೋಸ್ಕರ ಮತ್ತು ಮುಕ್ತಾಯ ಮಾಡುವದಕ್ಕೋಸ್ಕರ ಸೇತುವೆಯ ಹತ್ತಿರಕ್ಕೆ ಬರುವದು.

## ವಿನೋದಾತ್ಮಕವಾದ ಶಬ್ದಗಳು

ಮುಂಚಿತವಾಗಿಯೇ ಈ ಶಬ್ದಗಳ ಪಟ್ಟಿಯನ್ನು ನಾಯಕನೇ ಸಿದ್ಧಗೊಳಿಸುವನು :

1. ಕೆಮ್ಮು. 2. ಬಿಕ್ಕಳಿಸು 3. ತೇಗು. 4. ಸೀನು 5. ಚಪ್ಪಾಳೆ 6. ಆಗಲಿಸು. 7. ಮುಸಿ ನಗು 8. ಪಾದ ಶಬ್ದ 9. ಗಂಟಲು ಸವರಣೆ.

6 ಮಂದಿ ಆಟಗಾರರನ್ನು ಸಾಲಾಗಿ ನಿಲ್ಲಿಸಿರಿ, ಪ್ರತೀ ತಂಡದಿಂದ ಮೂವರನ್ನು ಆಯ್ಕೆ ಮಾಡಿಕೊಳ್ಳಿರಿ, ಆ ಎರಡು ತಂಡದ ವಿದ್ಯಾರ್ಥಿಗಳನ್ನು ಒಂದು ತಂಡದ ವಿದ್ಯಾರ್ಥಿ ಆದನಂತರ ಮತ್ತೊಂದು ತಂಡದ ವಿದ್ಯಾರ್ಥಿಯನ್ನು ಆ ರೀತಿ ಆರು ಮಂದಿಯನ್ನು ನಿಲ್ಲಿಸಿರಿ. ನೀವು ಮಾಡಿದ ಪಟ್ಟಿಯ ಕ್ರಮಾನುಗುಣವಾಗಿಯೇ ಅವರು ಆ ಶಬ್ದಗಳನ್ನು ಉಚ್ಚರಿಸಬೇಕೆಂದು ಆ ಆಟಗಾರರಿಗೆ ಸೂಚಿಸಿರಿ. ಪಟ್ಟಿಯಲ್ಲಿರುವ ಮೊದಲನೆಯ ಶಬ್ದವನ್ನು ಮಾಡಿರಿ. ಅಲ್ಲಿರುವ ಪ್ರತಿಯೊಬ್ಬ ಆಟಗಾರನು ವ್ಯಕ್ತಿಗತವಾಗಿ ಆ ರೀತಿಯ ಶಬ್ದವನ್ನು ಮಾಡುವದಕ್ಕೆ ಹೇಳಿರಿ. ಆದನಂತರ ಮೊದಲನೇಯ ಶಬ್ದವನ್ನು ಮಾಡುವದರೊಂದಿಗೆ ಎರಡನೇಯ ಶಬ್ದವನ್ನು ಮಾಡಬೇಕೆಂದು ಹೇಳಿರಿ, ಆ ರೀತಿ ಎಲ್ಲಾ ಶಬ್ದಗಳನ್ನು ಮಾಡಬೇಕೆಂದು ತಿಳಿಸಿರಿ. ಆದನಂತರ ಮೂರನೇಯ ಶಬ್ದವನ್ನು ಆ ಎರಡು ಶಬ್ದಗಳೊಂದಿಗೆ ಮಾಡಬೇಕು, ಹೀಗೆಯೇ ಎಲ್ಲಾ ಶಬ್ದಗಳನ್ನು ಮುಂದುವರಿಸಬೇಕು. ಒಂದುವೇಳೆ ಒಬ್ಬ ಆಟಗಾರನು ಶಬ್ದ ಮಾಡದಿದ್ದಲ್ಲಿ, ಅಥವಾ ಮರೆತು ಹೋದಲ್ಲಿ, ಅಥವಾ ಕ್ರಮಾನುಗುಣವಾಗಿ ಹೇಳದಿದ್ದಲ್ಲಿ, ಆ ಆಟಗಾರನು ಸೋತು ಹೋದಂಥೆ ಅರ್ಥ. ಒಬ್ಬ ಆಟಗಾರನು ಮಾತ್ರ ಗೆಲ್ಲುವಂಥೆ ಅಥವಾ ಉಳಿಯುವಂಥೆ ಶಬ್ದಗಳನ್ನು ಜೋಡಿಸುತ್ತಾ ಇಡಿರಿ. ಯಾರು ಆ ಶಬ್ದಗಳನ್ನು ಕ್ರಮಾನುಗುಣವಾಗಿ ಹೇಳುವರೋ, ಆ ತಂಡದವರೇ ಗೆಲ್ಲುವರು!

## ತಲೆಗೆ ಅಂಟಿಸಿಕೊಳ್ಳುವದು

ಪ್ರತೀ ತಂಡದಿಂದ ಒಬ್ಬ ವ್ಯಕ್ತಿಯನ್ನು ಆಯ್ಕೆ ಮಾಡಿಕೊಂಡು, ಅವರ ಹಣೆಯ ಮೇಲೆ ಮತ್ತು ಗಲ್ಲದ ಪ್ರಾಂತ್ಯದಲ್ಲಿ ಮಾಸ್ಕಿಂಗ್ ಟೇಪ್‌ನ್ನು ಕಟ್ಟಿರಿ (ಅಂಟುಕೊಳ್ಳುವ ಪ್ರಾಂತ್ಯ ಹೊರಗಡೆಯಿರುವಂಥೆ ಕಟ್ಟಬೇಕು). ಒಂದು ಮೇಜಿನ ಮೇಲೆ ಕಾಗದದ ತುಂಡುಗಳನ್ನು ಹಾಕಿರಿ. ಮೇಜಿನ ಹಿಂಭಾಗದಲ್ಲಿ ಅವರು ನಿಂತುಕೊಳ್ಳುವಾಗ, ಅವರ ಮುಖಗಳನ್ನು ಪ್ರೇಕ್ಷಕರ ಕಡೆಗೆ ಇಟ್ಟು ನೋಡುತ್ತಿರುವಾಗ, ಅವರ ಕೈಗಳನ್ನು ಬೆನ್ನಪ್ಪಿಕೊಳ್ಳಬೇಕೆಂದು ಆಟಗಾರರಿಗೆ ಹೇಳಿರಿ. ನೀವು "ಹೋಗಿರಿ" ಎಂದು ಆಟಗಾರರಿಗೆ ಹೇಳಿದಾಗ, ಆ ಮೇಜಿನ ಸುತ್ತಾ ಅವರ ತಲೆಗಳನ್ನು ಆಡಿಸಬೇಕು. ಆಗ ಅವರು ತಮ್ಮ ತಲೆಗೆ ಎಷ್ಟು ಸಾಧ್ಯವಾದರೇ ಅಷ್ಟು ಕಾಗದದ ತುಂಡುಗಳನ್ನು ಅಂಟಿಸಿಕೊಳ್ಳುವ ಪ್ರಯತ್ನ ಮಾಡಬೇಕು. ಯಾರು ಎಷ್ಟು ಹೆಚ್ಚಾಗಿ ಕಾಗದದ ತುಂಡುಗಳನ್ನು ಕೊಟ್ಟಿರುವ ಸಮಯದಲ್ಲಿ ಅಂಟಿಸಿಕೊಳ್ಳುವರೋ ಅವರೇ ಗೆಲ್ಲುತ್ತಾರೆ.

(ಒಂದು ವೇಳೆ ಮಗುವಿಗೆ ಉದ್ದಾವಾದ ಕೂದಲಿದ್ದರೆ, ಟೇಪ್ ಕಟ್ಟುವದಕ್ಕೆ ಮುಂಚೆ ಅವುಗಳನ್ನು ಹಿಂದಕ್ಕೆ ಎಳೆದು, ಮತ್ತೇ ಅಡ್ಡವಾಗಿರದಂಥೆ ಚೆನ್ನಾಗಿ ಕಟ್ಟಿರಿ.)

# ಇಂಜಿನೀರಿಂಗ್



## ನಿಮ್ಮ ಕೆರಗಳನ್ನು ತೆಗೆದುಬಿಡಿ.

ಬೇಕಾದವುಗಳು :

ಕಾಗದ, ತಂತಿ ಅಥವಾ ದಾರ, ಪ್ರತಿಯೊಬ್ಬರಿಗೆ ಎರಡೆರಡು, ರಂಧ್ರವನ್ನು ಮಾಡುವ ಪಂಚ್, ಕತ್ತರಿ, ಪೆನ್ಸಿಲ್, ಪೆನ್ ಅಥವಾ ಮಾರ್ಕರ್.

ಸೂಚನೆಗಳು:

1. ಮಗುವಿನ ಪಾದದ ಚಿತ್ರವನ್ನು ಕಾಗದದ ಮೇಲೆ ಬಿಡಿಸಿ (ಮಕ್ಕಳು ಬೇರೆಯವರ ಪಾದದ ಚಿತ್ರವನ್ನು ಬಿಡಿಸಬಹುದು).
2. ಷೂ ಆಕಾರವನ್ನು ಕತ್ತರಿಸಿ, ಕಟ್ಟುವದಕ್ಕೆ ಪಂಚ್ ಮಿಷನ್‌ನಿಂದ ರಂಧ್ರಗಳನ್ನು ಹಾಕಿರಿ.
3. ಅವರ ಪಾದಗಳಿಗೆ ಅವುಗಳನ್ನು ಕಟ್ಟಿಕೊಳ್ಳುವದಕ್ಕೆ ಪ್ರತಿಯೊಬ್ಬರಿಗೆ ಎರಡೆರಡು ತಂತಿಗಳನ್ನಾಗಲಿ ಅಥವಾ ದಾರವನ್ನಾಗಲಿ ಕೊಡಿರಿ. ಚೆನ್ನಾಗಿ ಕಟ್ಟಿಕೊಳ್ಳಬೇಕೆಂದು ನೀವೇನು ಚಿಂತೆ ಮಾಡಬೇಡಿರಿ. ಚಿಕ್ಕ ಮಕ್ಕಳು ಕಟ್ಟಿಕೊಳ್ಳುವದನ್ನು ತುಂಬಾ ಇಷ್ಟಪಡುತ್ತಾರೆ ಮತ್ತು ಅದು ಅವರಿಗೆ ಕಟ್ಟಿಕೊಳ್ಳುವದನ್ನು ಬೋಧಿಸುವದು. ಒಂದು ಉದ್ದವಾದ ತಂತಿಯಿಂದ ತಮ್ಮ ಕೆರಗಳನ್ನು ಕಟ್ಟಿಕೊಳ್ಳುವದಕ್ಕೆ ದೊಡ್ಡ ಮಕ್ಕಳು ಎಷ್ಟೋ ಸಂತೋಷಪಡುತ್ತಾರೆ.
4. ಕೆರಗಳ ಮೇಲೆ ಈ ರೀತಿಯಾಗಿ ಬರೆಯಿರಿ : "ಹೌದು ಕರ್ತನೇ, ನಾನಿಲ್ಲಿದ್ದೇನೆ" ಎಂದು ದೇವರಿಗೆ ನಾನು ಸ್ಪಂದಿಸುತ್ತೇನೆ.


# ಸೇತುವೆ



www.ChildrenAreImportant.com – Children's ministry resources, Sunday School, and Vacation Bible School (VBS) curriculum for churches and teachers. Kannada


# 4 ನೇ ಅಂತರಿಕ್ಷ ಯಾನ


## ದೇವರಲ್ಲಿ ನಿರೀಕ್ಷಿಸು!




ಅಂತರಿಕ್ಷದ ಉಪಕರಣಗಳು:

ಪಿಸ್ರೋ





ಪ್ರಾರಂಭದ ನಾಟಕ

### ವಿಸ್ಫೋಟನೆ!

ಕೇಪ್ಟನ್ ಮತ್ತು ರೋಬೋಟ್ ಎಲ್ಲಿಗೆ ಪ್ರಯಾಣ ಮಾಡಬೇಕೆಂಬದ ಕುರಿತಾಗಿ ಮತನಾಡುತ್ತ ಜಗಳವಾಡುತ್ತಿರುವರು ಹೀಗೆ ಈ ದಿನದ ವಿಬಿಎಸ್ ಕಾರ್ಯಕ್ರಮವನ್ನು ಮುಕಾಂತರ ಪ್ರಾರಂಭಿಸಿರಿ.

ಕೇಪ್ಟನ್ ಚಂದ್ರಮಂಡಲಕ್ಕೆ ಹೋಗಬೇಕೆಂದು ಹೇಳುತ್ತಾನೆ, ಆದರೆ ರೋಬೋಟ್ ಅಂತರಿಕ್ಷದ ಸ್ಟೇಷನ್‌ಗೆ ಹೋಗಬೇಕೆಂದು ಬಯಸುತ್ತಾನೆ. ಟೇಕಾಫ್‌ಗೆ ಸಿದ್ದವಾಗುತ್ತಿರುವಾಗ, ಅವರು ಹಿಂದೆ ಮುಂದೆ ಜಗಳವಾಡುತ್ತಿರುವರು. ಈ ಜಗಳವು ತುಂಬ ದೊಡ್ಡದಾಗಿ ಕಂಡು ಬರಲು ನೀವು ಹಾಡುಗಳ ಮದ್ಯದಲ್ಲಿ ಸಹ ಅದನ್ನ ಮುಂದುವರಿಸ ಬಹುದು. (ಒಂದು ಹಾಡನ್ನು ಹಾಡಿ, ಮತ್ತೆ ಅವರನ್ನ ಸ್ಟೇಜಿನ ಮೇಲೆ ಜಗಳವಾಡುತ್ತಾ ಓಡಾಡುವಂತೆ ಮಾಡಿ, ನಂತರ ಮತ್ತೊಂದು ಹಾಡನ್ನು ಹಾಡಿ, ಹೀಗೆ ಮುಂದುವರಿಸಬಹುದು.

ಈ ದಿನದ ಪಠ್ಯಾಂಶದ ಕುರಿತಾಗಿ ಮತ್ತು ಪ್ರತಿಕ್ರಿಯೆಯನ್ನು ಕೇಪ್ಟೆನ್ ರೋಬೋಟ್‌ಗೆ ತಿಳಿಯಪಡಿಸುವನು: "ದೇವರಲ್ಲಿ ನಿರೀಕ್ಷಿಸು" ಎಂದು ನಾಯಕನು ಹೇಳಿದಾಗ, ಮಕ್ಕಳೆಲ್ಲ ಜಿಗಿದು ಅವರ ಕೈಗಳನ್ನು ಬಾಕ್ಸಿಂಗ್ ಆಡುವಂತೆ ತಮ್ಮ ಕೈಗಳನ್ನು ಆಡಿಸಿ "ನಾನು ಸಿದ್ಧವಾಗಿದ್ದೇನೆ" ಎಂದು ಹೇಳಬೇಕು, ನಂತರ ಒಬ್ಬರ ಕೈಗಳನ್ನು ಮತ್ತೊಬ್ಬರು ಹಿಡಿದುಕೊಂಡು, ಕುಳಿತು "ಆದರೆ ನಾನು ಕಾದಿರಬೇಕು" ಎಂದು ಹೇಳಬೇಕು.

ಆತನ ತಪ್ಪನ್ನು ತಿಳಿದು ರೋಬೋಟ್ ಕೇಪ್ಟೆನ್‌ಗೆ ಕ್ಷಮಾಪಣೆ ಕೇಳುವನು. ಸಾಟಲೈಟ್‌ಗೆ ಹೋಗುವುದು ಒಳ್ಳೆಯ ಆಲೋಚನೆಯೆಂದು ಕೇಪ್ಟೆನ್ ತಿಳಿದಿದ್ದು, ಇಗಾಗಲೆ ಗಗನಯಾತ್ರಿಕನು ಚಂದ್ರಮಂಡಲದಲ್ಲಿ ಇವತ್ತಿನ ಪಠ್ಯಂಶಕ್ಕಾಗಿ ಕಾದಿರುವದರಿಂದ, ರೋಬೋಟ್‌ಗೆ ಇಷ್ಟವಿದ್ದಲ್ಲಿ ಮುಂದಿನದಂದು ಅವರು ಉಪಗ್ರಹಕ್ಕೆ ಹೋಗಬಹುದೆಂದು ಅವಕಾಶ ಕೊಡುವನು. ಅವರ ಸಮಸ್ಯೆಗೆ ಪರಿಹಾರ ಸಿಕ್ಕಿತೆಂದು ಕೇಪ್ಟೆನ್ ಮತ್ತು ರೋಬೋಟ್ ತುಂಬ ಸಂತೋಷಿಸಿದರು, ಇವತ್ತು ಚಂದ್ರಮಂಡಲಕ್ಕೆ ಮತ್ತು ಮುಂದಿನ ದಿನ ಸಾಟಲೈಟ್‌ಗೆ, ಅವರಿಬ್ಬರು ಅಪ್ಪಿಕೊಂಡು ಟೇಕಾಫ್‌ಗೆ ಸಿದ್ದವಾಗುತ್ತಾರೆ.

ಟೇಕಾಫ್‌ಗೆ ಮುಂಚಿತವಾಗಿ, ಚಂದ್ರಮಂಡಲದಲ್ಲಿ ಹಾಕಿಕೊಳ್ಳುವ ಬೂಟುಗಳಿಗಾಗಿ ರೋಬೋಟ್ ಹುಡುಕುತ್ತಿರುವನು.

"ಸ್ಟೇಷನ್ ಪನಸ"ದಲ್ಲಿ ಅವರು ಲ್ಯಾಂಡ್ ಆಗುವುದು ಹೇಗೆಂದು, ಅಲ್ಲಿ ಅಂತರೀಕ್ಷ ನೌಕೆಗಳ ಕುರಿತಾಗಿ ಅವರು ಕಲಿಯುವುದರ ಬಗ್ಗೆ ಮತ್ತು ಕಾಯುವುದರ ಬಗ್ಗೆ ಕೇಪ್ಟೆನ್ ತಿಳಿಯಪಡಿಸುವನು. (ಪಾಠವನ್ನು ಮುಂದುವರಿಸಲು ವೇಗವಾಗಿ ಪ್ರಯಾಣ ಮಾಡಿ ಚಂದ್ರಮಂಡಲದಲ್ಲಿ ಲಾಂಡ್ ಆಗಬೇಕು.)



### ಒಳ ಸಂದೇಶ...

ಬೈಬಲ್ ವಾಕ್ಯ

"ಯೆಹೋವನು ನ್ಯಾಯ ಸ್ವರೂಪನಾದ ದೇವರು; ಆತನಿಗಾಗಿ ಕಾದಿರುವವರೆಲ್ಲರೂ ಧನ್ಯರು."
– ಯೆಶಾ.30:18.




### ಮಿಷನ್ ಕಂಟ್ರೋಲ್‌ನಿಂದ ಅರ್ಜೆಂಟ್..

ಮುಖ್ಯ ಪಾಠ

#### ಹಗಲು ಮೇಘ ಸ್ತಂಭ ಮತ್ತು ರಾತ್ರಿ ಅಗ್ನಿ ಸ್ತಂಭ

ಫರೋಹನು ಸಮೀಪಿಸುತ್ತಿರುವಾಗ ಇಸ್ರಾಯೇಲ್ಯರು ಕಣ್ಣೆತ್ತಿ ತಮ್ಮ ಹಿಂದೆ ಹೊರಟುಬಂದಿದ್ದ ಐಗುಪ್ತ್ಯರನ್ನು ಕಂಡು ಬಹಳ ಭಯಪಟ್ಟವರಾಗಿ ಯೆಹೋವನಿಗೆ ಮೊರೆಯಿಟ್ಟರು. ಅವರು ಮೋಶೆಗೆ – ಐಗುಪ್ತದೇಶದಲ್ಲಿ ಸಮಾಧಿಗಳಿಲ್ಲವಾದದರಿಂದ ಅರಣ್ಯದಲ್ಲಿ ಸಾಯಲಿ ಎಂಬದಾಗಿ ನಮ್ಮನ್ನು ಇಲ್ಲಿಗೆ ಕರಕೊಂಡು ಬಂದಿಯೇನು? ಯಾಕೆ ನಮಗೆ ಈ ಪ್ರಕಾರ ಮಾಡಿ ಐಗುಪ್ತದೇಶದಿಂದ ಕರಕೊಂಡು ಬಂದಿ? ನಾವು ಐಗುಪ್ತದೇಶದಲ್ಲಿದ್ದಾಗಲೇ – ನೀನು ನಮ್ಮ ಗೊಡವೆಗೆ ಬರಬೇಡ; ನಾವು ಐಗುಪ್ತ್ಯರಿಗೆ ದಾಸರಾಗಿಯೇ ಇರುವೆವು ಎಂಬದಾಗಿ ನಿನಗೆ ಹೇಳಲಿಲ್ಲವೇ? ನಾವು ಅರಣ್ಯದಲ್ಲಿ ಸಾಯುವದಕ್ಕಿಂತ ಐಗುಪ್ತ್ಯರಿಗೆ ದಾಸರಾಗಿರುವದೇ ವಾಸಿಯಲ್ಲವೇ ಎಂದು ಹೇಳಿದರು. ಆದರೆ ಮೋಶೆ ಆ ಜನರಿಗೆ – ನೀವು ಅಂಜಬೇಡಿರಿ; ಸುಮ್ಮನೆ ನಿಂತುಕೊಂಡಿದ್ದು ಯೆಹೋವನು ಈ ಹೊತ್ತು ನಿಮ್ಮನ್ನು ರಕ್ಷಿಸುವ ರೀತಿಯನ್ನು ನೋಡಿರಿ. ನೀವು ಈ ಹೊತ್ತು ನೋಡುವ ಐಗುಪ್ತ್ಯರನ್ನು ಇನ್ನು ಮುಂದೆ ಎಂದಿಗೂ ನೋಡುವದಿಲ್ಲ. ಯೆಹೋವನೇ ನಿಮಗಾಗಿ ಯುದ್ಧಮಾಡುವನು; ನೀವಂತು ಸುಮ್ಮನೇ ಇರ್ರಿ ಎಂದು ಹೇಳಿದನು. (ವಿಮೋಚನಕಾಂಡ 14:10–14)

ಇವತ್ತಿನ ಪಾಠದಲ್ಲಿ ಇಸ್ರಾಯೇಲ್ಯರು ದೇವರಲಿ ನೀರಿಕ್ಷಿಸಿದನ್ನು ಹೇಗೆಂದು ನಾವು ಕಲಿಯುತ್ತೇವೆ. ಐಗುಪ್ತೀಯರು ಇಸ್ರಾಯೇಲ್ ಜನರನ್ನು ಕಳುಹಿಸಿದ ನಂತರ ಅವರು ತುಂಬ ವ್ಯಸನಗೊಂಡರು. ಫರೋಹನು ಮತ್ತೊಮ್ಮೆ ಇಸ್ರಾಯೇಲ್ಯರನ್ನು ಗುಲಾಮಗಿರಿಗೆ ಕರತರಬೇಕೆಂದು ಅವರನ್ನು ಬೆನ್ನಟ್ಟಿ ಬಂದನು. ಇನ್ನೆಂದಿಗೂ



### ಸಂದೇಶ ವ್ಯವಸ್ಥೆ

"ದೇವರಲ್ಲಿ ನಿರೀಕ್ಷಿಸು!"

ಈ ಪಾಠವು ನಡೆಯುತ್ತಿರುವಾಗಲೇ, ಪ್ರತಿಸಾರಿ ವಿದ್ಯಾರ್ಥಿಗಳೆಲ್ಲರು "ದೇವರಲ್ಲಿ ನಿರೀಕ್ಷಿಸು" ಎಂದು ಕೇಳಬೇಕು, ಅದಕ್ಕೆ ಅವರೆಲ್ಲರೂ "ನಾನು ಸಿದ್ಧವಾಗಿದ್ದೇನೆ" ಎಂದು ಜಿಗಿಯುತ್ತಾ, ಅವರ ಎರಡು ಕೈಗಳನ್ನು ಬಾಕ್ಸಿಂಗ್ ಆಡುವಂತೆ ತಮ್ಮ ಕೈಗಳನ್ನು ಆಡಿಸಿ ಹೇಳಬೇಕು, ಮತ್ತು ಒಬ್ಬರ ಕೈಗಳನ್ನು ಮತ್ತೊಬ್ಬರು ಹಿಡಿದುಕೊಂಡು ಕೇಳಗೆ ಕುಳಿತು "ಆದರೆ ನಾನು ಕಾದಿರ ಬೇಕು" ಎಂದು ಹೇಳಬೇಕು.



www.ChildrenAreImportant.com – Children's ministry resources, Sunday School, and Vacation Bible School (VBS) curriculum for churches and teachers. Kannada

ಗುಲಾಮರಾಗಿರುವದಿಲ್ಲವೆಂದು ಅವರು ಪಡೆದ ಜಯವು ಈಗ ವ್ಯರ್ಥವಾಯಿತೆಂದು ಇಸ್ರಾಯೇಲ್ಯರು ಆಲೋಚಿಸಿದರು. ಶತ್ರುಗಳು ಅವರನ್ನು ಬೆನ್ನಟ್ಟಿ ಬರುತ್ತಿರುವಾಗ, ಅವರು ತುಂಬ ಭಯಾಂದೋಳನಕ್ಕೆ ಗುರಿಯಾದರು. ನಿಜಕ್ಕೆ ಹೇಳಬೇಕೆಂದರೆ, ಅವರು ದೂರು ಮಾಡಲು ಪ್ರಾರಂಭಿಸಿದರು ಮತ್ತು ಐಗುಪ್ತ್ಯರ ದೇಶಕ್ಕೆ ಹಿಂತಿರುಗುವದಕ್ಕೆ ಇಚ್ಛಿಸಿದರು. ಸ್ವಾತಂತ್ರ್ಯ ಹೊಂದಿದವರಾಗಿ ಇರುವದಕ್ಕಿಂತ ಗುಲಾಮರಾಗಿರುವದು ಎಷ್ಟೋ ಉತ್ತಮವೆಂದು ಅವರು ನೆನೆದರು. ಯಾಕೆಂದರೆ ಶತ್ರುಗಳು ಅವರನ್ನು ಬೆನ್ನಟ್ಟಿ ಬರುತ್ತಿದರು. ಅವರು ಕೊನೆಯಾದಗಿ ಮಾಡಲು ಬಯಸಿದ್ದೇನೆಂದರೆ ದೇವರಲ್ಲಿ ನಿರೀಕ್ಷಿಸಿದರು.

# ಆಸ್ಟ್ರೋನಾಮಿಕಲ್ ಅಬ್ಸರ್ವೇಷನ್

## ದೇವರು ಮಹಿಮೆಯುಳ್ಳವನು

ಕರ್ತನು ಆತನ ಮಹಿಮೆಯಿಂದ ಅವರನ್ನು ಕಾಪಾಡಿದ್ದನ್ನು ಕಂಡು ಇನ್ನೂ ಅವರ ಭಯಾಂದೋಳನಕ್ಕೆ ಗುರಿಯಾಗಿದ್ದರೆಂದು ನಾವು ತಿಳಿದಾಗ ಆಶ್ಚರ್ಯವೆನಿಸಲಿಲ್ಲವೇ? ಅವರು ಅರಣ್ಯದಲ್ಲಿ ಪ್ರಯಾಣ ಮಾಡುತ್ತಿರುವಾಗ ದೇವರು ಅದ್ಭುತವಾದ ಕಾರ್ಯಗಳನ್ನು ಮಾಡಿದರು! ಹಗಲಲ್ಲಿ ಅವರನ್ನ ಕಾಯಲು ದೊಡ್ಡ ಮೇಘ ಸ್ತಂಭವನ್ನು ಮತ್ತು ರಾತ್ರಿಯಲ್ಲಿ ಅವರನ್ನು ಕಾಯಲು ಮತ್ತು ಅವರಿಗೆ ಬೆಳಕನ್ನು ಕೊಡಲು ಅಗ್ನಿ ಸ್ತಂಭವನ್ನು ದೇವರು ನೇಮಿಸಿದನು! ಲಕ್ಷಾಂತರ ಜನರು ಅಗ್ನಿ ಸ್ತಂಭದ ಮುಂದೆ ಅರಣ್ಯದ ಮಾರ್ಗದಲ್ಲಿ ನಡಿಯುವುದನ್ನು ನೀವು ಊಹಿಸಕೊಳ್ಳುವಿರಾ? ಅಲ್ಲಿ ಎಷ್ಟು ಜನರಿರುವರೆಂದು ಅಥವಾ ಆ ಅಗ್ನಿ ಸ್ತಂಭವು ಎಷ್ಟು ದೊಡ್ಡದೆಂದು ನಮಗೆ ತಿಳಿಯದು, ಆದರೆ ಅಲ್ಲಿ ದೊಡ್ಡ ಗುಂಪು ಇದ್ದಿರಬಹುದು ಮತ್ತು ಅಲ್ಲಿ ಚಿಕ್ಕ ಬೆಂಕಿಯ ಕಣವು ಇರಲು ಸಾದ್ಯವಿಲ್ಲ. (ಅವರು ಆರು ಲಕ್ಷ ಕಾಲ್ಬಲವುಳ್ಳವರು ಇದ್ದಾರೆಂದು ಸತ್ಯವೇದವು ನಮಗೆ ತಿಳಿಸುತ್ತಿದೆ, ಅವರಲ್ಲಿ ಸ್ತ್ರಿಯರು, ಮಕ್ಕಳು ಮತ್ತು ವೃದ್ಧರು ಎಲ್ಲರನ್ನು ಸೇರಿ ಒಟ್ಟು ಸುಮಾರು ಇಪ್ಪತ್ತು ಲಕ್ಷ ಜನವಿರಬಹುದೆಂದು ಪಂಡಿತರು ಲೆಕ್ಕ ಮಾಡಿದ್ದಾರೆ.) ಇದು ಅದ್ಭುತವಾದ ಮತ್ತು ಮಹತ್ವವುಳ್ಳ ಕಾರ್ಯ! ದೇವರು ಅವರು ಪ್ರಯಾಣ ಮಾಡುವಾಗ ಅಸಾಮಾನ್ಯವಾದ ಸೂಚಕ ಕಾರ್ಯವನ್ನು ಮಾಡಿದರು, ಹೀಗಿದ್ದರೂ ಶತ್ರು ಸೈನ್ಯವನ್ನು ಕಂಡ ಕೂಡಲೆ ಅವರು ಭಯಾಂದೋಳಕ್ಕೆ ಗುರಿಯಾದರು.

ದೇವರಿಗೆ ವಿಧೇಯರಾಗಲು ಪ್ರಯತ್ನಪಡುತ್ತಿರುವಾಗ ನೀವು ಮತ್ತು ನಾವು ಅನೇಕಬಾರಿ ಇಸ್ರಾಯೇಲ್ಯರ ಹಾಗೆ ಭಯಕ್ಕೆ ಗುರಿಯಾಗುತ್ತಿರುತ್ತೇವೆ. ಕೆಲವೊಮ್ಮೆ ನಾವು ಎಲ್ಲೂ ಹೋಗಲಾರದಂಥೆ ನಮ್ಮ ಸುತ್ತ ಮುತ್ತ ಪರಿಸ್ಥಿತಿಗಳು ಅರಣ್ಯದಂಥೆ ಕಂಡು ಬರುತ್ತಾ ಇರುತ್ತವೆ ಮತ್ತು ನಮ್ಮ ಶತ್ರುವು ಬೆನ್ನಟ್ಟಿ ಬಂದಂಥೆ ಅನಿಸುತ್ತದೆ. ದೇವರ ದೊಡ್ಡ ಕಾರ್ಯಗಳನ್ನು ನೋಡಿ, ಆತನ ಮಹಿಮೆಯನ್ನು ಕಂಡು, ಆತನ ಅದ್ಭುತ ಕಾರ್ಯಗಳನ್ನು ನೋಡಿದರು ಮತ್ತು ನಮ್ಮನ್ನು ಆತನು ರಕ್ಷಿಸಿದ್ದನ್ನು ನೆನೆಸಿಕೊಳ್ಳಬೇಕು. ನಾವು ಭಯಪಡುವ ಸ್ಥಿತಿಯಲ್ಲಿದ್ದರೇ, ದೇವರಲ್ಲಿ ನಿರೀಕ್ಷಿಸುವುದು ತುಂಬಾ ಕಷ್ಟ.

ಇಸ್ರಾಯೇಲ್ಯರಿಗೆ ಎರಡು ಅವಕಾಶಗಳು ಇದ್ದಂಥೆ ನೆನೆಸಿಕೊಂಡಿರಬಹುದು, ಮೊದಲನೇಯದು ಓಡಿಹೋಗುವುದೋ ಅಥವಾ ಅವರೊಂದಿಗೆ ಯುದ್ಧ ಮಾಡುವುದೋ. ಸುಮ್ಮನೆ ಕುಳಿತು ದೇವರಲ್ಲಿ ನಿರೀಕ್ಷಿಸುವದು ಅವರ ಮನಸ್ಸಿನಲ್ಲಿ ಬಂದಿಲ್ಲವೇನೋ. ಯಾವುದೇ ಕೇಡು ಉಂಟಾಗುತ್ತಿದ್ದರೇ ಯಾರಾದರು ಅಲ್ಲಿ ಕುಳಿತುಕೊಂಡು ಕಾದಿರುವರೋ??? ಎಲ್ಲರಿಗೆ ಗೊತ್ತಿರುವುದೇನಂದರೆ ಯುದ್ಧ ಮಾಡುವುದೋ ಅಥವಾ ಓಡಿ ಹೋಗುವುದೋ, ಆದರೆ ದೇವರಿಗೆ ಒಂದು ಪ್ರಣಾಳಿಕೆಯುಂಟು. ಮೋಶೆ ದೇವರ ಪ್ರಣಾಳಿಕೆಯನ್ನು ಕೇಳಿದನು ಮತ್ತು ಅದರ ಕುರಿತಾಗಿ ಎಲ್ಲರೊಂದಿಗೆ ಹಂಚಿಕೊಂಡನು... "ಸುಮ್ಮನೆ ನಿಂತುಕೊಂಡಿದ್ದು ಯೆಹೋವನು ಈ ಹೊತ್ತು ನಿಮ್ಮನ್ನು ರಕ್ಷಿಸುವ ರೀತಿಯನ್ನು ನೋಡಿರಿ." ಅವರು ದೇವರಲ್ಲಿ ನಿರೀಕ್ಷಿಸುತ್ತಿರುವಾಗ, ದೇವರು ಅವರಿಗಾಗಿ ಯುದ್ಧಮಾಡುವುದೇ ದೇವರ ಪ್ರಣಾಳಿಕೆಯಾಗಿತ್ತು!

ನಿಮ್ಮಲ್ಲಿ ಎಷ್ಟು ಜನ ಸುಮ್ಮನೆ ಕುಳಿತು ಮತ್ತು ಕಾದಿರುವಿರಿ? ಯಾರು ಇಲ್ಲ! ಕೆಲವೊಮ್ಮೆ ನೀವು ಮತ್ತು ನಾವು ತೊಂದರೆಗಳಲ್ಲಿ ಸಿಕ್ಕಿಕೊಂಡಂಥೆ ಈ ಜನರು ಕೂಡಾ ತೊಂದರೆಯಲ್ಲಿ ಸಿಕ್ಕಿಕೊಂಡಿದ್ದರು. ಅವರು ದೇವರಲ್ಲಿ ನಿರೀಕ್ಷಿಸುವುದು ಮತ್ತು ದೇವರು ಅವರಿಗಾಗಿ ಯುದ್ಧಮಾಡುದೇ ದೇವರ ಪ್ರಣಾಳಿಕೆಯಾಗಿತ್ತು. ಇನ್ನೊಂದು ಬಾರಿ ನೀವು ತೊಂದರೆಯಲ್ಲಿ ಸಿಕ್ಕಿಕೊಂಡಾಗ, ದೇವರ ಬಳಿ ಕೇಳಿರಿ ಮತ್ತು ಆತನು ನಿಮ್ಮ ಕುರಿತಾಗಿ ಯುದ್ಧಮಾಡದಿರುವನೋ ನೋಡಿರಿ. ನಿಮ್ಮ ಕೆಲಸವು ಕೇವಲ ಇಸ್ರಾಯೇಲ್ಯರು ಮಾಡಿದಂಥಿರಬೇಕು: ದೇವರಲ್ಲಿ ನಿರೀಕ್ಷಿಸುವದು.

# ಮೆಸ್ ಹಾಲ್

## ಮೇಘ ಸ್ತಂಭಗಳು

ಅಲ್ಪಾಹಾರ ಕೇಂದ್ರ

ಪಾಪ್ ಕಾರ್ನ್, ಇಸ್ರಾಯೇಲ್ಯರನ್ನು ಅರಣ್ಯದಲ್ಲಿ ನಡಿಸಿದ ಮೇಘಗಳನ್ನು ಸೂಚಿಸುತ್ತವೆ. ಸ್ತಂಭವನ್ನು ಮಾಡಲು, ಒಂದು ಸಣ್ಣ ಕಡ್ಡಿಯನ್ನು ತಿನ್ನಬಹುದಾದ ಸಿರಪ್‌ನಲ್ಲಿ ಅದ್ದಿ ಮತ್ತು ಪಾಪ್ ಕಾರ್ನ್ ಹಾಕಿರುವ ಬಟ್ಟಲ್ಲಲ್ಲಿ ಅದ್ದಿ ಮತ್ತು ಪಾಪ್ ಕಾರ್ನ್ ಆ ಕಡ್ಡಿಗೆ ಅಂಟಿಕೊಂಡಿರುವದನ್ನು ನೀವು ಕಾಣುವಿರಿ. ಹೆಚ್ಚಾಗಿ ಮಕ್ಕಳು ಸಂತೋಷ ಪಡುವಂಥೆ ಮಕ್ಕಳೇ ತಮ್ಮ ಕೈಗಳಿಂದ ಸ್ವಂತವಾಗಿ ಮಾಡುವಂಥೆ ಅವರಿಗೆ ಅನುಮತಿ ನೀಡಿರಿ.



# ಫ್ಯಾಕ್ಟಾಯಿಡ್

## ಅಂತರಿಕ್ಷ ನೌಕೆಗಳು

(ಅಲ್ಪಾಹಾರವನ್ನು ತೆಗೆದುಕೊಳ್ಳುತ್ತಿರುವಾಗ ಅಂತರಿಕ್ಷ ಅನ್ವಯದ ಕುರಿತಾಗಿ ಚರ್ಚಿಸಕೊಳ್ಳಬಹುದು)

ಚಂದ್ರನನ್ನು ನೋಡಿದ ದಿನದಿಂದಲೂ ಮನುಷ್ಯನು ಆ ಚಂದ್ರನಬಲಿಗೆ ಪ್ರಯಾಣಮಾಡಲು ಇಷ್ಟ ಪಡುತ್ತಿದ್ದನು. ಅಂತರಿಕ್ಷ ನೌಕಯಾನದಲ್ಲಿ ಈ ಅದ್ಭುತವಾದ ವಿಷಯದ ಕುರಿತಾಗಿ ಒಮ್ಮೆ ಯೋಚಿಸಿ: ಚಂದ್ರಯಾನಕ್ಕೆ "ಟೇಕಾಫ್" ಆದ ಕೂಡಲೆ ಗಗನಯಾತ್ರಿಕರು "ಎಸ್ಕೇಪ್ ವೆಲಾಸಿಟಿ"ಯನ್ನು ಹಿಡಿದು, ಎಲ್ಲಾ ಇಂಜಿನ್‌ಗಳನ್ನು ಆಫ್ ಮಾಡುವರು. ಉಳಿದ ಮಾರ್ಗದ ಆಚೆಗೆ ಪ್ರಯಾಣಿಸುವರು. ಆ ಮೋಟಾರುಗಳು ಪೂರ್ತಿಯಾಗಿ ನಿಂತು ಹೋದ ನಂತರ ಆ ಅಂತರಿಕ್ಷ ನೌಕೆ ತುಂಬ ವೇಗವಾಗಿ ಪ್ರಯಾಣಿಸುತ್ತದೆ! ಈ ತರಹ ವಿಧಾನವು ನಮ್ಮಲ್ಲಿಯೂ ನಿಮ್ಮಲ್ಲಿಯೂ ನಡೆಯುತ್ತದೆ. ಕೆಲವೊಮ್ಮೆ, ನಾವು ತುಂಬ ಕಷ್ಟ ಪಟ್ಟರೆ ಮಾತ್ರ ನಾವಂದುಕೊಂಡ ಹಾಗೇ ಕಡೆಗೆ ಹೋಗಬಹುದೆಂದು ಯೊಚಿಸುತ್ತೇವೆ. ಅಂತರಿಕ್ಷ ನೌಕೆಯಲ್ಲಿ ಗಗನಯಾತ್ರಿಕರು ಕುಳಿತದ್ದಂಥೆ, ಅನೇಕ ಬಾರಿ, ನಾವು ಸಹಾ ಸುಮ್ಮನೆ ಕುಳಿತು ಕಾದಿರಬೇಕೆಂದು ದೇವರು ಹೇಳುತ್ತಾರೆ. ದೇವರು ನಮ್ಮನ್ನು ನಡೆಸುವಹಾಗೆ ನಾವು ಎನ್ನನೂ ಮಾಡದೇ ಸುಮ್ಮನಿರ ಬೇಕು. ಆ ದೊಡ್ಡ ಅಂತರಿಕ್ಷದ ಮಧ್ಯದಲ್ಲಿ ತಮ್ಮ ರಾಕೆಟ್ಟಿನ ಇಂಜನ್‌ಗಳನ್ನು ಆಫ್ ಮಾಡುವರು... ಅವರು ಎಷ್ಟು ವೇಗವಾಗೆ ಹೋಗ ಬೇಕೋ ಅದು ಹೋಗುವುದೆಂದು ಅವರು ನಂಬುವುತ್ತಾರೆ. ಇದು ಎಷ್ಟು ಕಷ್ಟಕರವಾದ ವಿಷಯವಲ್ಲವೋ! ದೇವರು ನಮ್ಮನ್ನು ನಿರೀಕ್ಷಿಸಿ ಎಂದು ಹೇಳಿದಾಗ ನಾವು ಕೂಡಾ ಸುಮ್ಮನೆ ಇದ್ದು, ತುಂಬಾ ವೇಗವಾಗಿ ಪ್ರಯಾಣಿಸುತ್ತೇವೆಂದು ತಿಳಿದು ಅರಾಮಾಗಿರಬೇಕು!



www.ChildrenAreImportant.com – Children's ministry resources, Sunday School, and Vacation Bible School (VBS) curriculum for churches and teachers. Kannada

## ಇಂಜಿನೀರಿಂಗ್



### ಗೆಲಾಕ್ಸಿ ಎಕ್ಸ್‌ಪ್ರೆಸ್ ರಾಕೆಟ್

ಬೇಕಾದವುಗಳು :

* ಎಲ್ಲಾ ಮಕ್ಕಳಿಗೂ ಅಂತರಿಕ್ಷ ನೌಕೆಯ ನಮೂನೆ.
* ಕತ್ತರಿ (ಮಕ್ಕಳು ತಮ್ಮ ನೌಕೆಯನ್ನು ತಾವೇ ಕತ್ತರಿಸಬೇಕೆಂದಿದ್ದರೆ ಆ ರೀತಿಯಾಗಿ ಮಾಡಿರಿ. ಚಿಕ್ಕ ಮಕ್ಕಳಿಗಾಗಿ ಶಿಕ್ಷಕರು ನೌಕೆಯ ಭಾಗಗಳನ್ನು ಸೇರಿಸುವುದಕ್ಕೆ ಮುಂಚಿತವಾಗಿಯೆ ಕತ್ತರಿಸಿರಬೇಕು.)
* ಕ್ರೆಯಾನ್ಸ ಅಥವಾ ಬಣ್ಣದ ಪೆನ್ಸಿಲ್‌ಗಳು.
* ಅಂಟಿನ ಟೇಪ್ ಅಥವಾ ಅಂಟು

ಇಷ್ಟವಿದ್ದಲ್ಲಿ: ಕಾಲಿ ಟಾಯಿಲೆಟ್ ಪೇಪರಿನ ಟ್ಯೂಬನ್ನು ಉಪಯೋಗಿಸಬಹುದು.

ಇಷ್ಟವಿದ್ದಲ್ಲಿ: ಅಲಂಕಾರಕ್ಕಾಗಿ ನಕ್ಷತ್ರಗಳನ್ನು ಅಂಟಿಸಿ ಅಥವಾ ಸಣ್ಣ ಸಣ್ಣ ಅಲುಮೀನ್ಯಂ ಫಾಯಿಲ್‌ನ ತುಂಡುಗಳನ್ನು ಅಂಟಿಸಬಹುದು.

ಸೂಚನೆಗಳು:

1. ಎಲ್ಲಾ ದಪ್ಪ ಗೆರೆಗಳನ್ನು ಕತ್ತರಿಸಿ.
2. ಎಲ್ಲಾ ಭಾಗಗಳಲ್ಲಿ ಬಣ್ಣವನ್ನು ಹಚ್ಚಿರಿ.
3. "ಗೆಲಾಕ್ಸಿ ಎಕ್ಸ್‌ಪ್ರೆಸ್"ನ್ನು ಟ್ಯೂಬ್ ಆಕಾರದಲ್ಲಿ ಸುತ್ತಿ ಅದನ್ನು ಅಂಟು ಅಥವಾ ಅಂಟಿನ ಟೇಪಿನೊಂದಿಗೆ ಬದ್ರಪಡಿಸಿ.
4. ರಾಕೆಟ್ಟಿನ ಮುಖ್ಯ ಭಾಗಕ್ಕೆ ಸೇರಿಸಲು ರೆಕ್ಕೆಗಳಿಗೆ ಟ್ಯಾಬುಗಳಿವೇ. ಅವುಗಳನ್ನ ರಾಕೆಟ್ಟಿನ ಮುಖ್ಯ ಭಾಗಕ್ಕೆ ಸೇರಿಸುವದಕ್ಕಿಂತ ಮುಂಚಿತವಾಗಿ ಆ ರೆಕ್ಕೆಗಳನ್ನು ಒಂದರ ಮೇಲೆ ಮತ್ತೊಂದನ್ನು ಸೇರಿಸಿ.
5. ಮೇಲಿನ ಕೋನ್ ಆಕಾರವನ್ನು ಅಂಟಿಸುವದಕ್ಕಿಂತ ಮುಂಚಿತವಾಗಿಯೆ, ಟಾಯಿಲೆಟ್ ಪೇಪರಿನ ಟ್ಯೂಬನ್ನು ರಾಕೆಟ್ಟಿನ ಒಳ್ಳಕ್ಕೆ ಒತ್ತಿ ಮಲ್ಲಗೆ ಸುತ್ತಿ.
6. ಕೋನ್ ಆಕಾರವನ್ನು ಮಾಡಲು, ಚುಕ್ಕಿಗಳ ಗೆರೆಯ ಮೇಲೆ ಎರಡು ಭಾಗಗಳನ್ನು ಅಂಟಿಸಿ. ರಾಕೆಟ್ಟಿನ ಮೇಲಿರುವ ಟ್ಯಾಬ್‌ಗಳನ್ನು ಅಂಟು ಅಥವಾ ಅಂಟಿನ ಟೇಪ್ ನೊಂದಿಗೆ ಅಂಟಿಸಿ.

## ಕ್ಯಾಡೆಟ್ ತರಗತಿ



### ದೇವರಲ್ಲಿ ನಿರೀಕ್ಷಿಸು

ಮೊತ್ತೊಂದು ಬಾರಿ ಕಥೆಯನ್ನು ಪುನಃರಾವೃತ ಮಾಡಿಕೊಳ್ಳಿರಿ, ಚಿಹ್ನೆಯ ಭಾಷೆಯಲ್ಲಿ ಈ ಪದಗಳನ್ನು ಬೋಧಿಸಿರಿ. ಆದನಂತರ ವಿದ್ಯಾರ್ಥಿ ಪುಸಕಗಳನ್ನು ಹಂಚಿರಿ ಮತ್ತು ಪಜಿಲ್‌ಗಳನ್ನು ಮಾಡುತ್ತಿರುವಾಗ ಅವರೊಂದಿಗೆ ಸಹಾಯಕರೊಬ್ಬರನ್ನು ಇಟ್ಟುಕೊಳ್ಳಿರಿ.



**ವಾಗ್ದಾನ**

ಬಲಗೈ ತೋರು ಬೆರಳನ್ನು ತುಟಿಗಳ ಮೇಲಿಡಿ; ಎಡ ಮುಷ್ಟಿಯನ್ನು ತೆರೆಯಲು ಕದಿಲಿಸಿರಿ.




**ನೋಡಿರಿ**

ಕಣ್ಣುಗಳಿಂದ ಎರಡು ಬಲಗೈ ಬೆರೆಳುಗಳನ್ನು ತೆಗೆಯಿರಿ.

**ಜನರು**

ಹೆಬ್ಬೆರಳನ್ನು ಮತ್ತು ಮಧ್ಯದ ಬೆರಳನ್ನು ಮುಟ್ಟುತಿರುವಾಗ, ಒಳ ವೃತ್ತವನ್ನು ಎಳಿಯರಿ.



## ಸೇತುವೆ

ಆಟಗಳಿಗೋಸ್ಕರ ಮತ್ತು ಮುಕ್ತಾಯ ಮಾಡುವದಕ್ಕೋಸ್ಕರ ಸೇತುವೆಯ ಹತ್ತಿರಕ್ಕೆ ಬರುವದು.

### ನೂಡಲ್ಸ್ ತಳ್ಳುವಿಕೆ

ಒಂದೊಂದು ಗುಂಪಿನಿಂದ ಇಬ್ಬರು ಭಾಗವಹಿಸುವರು. ಮಕ್ಕಳು ಒಂದು ಚೆಕ್ಕೆಯ ಹಗಲದ ಮೇಲೆ ನಿಲ್ಲುವರು (2" x 6"). ಈ ಆಟದ ಗುರಿಯೇನಂದರೆ, ಆ ಮರದ ತುಂಡಿನ ಮೇಲಿಂದ ಎದುರಿಗಿರುವ ಆಟಗಾರನನ್ನು ಸ್ವಿಮ್ ನೂಡಲನ್ನು ಉಪಯೋಗಿಸಿ ಯುದ್ಧ ಮಾಡುತ್ತಿದ್ದಂಥೆ ಅವರು ಆಡಬೇಕು, ಆದರೆ ಅವರು ತಲೆಗೆ ಒಡಿಯಬಾರದು. ಆದರೆ ಆ ಹಲಗೆಯ ಮೇಲಿಂದ ನೆಲದಮೇಲೆ ಯಾರೇ ಕಾಲಿಟ್ಟರೇ ಅವರು ಈ ಆಟದಿಂದ ಔಟ್ ಆಗುತ್ತಾರೆ. ಗೆಲ್ಲಲು ಮತ್ತೊಬ್ಬ ಆಟಗಾರನು ಆ ಚೆಕ್ಕೆಯ ಹಗಲದ ಮೇಲೆ ನಿಂತರ ಬೇಕು. ಮಕ್ಕಳಿಗೆ ಗಾಯವಾಗದೆ ಇರುವ ಹಾಗೆ, ಚೆಕ್ಕೆಯ ಹಗಲವನ್ನು ತುಂಬ ಮೆಲೆ ಇಡಬೇಡಿರಿ. ಸ್ವಿಮ್ ನೂಡಲ್ ಸಿಗದಿದ್ದರೆ ಯಾವುದಾದರು ಮೆತ್ತಗೆ ಇರುವ ವಸ್ತುವನ್ನು ಅಥವಾ ಹಾನಿ ಮಾಡದಂಥಿರುವ ಯಾವುದಾದರೊಂದು ಮೆತ್ತಗಿರುವ ಪೈಪನ್ನು ಉಪಯೋಗಿಸಿರಿ.

### ಪಿರಾಮಿಡನ್ನು ಮಾಡುವುದು


ಇದು ತುಂಬ ಸುಲಭವಾದ ಆಟ. ಒಂದೊಂದು ತಂಡದಿಂದ 6 ಮಂದಿ ಮಕ್ಕಳು ಅದಷ್ಟು ಬೇಗ ಪಿರಾಮಿಡನ್ನು ಮಾಡಬೇಕು. (ಮೂವರು ಆಟಗಾರರು ಕೆಳಗಿನ ಭಾಗದಲ್ಲಿ ಪ್ರೇಕ್ಷಕರ ಕಡೆಗೆ ತಿರುಗಿ ಮುಖಮಾಡಿ, ಮೊನಕಾಲೂರಬೇಕು. ಇಬ್ಬರು ಆ ಮೂವರ ಆಟಗಾರರ ಹಿಂಭಾಗದಲ್ಲಿ ಮೊನಕಾಲೂರಬೇಕು ಮತ್ತು ಅವರಲ್ಲಿ ಸಣ್ಣಗಿರುವ ಆಟಗಾರನು ಮಧ್ಯೆ ಸಾಲಿನಲ್ಲಿ ಹತ್ತಿ ಅವರ ಮೇಲೆ ನಿಂತುಕೊಳ್ಳಬೇಕು.) ಪಿರಾಮಿಡ್‌ನ್ನು ಯಾರು ಮೊದಲು ಪೂರ್ಣಗೊಳಿಸುವರೋ ಅವರೇ ಗೆಲ್ಲುವರು!



www.ChildrenAreImportant.com – Children's ministry resources, Sunday School, and Vacation Bible School (VBS) curriculum for churches and teachers. Kannada


# 5ನೇ ಅಂತರಿಕ್ಷ ಯಾನ

## ದೇವರನ್ನು ಆರಾಧಿಸು!




ಅಂತರಿಕ್ಷದ ಉಪಕರಣಗಳು:

ಎಕ್ಸ್‌ಪೋಟೆಲಿಟೆ





ಪ್ರಾರಂಭದ ನಾಟಕ

### ವಿಸ್ಫೋಟನೆ!

ಈ ದಿನ, ಪ್ರಪಂಚದಲ್ಲೆಲ್ಲಾ ಅಥವಾ ವಿಶ್ವದಲ್ಲೇ ಆತನೆ ಉತ್ತಮವಾದ ರೋಬೋಟ್ ಎಂದು ನೆನೆದು, ಅವನು ಎಷ್ಟು ವೈಭವಶಾಲಿಯೆಂದು ಕೇಪ್ಟನ್ ಹೊಗಳ ಬೇಕಾಗಿ ರೋಬೋಟ್ ಬಯಸುತ್ತಾನೆ.

ದೇವರು ಒಬ್ಬರೇ ವೈಭವಶಾಲಿಯಾಗಿರುವರು, ಪ್ರಜೆಗಳೆಲ್ಲರೂ ಸಾಮಾನ್ಯ ಜನರೆಂದು ಕೇಪ್ಟನ್ ಹೇಳಲು ಪ್ರಯತ್ನಿಸುತ್ತಾನೆ, ಆದರೆ ಅವನೇ ಪರಿಪೂರ್ಣನೆಂದು ರೋಬೋಟ್ ನಿಶ್ಚಯವಾಗಿ ಹೇಳುತ್ತಾನೆ

ಹಿಂದಿನ ದಿನ ಅವನು ಹೋಗಬೇಕೆಂದು ಬಯಸಿದ ಸಾಟಿಲೈಟ್‌ಗೆ ಹೋಗುತ್ತಿರುವದರಿಂದ ರೋಬೋಟ್ ತುಂಬ ಉತ್ತೇಜಕನಾಗಿದ್ದಾನೆ ಮತ್ತು ಅಲ್ಲಿ ಒಂದು ಸಿನಿಮಾವನ್ನು ನೋಡುತ್ತೇವೆಂದು ಕೇಪ್ಟೆನ್ ಹೇಳುತ್ತಾನೆ! ನಕ್ಷತ್ರದ ವಿಸ್ಪೋಟನೆಯನ್ನು, ಅಂದರೆ ಸುಪರ್‌ನೋವಾವನ್ನು ಅವರು ನೋಡುತ್ತಾರೆ! ಸಾಟಲೈಟ್‌ಯಾಗಿರುವ "ಎಕ್ಸಪ್ಲಾಯಟ್‌ಲೈಟ್" ಎಂಬ ಅಂತರಿಕ್ಷ ಸ್ಟೇಷನ್‌ಗೆ ಹೋಗಲು ಅವರು ಟೇಕಾಫ್‌ಗೆ ಸಿದ್ದಪಡುತ್ತಾರೆ. ಎಲ್ಲವನ್ನು ಚೆನ್ನಾಗಿ ಸರಿಯಾಗಿ ಮಾಡುತ್ತಿರುವಂಥೆ ರೋಬೋಟ್ ತೋರಿಸಿಕೊಳ್ಳುತ್ತಿರುವಂಥೆ ನಿಮ್ಮ ನಾಟಕವನ್ನು ಮುಂದುವರಿಸಿರಿ, ಆದರೆ ಆತನು ನಿಜಕ್ಕೆ ತಪ್ಪುಗಳನ್ನು ಮಾಡುತ್ತಿರುತ್ತಾನೆ. ಉದಾಹರಣೆಗೆ, ನೌಕೆಯನ್ನು ನಡಿಸುತ್ತಿರುವಾಗ, ಕೈಗಳ ಸಹಾಯವಿಲ್ಲದೇ ಅವನು ನೌಕೆಯನ್ನು ನಡಿಸಬಹುದೆಂದು ತೋರಿಸಿಕೊಳ್ಳುವನು, ಆ ಸಮಯದಲ್ಲಿ ತನ್ನ ಶೂಗಳನ್ನು ಕಟ್ಟಿಕೊಳ್ಳುತ್ತಿರುವಂಥೆ ತೋರಿಸಿಕೊಳ್ಳುವನು. ಅವನು ನೋಡದೆ ಇರುವಾಗ, ಪಕ್ಕದಲ್ಲಿ ಹೋಗುತ್ತಿರುವ ಕಾಮೆಟನ್ನು ತಪ್ಪಿಸಲು, ಕೇಪ್ಟನ್ ಆ ನೌಕೆಯನ್ನು ನಡೆಸುತ್ತಾನೆ!

ಸ್ವಲ್ಪ ಸಮಯದವರೆಗೂ ತಾನು ಮಾಡುವ ತಪ್ಪುಗಳನ್ನು ಗ್ರಹಿಸಿಕೊಳ್ಳದಿರುವ ಸಮಯದಲ್ಲಿ ರೋಬೋಟ್ ಒಂದು ದೊಡ್ಡ ತಪ್ಪನ್ನೇ ಮಾಡಿ ತುಂಬ ಪಶ್ಚಾತ್ತಾಪಪಡುತ್ತಾನೆ.

ಕೇಪ್ಟನ್ ಆ ದಿನದ ಮಾತನ್ನು ತಿಳಿಯಪಡಿಸುವನು: "ದೇವರನ್ನ ಆರಾಧಿಸು," ಮತ್ತು ನಮ್ಮನ್ನು ನಾವೇ ಆರಾಧಿಸುಕೊಳ್ಳದೇ, ದೇವರನ್ನೇ ನಾವು ಆರಾಧಿಸುವವರಾಗಿರಬೇಕೆಂದು ಹೇಳುವನು! ಪ್ರೇಕ್ಷಕರಿಗೂ ಮತ್ತು ರೋಬೋಟ್‌ಗೆ "ನಾನು ನಿನ್ನನ್ನೇ ಆರಾಧಿಸುತ್ತೇನೇ" ಎಂದು ಪ್ರತಿಸ್ಪಂದನೆಯಾಗಿ ಹೇಳುವಾಗ ಅವರ ಕೈಗಳನ್ನು ಮೇಲಕ್ಕೆತ್ತಿ, ಗಾಲಿಯಲ್ಲಿ ಆಡಿಸ ಬೇಕೆಂದು ಕೇಪ್ಟನ್ ಬೋಧಿಸುತ್ತಾನೆ.

ಸಾಟಲೈಟನ್ನು ಸಮೀಪಿಸುತ್ತಿರುವಾಗ, ಸೂಚನೆಗಾಗಿ ಗೂಗಲ್‌ಮಾಪ್‌ಗಳನ್ನು ಮರೆತು ಬಂದಿರುವದನ್ನು ಕೇಪ್ಟನ್ ಗ್ರಹಿಸುತ್ತಾನೆ. ಸಾಟಲೈಟನ್ನು ಹೇಗೆ ಸೇರುವುದೋ ಅವನಿಗೆ ಗೊತ್ತಿಲ್ಲಾ. ಅವರು ಕೆಲವೊಮ್ಮೆ ಊಹಿಸುತ್ತಾರೆ, ಕೆಲವೊಮ್ಮೆ ಪ್ರಾರ್ಥಿಸುತ್ತಾರೆ, ಬಲಕ್ಕೆ ತಿರುಗುತ್ತಾರೆ, ಎಡಕ್ಕೆ ತಿರುಗುತ್ತಾರೆ, ಮತ್ತು ಕೊನೆಯದಾಗಿ ಅವರು ಸರಿಯಾದ ಅಂತರಿಕ್ಷ ಸ್ಟೇಷನನ್ನು ಸೇರಿಕೊಳ್ಳುತ್ತಾರೆ! ದೇವರು ಅವರಿಗೆ ದಾರಿ ತೋರಿಸಲು ಸಹಾಯಮಾಡಿದ್ದಾನೇ ಎಂದು ತಿಳಿದು, ಕೇಪ್ಟನ್ ಮತ್ತು ರೋಬೋಟ್ ಇಬ್ಬರು "ನಾನು ನಿನ್ನನ್ನೇ ಆರಾಧಿಸುವೆನು" ಎಂದು ಜೋರಾಗಿ ಕಿರುಚಿ ಅವರ ಕೈಗಳನ್ನು ಮೇಲಕ್ಕೆತ್ತಿದರು.

ಲ್ಯಾಂಡ್ ಆದ ಮೇಲೆ, ಸುಪರ್‌ನೋವಾವನ್ನು ನೋಡುತ್ತಾರೆಂದು ಉತ್ಸಾಹದಿಂದ ಅವರು ಹೊರಗೆ ಹೋಗುವರು.



### ಒಳ ಸಂದೇಶ...

ಬೈಬಲ್ ವಾಕ್ಯ

"ಯಾಹುವಿಗೆ ಸ್ತೋತ್ರ! ದೇವರನ್ನು ಆತನ ಪರಿಶುದ್ಧಾಲಯದಲ್ಲಿ ಸ್ತುತಿಸಿರಿ; ಆತನ ಶಕ್ತಿ ಪ್ರದರ್ಶಕವಾದ ಆಕಾಶಮಂಡಲದಲ್ಲಿ ಆತನನ್ನು ಸ್ತುತಿಸಿರಿ." – ಕೀರ್ತ.150:1.




### ಮಿಷನ್ ಕಂಟ್ರೋಲ್‌ನಿಂದ ಅರ್ಜೆಂಟ್..

ಮುಖ್ಯ ಪಾಠ

#### ಕೆಂಪು ಸಮುದ್ರವನ್ನು ದಾಟುವದು

ಅಷ್ಟರಲ್ಲಿ ಯೆಹೋವನು ಮೋಶೆಗೆ, – ಸಮುದ್ರದ ಮೇಲೆ ನಿನ್ನ ಕೈಚಾಚು; ಆಗ ಅದರ ನೀರು ಮೊದಲಿನಂತೆ ಬಂದು ಐಗುಪ್ತ್ಯರನ್ನೂ ಅವರ ರಥಗಳನ್ನೂ ರಾಹುತರನ್ನೂ ಮುಣುಗಿಸುವದೆಂದು ಹೇಳಿದನು. ಮೋಶೆ ಸಮುದ್ರದ ಮೇಲೆ ಕೈಚಾಚಿದನು. ಬೆಳಗಾಗುವಾಗಲೇ ಸಮುದ್ರದ ನೀರು ಮೊದಲಿದ್ದಂತೆಯೇ ತುಂಬಿಕೊಳ್ಳಲು ಐಗುಪ್ತ್ಯರು ಓಡಿಹೋಗುತ್ತಾ ಅದರ ಎದುರಾಗಿಯೇ ಬಂದರು. ಹೀಗೆ ಯೆಹೋವನು ಐಗುಪ್ತ್ಯರನ್ನು ಸಮುದ್ರದೊಳಗೆ ಕೆಡವಿ ಬಿಟ್ಟನು. ನೀರು ಮೊದಲಿನಂತೆ ಬಂದು ಆ ರಥಗಳನ್ನೂ ರಾಹುತರನ್ನೂ ಅವರ ಹಿಂದೆ ಸಮುದ್ರದೊಳಗೆ ಹೋಗಿದ್ದ ಫರೋಹನ ಸೈನ್ಯದವರೆಲ್ಲರನ್ನೂ ಮುಣುದಿಸಿತು. ಅವರಲ್ಲಿ ಒಬ್ಬರಾದರೂ ಉಳಿಯಲಿಲ್ಲ. ಇಸ್ರಾಯೇಲ್ಯರೋ ಸಮುದ್ರದೊಳಗೆ ಒಣನೆಲದಲ್ಲೇ ನಡೆದುಹೋದರು; ನೀರು ಅವರ ಎಡಗಡೆ ಬಲಗಡೆಗಳಲ್ಲಿ ಗೋಡೆಯಂತೆ ನಿಂತಿತ್ತು. ಆ ದಿನದಲ್ಲಿ ಯೆಹೋವನು ಇಸ್ರಾಯೇಲ್ಯರನ್ನು ಐಗುಪ್ತ್ಯರ ಕೈಗೆ ತಪ್ಪಿಸಿದನು. ಐಗುಪ್ತ್ಯರು ಸತ್ತು ಸಮುದ್ರತೀರದಲ್ಲಿ ಬಿದ್ದಿರುವದನ್ನು ಇಸ್ರಾಯೇಲ್ಯರು ಕಂಡರು.



### ಸಂದೇಶ ವ್ಯವಸ್ಥೆ

ದೇವರನ್ನು ಆರಾಧಿಸು!

ಪಾಠದಲ್ಲಿ "ದೇವರನ್ನು ಆರಾಧಿಸು" ಎಂದು ಕೇಳಿದ ಪ್ರತಿಯೊಂದು ಬಾರಿ, ಮಕ್ಕಳು ಪ್ರತಿಕ್ರಿಯೆ ನೀಡಲು "ನಾನು ನಿನ್ನನ್ನೇ ಆರಾಧಿಸುವೆನು" ಎಂದು ಹೇಳಿ ಅವರ ಕೈಗಳನ್ನು ಆಕಾಶದ ಕಡೆಗೆ ಎತ್ತಿ ಆಕಡೆ ಮತ್ತು ಈಕಡೆ ಆಡಿಸಬೇಕು.



## ಆಸ್ಟ್ರೋನಾಮಿಕಲ್ ಅಬ್ಸರ್ವೇಷನ್

# [ದೇವರು ಭಯಂಕರನು]

ಆಗ ಮೋಶೆಯೂ ಇಸ್ರಾಯೇಲ್ಯರೂ ಯೆಹೋವನ ಸ್ತೋತ್ರಕ್ಕಾಗಿ ಈ ಕೀರ್ತನೆಯನ್ನು ಹಾಡಿದರು –
ಯೆಹೋವನ ಸ್ತೋತ್ರವನ್ನು ಗಾನ ಮಾಡೋಣ; ಆತನು ಮಹಾಜಯಶಾಲಿಯಾದನು;
ಕುದುರೆಗಳನ್ನೂ ರಾಹುತರನ್ನೂ ಸಮುದ್ರದಲ್ಲಿ ಕೆಡವಿ ನಾಶಮಾಡಿದ್ದಾನೆ.
ನನ್ನ ಬಲವೂ ಕೀರ್ತನೆಯೂ ಯಾಹುವೇ, ಆತನಿಂದ ನನಗೆ ರಕ್ಷಣೆಯುಂಟಾಯಿತು.
ನಮ್ಮ ದೇವರು ಆತನೇ, ಆತನನ್ನು ವರ್ಣಿಸುವೆವು; ನಮ್ಮ ಪಿತೃಗಳ ದೇವರು ಆತನೇ, ಆತನ ಮಹಿಮೆಯನ್ನು
ಪ್ರಖ್ಯಾತಿಪಡಿಸುವೆವು. ( ವಿಮೋಚನಕಾಂಡ 14:26–30, 15:1–2)

ಹಿಂದಿನ ದಿನ ನಾವು ಇಸ್ರಾಯೇಲ್ಯರನ್ನು ಬಿಟ್ಟಾಗ; ಅವರು ಸಮಸ್ಯೆಗಳಲ್ಲಿ ಸಿಕ್ಕಿಕೊಂಡಿದ್ದರು ಮತ್ತು ಶತ್ರುಗಳು ಅವರ ಬೆನ್ನಟ್ಟಿಸಿದ್ದರು. ಅವರು ಯುದ್ಧಮಾಡುವುದೋ ಅಥವಾ ಓಡಿಹೋಗುವುದೋ ಎನ್ನುವ ಸ್ಥಿತಿಯಲ್ಲಿದ್ದರು. ಆದರೆ ಅವರು ದೇವರಲ್ಲಿ ನಿರೀಕ್ಷಿಸಿದರು. ಶತ್ರು ಸಮೂಹವೆಲ್ಲಾ "ಕೆಂಪು ಸಮುದ್ರ"ದ ಮಧ್ಯದಲ್ಲಿ ಅವರು ಸಿಕ್ಕಿಕೊಂಡಿದ್ದರು. ಅವರು ಸಿಕ್ಕಾಕಿಕೊಂಡಿದ್ದರು ಮತ್ತು ದೇವರ ಸಹಾಯಕ್ಕಾಗಿ ನಿರೀಕ್ಷಿಸಿದರು, ದೇವರು ಸಹಾಯ ಮಾಡಿದನು!
ನಾವು ದೇವರನ್ನು ಆರಾಧಿಸೋಣ!

ಮೋಶೆಗೆ ದೇವರು ಅವನ ಕೋಲನ್ನು ಎತ್ತಿ ಸಮುದ್ರದ ಮೇಲೆ ಚಾಚಲು ಹೇಳಿದನು ಮತ್ತು ತಕ್ಷಣವೇ ನೀರು ಎರಡಾಗಿ ವಿಭಾಗವಾಯಿತು! ಆ ಮಹಾ ಸಮುದ್ರ ಎರಡಾಗಿ ವಿಭಾಗವಾಗಿದ್ದು ಅವರು ಒಣ ನೆಲದಮೇಲೆ ನಡೆದರು! ಇದು ಪರಿಶುದ್ಧ ಗ್ರಂಥದಲ್ಲೇ ಒಂದು ವಿಶೇಷವಾದ ಮಹತ್ವವುಳ್ಳ ಕಾರ್ಯವಾಗಿದೆ. ಸಮುದ್ರವು ಎರಡು ಭಾಗಗಳಾಗಿ ಸೀಳಿ, ಗೋಡೆಗಳ ಹಾಗೇ ನಿಂತ್ತಿತ್ತು ಮತ್ತು ಲಕ್ಷಾಂತರ ಜನರು ಅದರ ಮಧ್ಯದಲ್ಲಿ ನಡೆದರು. ಐಗುಪ್ತ್ಯರು ಅವರನ್ನ ಬೆನ್ನಟ್ಟಿಸಿದರು, ದೇವರು ಸಮುದ್ರವನ್ನು ಅವರ ಮೇಲೆ ಬರಮಾಡಿ, ಅವರನ್ನೆಲ್ಲಾ ಕೊಂದನು! ದೇವರು ನಿಮ್ಮ ಪರವಾಗಿ ಯುದ್ಧಮಾಡುವನು ಎನ್ನುವದಕ್ಕೆ ಇದು ಒಂದು ಉದಾಹರಣೆ! ಆತನ ಮಹತ್ವವುಳ್ಳ ಕಾರ್ಯಕ್ಕಾಗಿ ದೇವರನ್ನು ಆರಾಧಿಸುವುದಕ್ಕಿಂತ ಇನ್ನು ಏನೂ ಕೂಡ ನಾವು ಮಾಡುವಂಥಿಲ್ಲ. ನಿಮ್ಮ ಮುಂದೆ, ದೇವರು ನಿಮ್ಮ ಶತ್ರುಗಳ ಮೇಲೆ ಜಯವನ್ನು ಹೊಂದಿರುವದನ್ನು ಮತ್ತು ಸಮುದ್ರದ ಮಧ್ಯದಲ್ಲಿ ನೀವು ನಡೆಯುವುದನ್ನು ನೋಡಲು ಅಥವಾ ಊಹಿಸಲು ಸಾಧ್ಯವೇ?

ಅವರು ಮಾಡಿದ ಮೊದಲನೇ ಕಾರ್ಯ ದೇವರಿಗೆ ಕೀರ್ತನೆಯನ್ನು ಹಾಡಿದರು, ಆತನ ಮಹತ್ವವುಳ್ಳ ಕಾರ್ಯ ಮತ್ತು ಬಲವನ್ನು ಆಧಾರಮಾಡಿಕೊಂಡು ಆತನನ್ನು ಆರಾಧಿಸಿದರು.

ಆತನ ಮಹತ್ಕಾರ್ಯಗಳಿಗಾಗಿ, ದೇವರನ್ನು ಆರಾಧಸುವುದು ನಮ್ಮ ಮೊದಲನೇ ಪ್ರತಿಕ್ರಿಯೆಯಾಗಿರಬೇಕು! ನೀವು ಶಾಲೆಯಲ್ಲಿ ಪರಿಕ್ಷೆ ಬರೆಯುತ್ತಿರುವಾಗ ದೇವರ ಸಹಾಯಕೇಳಿದಾಗ, ಆತನು ಸಹಾಯಕನಾಗಿರುವನು, ಆದರೆ ನೀವು ಸುಮ್ಮನೆ ಕುಳಿತಿರ ಬೇಡಿ. ಆತನಿಗೆ ಕೃತಜ್ಞತೆಯನ್ನು ಹೇಳಿ! ನೀವು ಪರಿಕ್ಷೆಯಲ್ಲಿ ಚೆನ್ನಾಗಿ ಬರೆದಿರುವದನ್ನು ನೀವು ಕಂಡಲ್ಲಿ, ದೇವರನ್ನು ಆರಾಧಿಸಿರಿ! ನಿಮ್ಮ ತಂದೆತಾಯಿ ಜಗಳವಾಡಿತ್ತಿರುವದನ್ನು ನೋಡಿ ಆಯಾಸಗೊಂಡಿದ್ದಾಗ, ಅವರಿಗೆ ಸಮಾಧಾನಪಡಿಸಲು ದೇವರಲ್ಲಿ ಪ್ರಾರ್ಥಿಸಿರಿ, ಅವರು ಜಗಳವಾಡುವದನ್ನು ನಿಲ್ಲಿಸಿದಾಗ, ದೇವರನ್ನು ಆರಾಧಿಸಿರಿ! ಸಭೆಯಲ್ಲಿ ನೀವು ಸಹಾಯಕರಾಗಿರಲು ದೇವರು ನಿಮ್ಮನ್ನು ಕಂಡು ನಿಮಗೆ ಯೋಜನೆಯನ್ನು ಕೊಡುವಹಾಗೆ ದೇವರಲ್ಲಿ ಪ್ರಾರ್ಥಿಸಿದಾಗ, ನಿಮ್ಮ ಬೋಧಕರು ನಿಮ್ಮನ್ನು ಅವರ ಸಹಾಯಕ್ಕೆ ನೇಮಿಸುಕೊಡುವಾಗ ದೇವರನ್ನು ಆರಾಧಿಸಿರಿ. ಶಾಲೆಯಲ್ಲಿ ನಿಮ್ಮನ್ನು ಗೇಲಿ ಮಾಡುತ್ತಿರುವವನ ಕುರಿತಾಗಿ ನೀವು ಪ್ರಾರ್ಥಿಸಿದಾಗ, ಗೇಲಿ ಮಾಡುವವನು ಮತ್ತು ಅವನ ಕುಟುಂಬವು ಬೇರೊಂದು ಊರಿಗೆ ಹೋಗುತ್ತಾರೆ, ಆಗ ದೇವರನ್ನು ಆರಾಧಿಸಿರಿ! ನಾವು ಎದರ್ರೊಳ್ಳುತ್ತಿರುವ ವಿಭಿನ್ನವಾದ ಸಮಸ್ಯೆಗಳಿಗೆ ದೇವರಲ್ಲಿ ಹಲವಾರು ಉತ್ತರಗಳಿರುತ್ತವೆ. ದೇವರು ಎಡಬಿಡದೇ ನಮಗೆ ಸಹಾಯಕನಾಗಿರುತ್ತಾನೆ ಮತ್ತು ನಮ್ಮನ್ನು ಕಾಯುತ್ತಾನೆ, ಇಸ್ರಾಯೇಲ್ಯರ ಹಾಗೆ ನಾವು ಪ್ರತಿಕ್ರಿಯೆ ನೀಡಬೇಕು: ದೇವರನ್ನು ಆರಾಧಿಸಬೇಕು!


## ಮೆಸ್ ಹಾಲ್

### ಒಣ ನೆಲದ ಮೇಲೆ ಸಮುದ್ರವನ್ನು ದಾಟುವುದು

ಅಲ್ಪಾಹಾರ ಕೇಂದ್ರ

ಬ್ಲೂ ಬಣ್ಣದ ಜೆಲಟಿನ್ ಮಾಡಿರಿ ಮತ್ತು ಒಂದು ದೊಡ್ಡ ಪಾತ್ರೆಯಲ್ಲಿ ಅದನ್ನು ಸುರಿದು ಸೆಟ್ ಆಗುವವರೆಗು ಬಿಡಿರಿ. ಇಷ್ಟವಿದ್ದಲ್ಲಿ ಮೀನಿನ ಆಕಾರದಲ್ಲಿರುವ ಬಿಸ್ಕೆಟ್‌ಗಳನ್ನು ಅಥವಾ ಕ್ಯಾಂಡಿಗಳನ್ನು ಜೆಲ್ಲೋನಲ್ಲಿ ಹಾಕಬಹುದು. ಇಸ್ರಾಯೇಲ್ಯರು ಒಣ ನೆಲದ ಮೇಲೆ ಸಮುದ್ರವನ್ನು ದಾಟಿದನ್ನು ತೋರಲು ಮಧ್ಯದ ಭಾಗವನ್ನು ತೆಗೆಯಿರಿ.

ಒಂದನ್ನು ಪ್ರದರ್ಶಿಸಲು ದೊಡ್ಡದಾಗಿ ಮಾಡಿರಿ, ಆದರೆ ಮಕ್ಕಳಿಗಾಗಿ ಬೀಸಾಡಬಹುದಾದ ಸಣ್ಣ ಸಣ್ಣ ಕಪ್ಪುಗಳನ್ನು ಬಳಸಿ, ಅವುಗಳಲ್ಲಿ ಜೆಲ್ಲೋಗಳನ್ನು ಹಾಕಿ ಅವರಿಗೆ ಹಂಚಿರಿ.






### ಫ್ಯಾಕ್ಟಾಯಿಡ್


(ಅಲ್ಪಾಹಾರವನ್ನು ತೆಗೆದುಕೊಳ್ಳುತ್ತಿರುವಾಗ ಅಂತರಿಕ್ಷ ಅನ್ವಯದ ಕುರಿತಾಗಿ ಚರ್ಚಿಸಕೊಳ್ಳಬಹುದು)

### ಸೂಪರ್‌ನೋವಾ


ಕೆಲವು ನಕ್ಷತ್ರಗಳು ತುಂಬ ದೊಡ್ಡದಾಗಿರುತ್ತವೆ ಮತ್ತು ಅದರ ಒಳಗೆ ತುಂಬ ಒತ್ತಡವಿರುತ್ತದೇ, ಒಮ್ಮೊಮ್ಮೆ ಆ ಒತ್ತಡವನ್ನು ತಡೆಯಲಾರದ ಸ್ಥಿತಿಗೆ ಬರುತ್ತವೆ. ಆ ನಕ್ಷತ್ರ ಅನೇಕ ಸಣ್ಣ ಸಣ್ಣ ತುಂಡುಗಳಾಗಿ ವಿಸ್ಫೋಟವಾಗುವವರೆಗು ಅದು ಬೆಳೆಯುತ್ತಿರುವುದು! ವಿಜ್ಞಾನಿಗಳು ಅದನ್ನು ಸುಪರ್‌ನೋವಾ ಎಂದು ಕರೆಯುತ್ತಾರೆ. ಗುಲಾಮಗಿರಿಯಿಂದ ಮತ್ತು ಕೆಂಪು ಸಮುದ್ರವನ್ನು ದಾಟುವದರ ಮೂಲಕ ಮರಣದಿಂದ ಇಸ್ರಾಯೇಲ್ಯರನ್ನು ದೇವರು ಕಾಪಾಡಿ, ಸಹಾಯ ಮಾಡಿದ್ದನ್ನು ಕಂಡು ಹಿಡಿಯಲಾರದಷ್ಟು ಸಂತೋಷವನ್ನು ಮತ್ತು ಕೃತಜ್ಞತೆಯ ಭಾವನೆಗಳನ್ನು ಹೆಚ್ಚಾಗಿ ಅವರ ಹೃದಯಗಳಲ್ಲಿ ತುಂಬಿಸಿ ಕೊಂಡಿರಬಹುದು. ಅವರನ್ನು ರಕ್ಷಿಸಿದ ದೇವರನ್ನು ಆರಾಧಿಸುವವರಾಗಿ ಅವರಲ್ಲಿನ ಸಂತೋಷವೂ ವಿಸ್ಫೋಟವಾಗಿರಬಹುದೆಂದು ನಾನು ಊಹಿಸುತ್ತೇನೆ! ನಮ್ಮ ಜೀವನಗಳಲ್ಲಿ ದೇವರು ಮಾಡಿದ ದೊಡ್ಡ ಕಾರ್ಯಗಳನ್ನು ನೆನೆದು ಮತ್ತು ಆತನು ನಮಗೆ ಸಹಾಯಕನಾಗಿದ್ದದ್ದನ್ನು ನೋಡಿ ಸೂಪರ್‌ನೋವಾ ಹಾಗೆಯೇ ನಾವು ಸಹ ಆರಾಧನೆ ಮಾಡಲು ವಿಸ್ಫೋಟನೆಯಾಗುತ್ತೇವೆ; ದೇವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತಾ, ಆತನು ನಮ್ಮನ್ನು ರಕ್ಷಿಸಿರುವದರಿಂದ ಯಾವಾಗಲೂ ಅತನನ್ನು ಸ್ತುತಿ ಮಾಡುವವರಾಗಿರಬೇಕು!



www.ChildrenAreImportant.com – Children's ministry resources, Sunday School, and Vacation Bible School (VBS) curriculum for churches and teachers. Kannada








ಕ್ಯಾಡೆಟ್ ತರಗತಿ

ಇಂಜಿನೀರಿಂಗ್

## ದೇವರನ್ನು ಆರಾಧಿಸು!

ಮೊತ್ತೊಂದು ಬಾರಿ ಕಥೆಯನ್ನು ಪುನಃರಾವೃತ ಮಾಡಿಕೊಳ್ಳಿರಿ, ಚಿಹ್ನೆಯ ಭಾಷೆಯಲ್ಲಿ ಈ ಪದಗಳನ್ನು ಬೋಧಿಸಿರಿ. ಆದನಂತರ ವಿದ್ಯಾರ್ಥಿ ಪುಸ್ತಕಗಳನ್ನು ಹಂಚಿರಿ ಮತ್ತು ಪಜಿಲ್‌ಗಳನ್ನು ಮಾಡುತ್ತಿರುವಾಗ ಅವರೊಂದಿಗೆ ಸಹಾಯಕರೊಬ್ಬರನ್ನು ಇಟ್ಟುಕೊಳ್ಳಿರಿ.

### ಹಾಡು



ನಿಮ್ಮ ಬಲ ಕೈಯನ್ನು ಎಡ ಅಂಗೈಯಿನ ಮೇಲೆ ಹಿಂದೆ ಮುಂದೆ ಆಡಿಸಿ.

### ಜೀವಿಸು




ಹೆಬ್ಬೆರಳನ್ನು ಮತ್ತು ತೋರ್ಬೆರಳನ್ನು ತೋರಿಸದಂಥೆ ಇರಿಸಿ. ಆ ಕೈಗಳನ್ನು ಮೇಲಕ್ಕೆ ತೋರಿಸಿರಿ.

### ಉತ್ಸವ

ನಿಮ್ಮ ಬಲ ತೋರು ಬೆರಳನ್ನು ಮತ್ತು ಹೆಬ್ಬೆರಳನ್ನು ಮುಟ್ಟಿಸಿ, ಸಣ್ಣ ವೃತ್ತಗಳನ್ನು ಮಾಡಿ.





## ಕೆಂಪು ಸಮುದ್ರವನ್ನು ದಾಟುವುದು


ಬೇಕಾದವುಗಳು :

ಬಿಳಿಯ ಕಾಗದ ಮೇಲೆ ವಚನವನ್ನು ಅಥವಾ ಸಮುದ್ರದ ಚಿತ್ರವನ್ನು ಮುದ್ರಿಸಿರಿ. ನೀಲಿ ಕ್ರೆಯಾನ್, ಬಣ್ಣದ ಪೆನ್ಸಿಲ್‌ಗಳು, ಮರ್ಕರ್ ಅಥವಾ ಬಣ್ಣ.


ಸೂಚನೆಗಳು :

1. ನೀರಿನ ಭಾಗಗಳನ್ನು ಮತ್ತು ಒಣ ನೆಲ ಭಾಗಗಳಲ್ಲಿ ಬಣ್ಣ ಹಚ್ಚಿರಿ.
2. ಚುಕ್ಕಿಗಳಿರುವ ಗೆರೆಯ ಬಳಿ ಕತ್ತರಿಸಿ, ಒಣ ನೆಲದ ಬಳಿ ನಿಲ್ಲಿಸಿ.
3. ಕತ್ತರಿಸಿದ ಭಾಗಗಳನ್ನು ಗಟ್ಟಿಯಾಗಿ ಕಡಿ, ಪೆನ್ಸಿಲ್, ಅಥವಾ ಕ್ರೆಯಾನಿನ ಸುತ್ತಲು ಸುತ್ತಿ.

ಇಷ್ಟವಿದ್ದರೆ: ಸಣ್ಣ ಕಲ್ಲುಗಳನ್ನು ಒಣ ನೆಲವನ್ನು ಸೂಚಿಸುವಂಥೆ ಅಂಟಿಸಿರಿ.



ಆಟಗಳಿಗೋಸ್ಕರ ಮತ್ತು ಮುಕ್ತಾಯ ಮಾಡುವದಕ್ಕೋಸ್ಕರ ಸೇತುವೆಯ ಹತ್ತಿರಕ್ಕೆ ಬರುವದು.





## ಗಡಿಬಿಡಿಯಾದ ಮಾರ್ಷ್‌ಮ್ಯಾಲೌ ಡ್ರಾಪ್

ಪ್ರತಿ ತಂಡದವರು ಅವರ ತಂಡದಲ್ಲಿರುವ ಇನ್ನೊಬ್ಬರ ಹಣೆಯಮೇಲಿರುವ ಕಪ್ಪಿನಲೊಗೆ ಎಷ್ಟು ಮಾರ್ಷ್‌ಮ್ಯಾಲೌಗಳನ್ನ ಸೇರಿಸಬಹುದೋ ಎನ್ನುವುದೇ ಈ ಆಟದ ಗುರಿಯಾಗಿದೆ. ಪ್ರೇಕ್ಷಕರನ್ನು ಸಂತೋಷ ಪಡಿಸಲು ಈ ಆಟವನ್ನು ಇನ್ನೂ ವಿನೋದಾತ್ಮಕವಾಗಿ ಆಡಬಹುದು.

ಒಂದು ಕುರ್ಚಿ ಅಥವಾ ಏಣಿಯನ್ನು ಇಬ್ಬರು ವಿದ್ಯಾರ್ಥಿಗಳು ಚೆನ್ನಾಗಿ ಗಟ್ಟಿಯಾಗಿ ಹಿಡಿದುಕೊಳ್ಳುವಂಥೆ ನಿಲ್ಲಿಸಿರಿ. ತಂಡದಿಂದ 5 ಮಂದಿ ಮಕ್ಕಳು ಭಾಗವಹಿಸುವರು. ಅವರನ್ನು ಕಾಯುವದಕ್ಕಾಗಿ ಮತ್ತು ಸಂರಕ್ಷಿಸಲು ಯಾರಾದರೊಬ್ಬರನ್ನು ಅಲ್ಲಿ ನಿಲ್ಲಿಸಿರಿ. ಕೇವಲ ಒಂದು ತಂಡದವರು ಮಾತ್ರವೇ ಆಟವಾಡುವರು! ಇಬ್ಬರು ಮಕ್ಕಳು (ಅಥವಾ ಹಿರಿಯ ನಾಯಕರು) ನೆಲದ ಮೇಲೆ ಒಬ್ಬರ ತಲೆಯನ್ನು ಒಬ್ಬರು ಅಂಟಿಸಿಕೊಂಡು, ತಮ್ಮ ಮುಖಗಳನ್ನು ಮೇಲೆ ನೋಡುತ್ತಿರುವಂಥೆ ಮಲಗುವರು. ಮಕ್ಕಳ ಬಟ್ಟೆಗಳು ಹಾಳಾಗದಂಥೆ ಇರುವದಕ್ಕಾಗಿ ಗಾರ್ಬೇಜ್ ಬ್ಯಾಗುಗಳನ್ನು ಅಂಗಿಯಂಥೆ ಮಾಡಿ ಅವರಿಗೆ ಧರಿಸಿರಿ ಮತ್ತು ಅವರ ತಲೆಗೆ ಟೋಪಿಗಳನ್ನು ಇಟ್ಟುಕೊಂಡರೇ ಒಳ್ಳೆಯದು. ಈ ಇಬ್ಬರು ಕಣ್ಣುಗಳಲ್ಲಿ ಯಾವ ಧೂಳಿ ಹೋಗದಂಥೆ ಕನ್ನಡಕಗಳನ್ನು ಧರಿಸಿಕೊಂಡರೆ ಇನ್ನೂ ಒಳ್ಳೇಯದು. ಮಾರ್ಷ್‌ಮ್ಯಾಲೋಗಳನ್ನು ಮತ್ತು ಚಾಕ್ಲೆಟ್ ಸಿರಪನ್ನು ಸಮಭಾಗಗಳಾಗಿ ಎರಡು ಬಟ್ಟಲುಗಳಲ್ಲಿ ತೆಗೆದುಕೊಳ್ಳಿರಿ.

ಒಂದು ಮಗುವು ಮಾರ್ಷ್‌ಮ್ಯಾಲೋಗಳನ್ನು ಒಂದು ಬಟ್ಟಲಿನಲ್ಲಿ ತೆಗೆದುಕೊಂಡು ಏಣಿಯಮೇಲೆ ಹತ್ತುವನು. ಇಬ್ಬರು ಮಕ್ಕಳು ಏಣಿಯನ್ನು ಹಿಡಿದುಕೊಳ್ಳುವರು ಮತ್ತಿಬ್ಬರು ನೆಲದ ಮೇಲೆ ಮಲಗುವರು, ಅವರ ಹಣೆಯಮೇಲೆ ಬಟ್ಟಲುಗಳನ್ನಿಡಬೇಕು. ನಾಯಕನು "ಹೋಗು" ಎಂದಾಗ, ಏಣಿಯ ಮೇಲಿರುವ ಮಗುವು ಮಾರ್ಷ್‌ಮ್ಯಾಲೋಗಳನ್ನು ಚಾಕಲೇಟ್ ಸಿರಪ್ಪಿನಲ್ಲಿ ಅದ್ದಿ, ತನಗೆ ಕೊಡಲ್ಪಟ್ಟಿರುವ 60 ಸೆಕೆಂಡ್‌ಗಳ ಸಮಯದಲ್ಲಿ ಬೇಗ ಬೇಗ ಹಣೆಯಮೇಲಿರುವ ಬಟ್ಟಲಿನೊಳಗೆ ಹಾಕಬೇಕು. ಕೊನೆಯದಾಗಿ, ಆ ಬಟ್ಟಲಿನಲ್ಲಿರುವ ಮಾರ್ಷ್‌ಮ್ಯಾಲೋಗಳನ್ನು ಎಣಿಸಿರಿ. ಅವರು ತಿಂದ ಮಾರ್ಷ್‌ಮ್ಯಾಲೋಗಳು ಲೆಕ್ಕಕ್ಕೆ ಬರುವುದಿಲ್ಲ! ಒಂದು ತಂಡದವರು ಆಡಿದ ನಂತರ ಮತ್ತೊಂದು ತಂಡದವರು ಆಟವನ್ನು ಮುಂದುವರಿಸುವರು. ಯಾರು ಹೆಚ್ಚಿನ ಮಾರ್ಷ್‌ಮ್ಯಾಲೋಗಳನ್ನು ಗಳಿಸುವರೋ ಅವರೇ ಆ ಆಟದಲ್ಲಿ ಗೆಲ್ಲುವರು!



## ಕೇಕ್ ರಿಲೇ

ಪ್ರತಿ ತಂಡದಿಂದ ಇಬ್ಬರು ಮಕ್ಕಳು ಎಷ್ಟು ಸಾಧ್ಯವಾದರೇ ಅಷ್ಟು ಶೀಘ್ರವಾಗಿ ಕೇಕನ್ನು ಅಲಂಕರಿಸುವುದೇ ಈ ಆಟದ ಗುರಿಯಾಗಿರುತ್ತದೆ, ಇದು ಪ್ರಕ್ಷಕರಿಗೆ ನೋಡಲು ತುಂಬಾ ತಮಾಷೆಯಾಗಿ ಕಾಣುವದು. ಮುಂಚಿತವಾಗಿಯೇ ಎರಡು ಕೇಕುಗಳನ್ನ ಅಲಂಕರಿಸದೇ ಸಿದ್ಧಗೊಳಿಸಿರಿ. ಎಪ್ರೆನ್, ಕ್ರೀಮ್, ಕೆಲವು ಚಾಕುಗಳು ಮತ್ತು ಅಲಂಕಾರ ಪದಾರ್ಥಗಳನ್ನು ಮಕ್ಕಳಿಗೆ ಕೊಡಿರಿ. ನಾಯಕನು "ಹೋಗು" ಎಂದ ಕೂಡಲೆ, ಮಕ್ಕಳು ಎಪ್ರೆನ್ ಧರಿಸಿ, ಕೇಕ್‌ಗೆ ಕ್ರೀಮ್ ಹಾಕಿ, ಅದನ್ನು ಸುಂದರವಾಗಿ ಅಲಂಕರಿಸಿ ಮತ್ತು ಅದರಲ್ಲಿ ಒಂದು ತುಂಡನ್ನು ಅವರು ತಿನ್ನಬೇಕು. ವೇಗವಾಗಿ ಈ ಕಾರ್ಯವನ್ನು ಮುಗಿಸುವ ತಂಡವು ವಿಜೇತರಾಗುವರು. ವಿಬಿಎಸ್ ಕೊನೆಯ ದಿನವಾದರಿಂದ ಹೆಚ್ಚಿನ ಕೇಕನ್ನು ನೀವು ತರಿಸಿ, ಅಲ್ಲಿರುವ ಎಲ್ಲಾ ಮಕ್ಕಳಿಗೆ ಹಂಚಿರಿ.



www.ChildrenAreImportant.com – Children's ministry resources, Sunday School, and Vacation Bible School (VBS) curriculum for churches and teachers. Kannada












www.ChildrenAreImportant.com – Children's ministry resources, Sunday School, and Vacation Bible School (VBS) curriculum for churches and teachers. Kannada





“ಆಗ, ಯಾವನನ್ನು ಕಳುಹಿಸಲಿ, ಯಾವನು
ನಮಗೋಸ್ಕರ ಹೋಗುವನು ಎಂಬ ಕರ್ತನ
ನುಡಿಯನ್ನು ಕೇಳಿ, ಇಗೋ, ನಾನಿದ್ದೇನೆ, ನನ್ನನ್ನು
ಕಳುಹಿಸು ಅಂದೆನು.” – ಯೆಶಾ.6:8




“ಆಗ, ಯಾವನನ್ನು ಕಳುಹಿಸಲಿ, ಯಾವನು
ನಮಗೋಸ್ಕರ ಹೋಗುವನು ಎಂಬ ಕರ್ತನ
ನುಡಿಯನ್ನು ಕೇಳಿ, ಇಗೋ, ನಾನಿದ್ದೇನೆ, ನನ್ನನ್ನು
ಕಳುಹಿಸು ಅಂದೆನು.” – ಯೆಶಾ.6:8












www.ChildrenAreImportant.com – Children's ministry resources, Sunday School, and Vacation Bible School (VBS) curriculum for churches and teachers. Kannada

“ಆತನ ಶಕ್ತಿ

ಪ್ರದರ್ಶಕವಾದ

ಆಕಾಶಮಂಡಲದಲ್ಲಿ

ಆತನನ್ನು

ಸ್ತುತಿಸಿರಿ.”


ಕೀರ್ತ 150:1

ಅಂತರಿಕ್ಷದ ನೌಕೆಯನ್ನು ಏರಲು
ನೀವು ಆಹ್ವಾನಿಸಲ್ಪಟ್ಟಿದ್ದೀರಿ.

ಮಕ್ಕಳೇ ಚೆನ್ನಾಗಿದ್ದೀರಾ!




ಒಂದು ಖಗೋಳ ಸಾಹಸ, ದೇವರ ದೊಡ್ಡತನವನ್ನು ಕಂಡುಕೊಳ್ಳುವ ಸ್ಥಳ! ಅಲ್ಲಿ ನಿಮಗೆ ಅಲ್ಪಾಹಾರ, ಗೊಂಬೆಗಳು, ಚಟುವಟಿಕೆಗಳು, ಹಾಡುಗಳು, ರಾಕೆಟ್‌ಗಳು ಮತ್ತು ಟನ್ನುಗಳಷ್ಟು ವಿನೋದವು ಇರುತ್ತದೆ. ಬನ್ನಿರಿ ಮತ್ತು ನಮ್ಮಲ್ಲಿ ಸೇರಿರಿ!




# ಎಲ್ಲಿ:

# ಯಾವಾಗ:

ಅಂತರಿಕ್ಷದ ನೌಕೆಯನ್ನು ಏರಲು
ನೀವು ಆಹ್ವಾನಿಸಲ್ಪಟ್ಟಿದ್ದೀರಿ.

# ಮಕ್ಕಳೇ ಚೆನ್ನಾಗಿದ್ದೀರಾ!




ಒಂದು ಖಗೋಳ ಸಾಹಸ, ದೇವರ ದೊಡ್ಡತನವನ್ನು ಕಂಡುಕೊಳ್ಳುವ ಸ್ಥಳ! ಅಲ್ಲಿ ನಿಮಗೆ ಅಲ್ಪಾಹಾರ, ಗೊಂಬೆಗಳು, ಚಟುವಟಿಕೆಗಳು, ಹಾಡುಗಳು, ರಾಕೆಟ್‌ಗಳು ಮತ್ತು ಟನ್ನುಗಳಷ್ಟು ವಿನೋದವು ಇರುತ್ತದೆ. ಬನ್ನಿರಿ ಮತ್ತು ನಮ್ಮಲ್ಲಿ ಸೇರಿರಿ!

**ಎಲ್ಲಿ :**

**ಯಾವಾಗ :**





# ಪ್ರಶಸ್ತಿ ಪಡೆಯುವವರು:

[ ________________________________ ]


ವೆಕೇಷನ್ ಬೈಬಲ್ ಸ್ಕೂಲ್ "ಗೆಲಾಕ್ಸಿ ಎಕ್ಸ್‌ಪ್ರೆಸ್" ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವವರಿಗೆ

ಪ್ರಶಸ್ತಿ ಕೊಡುವವರು: ________________________



# ಆನ್‌ಲೈನ್, ಶೀಘ್ರವಾಗಿ!

**ಉಚಿತವಾಗಿ ಸಂಡೇ ಸ್ಕೂಲ್ ಮತ್ತು ವಿಬಿಎಸ್ ಕಾರ್ಯಕ್ರಮಗಳನ್ನು ಸಂಪೂರ್ಣವಾಗಿ ಡೌನ್‌ಲೋಡ್ ಮಾಡಿಕೊಳ್ಳಿರಿ.**



- ಉಪಾಧ್ಯಾಯರ ಪುಸ್ತಕಗಳು
- ವಿದ್ಯಾರ್ಥಿ ಪುಸ್ತಕಗಳು
- ಸಂಗೀತ (ಮ್ಯೂಜಿಕ್)
- ವೀಡಿಯೋಗಳು
- ಸ್ಥಳೀಯ ಕರಪತ್ರಗಳು (ವಿಬಿಎಸ್)
- ಪೋಸ್ಟರ್‌ಗಳು (ಪ್ರಕಟನೆ ಪತ್ರಗಳು)
- ವೇದಿಕೆಯ ಬ್ಯಾಕ್ ಗ್ರೌಂಡ್




ಮೇಲೆ ತಿಳಿಸಲ್ಪಟ್ಟ ಪ್ರತಿಯೊಂದು ಡೌನ್‌ಲೋಡ್ ಮಾಡಿಕೊಳ್ಳುವದಕ್ಕೆ ಆನ್‌ಲೈನ್‌ನಲ್ಲಿ ಲಭ್ಯವಾಗಿರುತ್ತವೆ.

ನಿಮ್ಮ ಕಾರ್ಯಕ್ರಮವನ್ನು ಆಕರ್ಷಣೀಯವಾಗಿ ಮಾಡಿಕೊಳ್ಳುವದಕ್ಕೆ ಸಲಹೆಗಳು ಮತ್ತು ಕಾರ್ಯಕ್ರಮವನ್ನು ಹೇಗೆ ನಡೆಸಬೇಕು ಎನ್ನುವದರ ಮೇಲೆ ನಿಯಮಗಳನ್ನು ಕೂಡಾ ಕಂಡುಕೊಳ್ಳಿರಿ!

**ಸಂಪೂರ್ಣ ಕಾರ್ಯಕ್ರಮವನ್ನು ಉಚಿತವಾಗಿ ಡೌನ್‌ಲೋಡ್ ಮಾಡಿಕೊಳ್ಳಿರಿ!**

ನಮ್ಮ ಈ ಮಾಹಿತಿಯನ್ನು ಡೌನ್‌ಲೋಡ್ ಮಾಡಿಕೊಳ್ಳುವದಕ್ಕೂ, ಉಪಯೋಗಿಸಿಕೊಳ್ಳುವದಕ್ಕೂ, ಮುದ್ರಿಸಿಕೊಳ್ಳುವದಕ್ಕೂ ಯಾವ ನಿರ್ಬಂಧಗಳಿಲ್ಲದೇ ಎಲ್ಲಾ ಸಂಸ್ಥೆಗಳಿಗೆ ಮತ್ತು ಸಭೆಗಳಿಗೆ ಹಂಚುವದಕ್ಕೂ ಉಚಿತವಾಗಿ ಕೊಡಲ್ಪಟ್ಟಿದೆ.

**www.ChildrenAreImportant.com**

ಮಕ್ಕಳೇ ಪ್ರಮುಖರು



www.ChildrenAreImportant.com – Children's ministry resources, Sunday School, and Vacation Bible School (VBS) curriculum for churches and teachers. Kannada




## ಕಿರಿಯ

4 ರಿಂದ 6 ವರ್ಷಗಳ ವಯಸ್ಸಿನವರಿಗೆ, ಓದುವದಿಲ್ಲ

## ಮಧ್ಯಮ

7 ರಿಂದ 9 ವರ್ಷಗಳ ವಯಸ್ಸಿನವರಿಗೆ, ಸ್ವಲ್ಪ ಮಟ್ಟಿಗೆ ಓದಬಹುದು

## ಹಿರಿಯ

10 ರಿಂದ 12 ವರ್ಷಗಳ ವಯಸ್ಸಿನವರಿಗೆ, ಓದುವದು ಮತ್ತು ಕೆಲವು ಕಷ್ಟತರವಾದ ಪಜಿಲ್‌ಗಳು




ಸಂಪೂರ್ಣವಾದ ಈ ಕಾರ್ಯಕ್ರಮದೊಂದಿಗೆ ನಿಮ್ಮ ತಂಡವನ್ನು ಸಿದ್ಧಪಡಿಸಿಕೊಳ್ಳಿರಿ ಮತ್ತು ನಿಮ್ಮ ವಿಬಿಎಸ್ ಕಾರ್ಯಕ್ರಮವನ್ನು ಖಗೋಳ ಸಾಹಸದ ಕಾರ್ಯವನ್ನಾಗಿ ಮಾಡಿಕೊಳ್ಳಿರಿ! ಈ ಪುಟದಲ್ಲಿಟ್ಟಿರುವ ಎಲ್ಲಾ ಸಂಪನ್ಮೂಲಗಳು ಆನ್‌ಲೈನ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳುವದಕ್ಕೆ ಉಚಿತವಾಗಿ ಕೊಡಲ್ಪಟ್ಟಿವೆ. ನಿಮಗೆ ಇಷ್ಟಕರವಾಗಿ ನಿಮ್ಮದೇ ಆದ ಸ್ವಂತ ಆಲೋಚನೆಯಲ್ಲಿ ಇವುಗಳನ್ನು ತಯಾರಿಸಿಕೊಳ್ಳುವದಕ್ಕೆ ಲೋಗೋಗಳನ್ನು ಮತ್ತು ಗ್ರಾಫಿಕ್ ಡಿಜೈನ್‌ಗಳನ್ನು ಆನ್‌ಲೈನ್‌ನಲ್ಲಿ ಕಂಡುಕೊಳ್ಳಿರಿ. ನಿಮ್ಮ ಮಕ್ಕಳು ಸಂತೋಷದಿಂದ ಯೇಸುವಿನ ಕುರಿತಾಗಿ ಕಲಿತುಕೊಳ್ಳುವದಕ್ಕೆ ಈ ರೀತಿಯಾದ ವಿನೋದವನ್ನು ಹಂಚಿರಿ ಮತ್ತು ನಿಮ್ಮ ಉಪಾಧ್ಯಾಯರು ಯಾವಾಗಲೂ ಉತ್ಸಾಹದಿಂದ ಇರುವದಕ್ಕೆ ನೋಡಿಕೊಳ್ಳಿರಿ!

## ವಿದ್ಯಾರ್ಥಿ ಪುಸ್ತಕಗಳು

ವಿದ್ಯಾರ್ಥಿಗಳು ಪ್ರತೀ ದಿನ ನಿಮ್ಮ ವಿಬಿಎಸ್‌ನಲ್ಲಿ ಪಾಠಗಳನ್ನು ನೋಡಿಕೊಳ್ಳುತ್ತಿರುವಾಗ ಪಜಿಲ್‌ಗಳನ್ನು ಮತ್ತು ಚಟುವಟಿಕೆಗಳನ್ನು ಮಾಡುವದರಲ್ಲಿ ತುಂಬಾ ಸಂತೋಷಗೊಳ್ಳುವರು.


# www.ChildrenAreImportant.com/galaxy

ನೀವು ದೊಡ್ಡ ಮೊತ್ತದಲ್ಲಿ ಆರ್ಡರ್ ಮಾಡಬೇಂದು ಇಷ್ಟಪಟ್ಟರೇ (100ಕ್ಕಿಂತ ಹೆಚ್ಚಿನ ಸಭೆಗಳಿಗೆ), ಇಂಗ್ಲೀಷ್ ಅಥವಾ ಹಿಂದಿ ಭಾಷೆಗಳ ಸಂಪನ್ಮೂಲಗಳಿಗಾಗಿ ಈಗಲೇ ನಮ್ಮನ್ನು ಸಂಪರ್ಕಿಸಿರಿ. ನಾವು ಮೆಕ್ಸಿಕೋನಲ್ಲಿ ಇರುತ್ತೇವೆ: *01-592-924-9041*
*info@ChildrenAreImportant.com*

ಮಕ್ಕಳೇ ಪ್ರಮುಖರು

## ನಾಯಕನ ಕರಪತ್ರಗಳು

ಅನುಕೂಲತೆಗಾಗಿ, ವಿಬಿಎಸ್‌ಗೆ ಸಂಬಂಧಿತವಾದ ಪ್ರತ್ಯೇಕವಾದ ಮಾಹಿತಿಯನ್ನು ನಾಯಕರಿಗೆ ಹಂಚುವದಕ್ಕೆ ವಿವಿಧ ಕರಪತ್ರಗಳಲ್ಲಿ ಹಾಕಲಾಗಿದೆ. ಈ ಮಾಹಿತಿಯು ನಿರ್ದೇಶಕರ ಕೈಪಿಡಿಯಲ್ಲಿಯೂ ನಿಮಗೆ ಸಿಕ್ಕುತ್ತದೆ.




## ನಿರ್ದೇಶಕರ ಕೈಪಿಡಿ

ಈ ಒಂದು ಪುಸ್ತಕದಲ್ಲಿ ಗೆಲಾಕ್ಸಿ ಎಕ್ಸ್‌ಪ್ರೆಸ್ ವಿಬಿಎಸ್ ಕುರಿತಾದ ಎಲ್ಲಾ ಮಾಹಿತಿಯನ್ನು ಕಂಡುಕೊಳ್ಳಿರಿ! ಗೆಲಾಕ್ಸಿ ಎಕ್ಸ್‌ಪ್ರೆಸ್ ಕಾಲಾನುಕ್ರಮ, ವಾಲೆಂಟರಿಸ್, ಪಾಠಗಳು ಮತ್ತು ಇನ್ನೂ ಹೆಚ್ಚಿನ ಸಲಹೆಗಳು.







www.ChildrenAreImportant.com – Children's ministry resources, Sunday School, and Vacation Bible School (VBS) curriculum for churches and teachers. Kannada




## ಗ್ರಹದ ಪೋಸ್ಟರ ಸೆಟ್


ವಿಬಿಎಸ್ ಕಾರ್ಯಕ್ರಮದ 2ನೇ ದಿನಕ್ಕಾಗಿ, ನಮ್ಮ ಗೆಲಾಕ್ಸಿನಲ್ಲಿರುವ ನಕ್ಷತ್ರಗಳ ಮತ್ತು ಗ್ರಹಗಳ ಅದ್ಭುತವಾದ ಸೃಜ್‌ಗಳನ್ನು ತೋರಿಸುವದಕ್ಕೆ ಈ ಪೋಸ್ಟರ್‌ಗಳನ್ನು ಉಪಯೋಗಿಸಿರಿ.




## ಆಹ್ವಾನಿಸುವ ಪೋಸ್ಟರ್

ನಿಮ್ಮ ಕಾರ್ಯಕ್ರಮಕ್ಕೆ ಅನೇಕಮಂದಿ ಮಕ್ಕಳನ್ನು ಆಹ್ವಾನಿಸಲು ನಿಮ್ಮ ಸುತ್ತಮುತ್ತಲಿನ ಪ್ರಾಂತ್ಯಗಳಲ್ಲಿ ಈ ಪೋಸ್ಟರನ್ನು ಅಂಟಿಸಿರಿ.






## ಸಂಗೀತದ ಸೀಡಿ ಮತ್ತು ಡೀವಿಡಿ

ಗೆಲಾಕ್ಸಿ ಎಕ್ಸ್‌ಪ್ರೆಸ್ ವಿಬಿಎಸ್‌ಗಾಗಿ ನಮ್ಮ ವಾಸ್ತವಿಕವಾದ ಸಂಗೀತ ಮತ್ತು ನೃತ್ಯಗಳೊಂದಿಗೆ ನಿಮ್ಮ ವಿಬಿಎಸ್‌ನ್ನು ಆಸಕ್ತದಾಯಕವಾಗಿ ಮಾಡಿಕೊಳ್ಳಿರಿ! ಆನ್‌ಲೈನ್‌ನಲ್ಲಿ ಹಾಡುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಿರಿ ಮತ್ತು ಯೂ ಟ್ಯೂಬ್‌ನಲ್ಲಿ ವೀಡಿಯೋಗಳನ್ನು ನೋಡಿರಿ.




## ಆಹ್ವಾನಿಸುವ ಕರ ಪತ್ರ

ಈ ಕರಪತ್ರಗಳೊಂದಿಗೆ ನಿಮ್ಮ ಕಾರ್ಯಕ್ರಮಕ್ಕೆ ಮಕ್ಕಳನ್ನು ಆಹ್ವಾನಿಸುತ್ತಿರುವಾಗ ಅವರಿಗೆ ಇನ್ನೂ ಹೆಚ್ಚಾಗಿ ಯೇಸುವಿನ ಬಗ್ಗೆ ಹೇಳಿರಿ.




## ಪ್ರಮಾಣ ಪತ್ರ

ಈ ಪ್ರಮಾಣ ಪತ್ರದೊಂದಿಗೆ ನಿಮ್ಮ ಕಾರ್ಯಕ್ರಮಕ್ಕೆ ಹಾಜರಾಗಿರುವ ಮಕ್ಕಳನ್ನು ಅಭಿನಂದಿಸಿರಿ.

## ಗೊಂಬೆಗಳು


ಮಕ್ಕಳು ಹೆಚ್ಚಾಗಿ ಗೊಂಬೆಗಳನ್ನು ಪ್ರೀತಿಸುತ್ತಾರೆ! ಗೆಲಾಕ್ಸಿ ಎಕ್ಸ್‌ಪ್ರೆಸ್ 5 ಗೊಂಬೆಗಳೊಂದಿಗೆ ಕೂಡಿದ ಒಂದು ಜೊತೆ ಬರುತ್ತದೆ, ದಿನಕ್ಕೆ ಒಂದನ್ನು ಉಪಯೋಗಿಸಬೇಕು. ಅಷ್ಟೇ ಅಲ್ಲದೇ ಅನೇಕವಾದ ಮಾದರಿಗಳು ಅದರಲ್ಲಿ ಲಭ್ಯವಿರುವವು. ಪ್ರತೀ ದಿನ ಮಕ್ಕಳು ಪಾಠಗಳನ್ನು ಅಭ್ಯಾಸ ಮಾಡುತ್ತಿರುವಾಗ ಅವರಿಗೆ ಸಹಾಯಕ್ಕಾಗಿ ಸ್ಥಳೀಯದಲ್ಲಿ ಸಿಗುವ ಸಿದ್ಧಗೊಳಿಸಿರುವ ವಸ್ತುಗಳನ್ನೇ ಉಪಯೋಗಿಸಿರಿ. ಪ್ರತಿಯೊಬ್ಬ ಮಗುವಿಗೆ ಕಾಗದದ 1 ತುಂಡು, ಅಂಟು ಮತ್ತು ಬಣ್ಣ ಹಾಕಲು ಕೆಲವು ವಸ್ತುಗಳನ್ನು ಉಪಯೋಗಿಸುವಂಥ ಪ್ರತೀ ಗೊಂಬೆ ಡೀಜೈನ್ ಮಾಡಲಾಗಿರುತ್ತದೆ.

## ಸ್ಟೇಜ್ ಬ್ಯಾಕ್‌ಗ್ರೌಂಡ್

ನಿಮ್ಮ ವೇದಿಕೆಯನ್ನು ಈ ಬ್ಯಾಕ್‌ಗ್ರೌಂಡ್‌ನೊಂದಿಗೆ ಮಕ್ಕಳ ಊಹೆಗಳನ್ನು ಪ್ರೇರೇಪಿಸಿರಿ. ಪಿಡಿಎಫ್‌ನ್ನು ಡೌನ್‌ಲೋಡ್ ಮಾಡಿಕೊಳ್ಳಿರಿ ಮತ್ತು ಮುದ್ರಿಸಿದಂಥ ಬ್ಯಾನರ್‌ಗಾಗಿ ಆರ್ಡರ್ ಮಾಡಿರಿ. ಅಳತೆಗಳು : 4/2 ಮೀ. ಅಥವಾ 3/1.5 ಮೀ.







www.ChildrenAreImportant.com – Children's ministry resources, Sunday School, and Vacation Bible School (VBS) curriculum for churches and teachers. Kannada

# ಈ ವಿಬಿಎಸ್ ಕಾರ್ಯಕ್ರಮವನ್ನು ನೀವು ಇಷ್ಟಪಡುತ್ತೀರಾ?

ನಮ್ಮ ಈ ಹೊಸ ಸಂಡೇ ಸ್ಕೂಲನ್ನು ಒಮ್ಮೆ ಪ್ರಯತ್ನಿಸಿರಿ :




ಯೇಸುವಿನ ಸಾಮ್ಯಗಳಲ್ಲಿ ಅಡಗಿರುವ ಅರ್ಥವನ್ನು ಕಂಡುಹಿಡಿಯಲು ಮಕ್ಕಳು ತಮ್ಮ ಡಿಕೋಡರನ್ನು ತಿಳಿದುಕೊಂಡು, ಅನೇಕವಾದ ರಹಸ್ಯ ಸಂದೇಶಗಳನ್ನು ಗ್ರಹಿಸುವರು. ಮತ್ತಾಯನ ಪುಸ್ತಕವನ್ನು ಸಂಪೂರ್ಣವಾಗಿ ಓದುವಂಥ ನಿಮ್ಮ ಯವ್ವನಸ್ಥರಿಗೆ ಸವಾಲನ್ನು ಬೀಸಿರಿ. ನೀವು ಅನೇಕವಾದ ಜೀವನಗಳನ್ನು ಮಾರ್ಪಾಟು ಮಾಡುವದಕ್ಕೆ ಇಲ್ಲಿದ್ದೀರಿ; ನಿಮಗೆ ಸಹಾಯ ಮಾಡುವದಕ್ಕೆ ನಾವಿಲ್ಲಿದ್ದೇವೆ.



ಈ ಸಾಧನಗಳನ್ನೆಲ್ಲಾ ನೀವು ಯಾವ ನಿರ್ಬಂಧನಗಳಿಲ್ಲದೇ ಉಚಿತವಾಗಿ ಡೌನ್‌ಲೋಡ್ ಮಾಡಿಕೊಳ್ಳಬಹುದು, ಉಚಿತವಾಗಿ ಮುದ್ರಣೆ ಮಾಡಿಕೊಳ್ಳಬಹುದು ಮತ್ತು ಎಲ್ಲಾ ಸಭೆಗಳಿಗೆ, ಸಂಸ್ಥೆಗಳಿಗೆ ಹಂಚಬಹುದು.

**www.ChildrenAreImportant.com/Detectives**

Manual Galaxy Kannada

13602


www.ChildrenAreImportant.com
info@childrenareimportant.com
We are located in Mexico.
DK Editorial Pro-Visión A.C.


ಮಕ್ಕಳೇ ಪ್ರಮುಖರು